SRI RAMAKRISHNA MATH

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ




₹ 14

ಮೇ–2015

TRAVEL PAGE

ಪ್ರವಾಸ 2015

ಹೋಟೆಲ್ ರೂಂ ಹಾಗೂ ನಮ್ಮ ಊಟೋಪಚಾರದೊಂದಿಗೆ



ಚಾರೋಧಾಮ್ - ಕಾಶಿ - ಗಯಾ : 19/26 ದಿನಗಳು

May 08

ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ಕೇದಾರ, ತ್ರಿಯುಗಿ (Optional), ಮಾನಾ, ವ್ಯಾಸ ಗುಹ, ಗಣೇಶ ಗುಹ, ಕೇಶವ ಪ್ರಯಾಗ್, ಬದರಿ, ಋಷಿಕೇಶ್, ನವದೆಹಲಿ, ಅಲಹಾಬಾದ್, ಅಯೋಧ್ಯಾ, ಸಾರಾನಾಥ್, ಗಯಾ, ಬುದ್ದಗಯಾ, ಕಾಶಿ

ಕಾಶಿ ಗಯಾ ಪ್ರಯಾಗ್ : 12 ದಿನಗಳು

May 22

ಅಲಹಾಬಾದ್, ಅಯೋಧ್ಯಾ, ಸಾರಾನಾಥ್, ಗಯಾ, ಬುದ್ದಗಯಾ, ಕಾಶಿ

ಅಮರನಾಥ್ - ವೈಷ್ಣವಿ ದೇವಿ : 10(19) ದಿನಗಳು

June 29
July 13

ಅಮರನಾಥ್, ವೈಷ್ಣವಿ ದೇವಿ, ಶ್ರೀನಗರ (ಕುರುಕ್ಷೇತ್ರ, ವಾಘಾ ಬಾರ್ಡರ್, ಅಮೃತ್‌ಸರ್, ದೆಹಲಿ)

ಕೈಲಾಸ ಪರ್ವತ ಮತ್ತು ಮಾನಸ ಸರೋವರ : 14 ದಿನಗಳು

May June July 2015

Avail **Rs. 30,000/-** *subsidy**

ಶ್ರೀ ಹನ್ಸಾ ಟ್ರಾವೆಲ್ಸ್

SHRI HANSAA TRAVELS

RECOGNISED BY DEPARTMENT OF TOURISM, GOVT. OF KARNATAKA

No. 640, 40th Cross (Near Prabha Eye Clinic), 8th Block, Jayanagar, Bangalore - 560 070.

☎: (080) 26543891 / 26643276 Mobile : (0) 9341415612 / 9341215612

e-mail : hansaatravels@gmail.com web : www.hansaatravels.com

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಮುಕ್ತಿದಾನಂದ
ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ
ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು
ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:
'ನರ್ಮದೇ ಹರ್ !'

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ): ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ): $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-ಜಿ ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಮೇ-2015 ಸಂಪುಟ 16 ಸಂಚಿಕೆ 05


ವಿವೇಕ ಪ್ರಭ

ಪರಿವಿಡಿ





ಲೀಲೆ, ಆ ಸಂತನು ಯಾರೆಂದುಕೊಂಡೆ? ನಿನ್ನ ಗಂಡನೇ. ಅವನ ಹೆಂಡತಿ ಯಾರೆಂದುಕೊಂಡೆ? ಅದು ನೀನೇ. ರಾಜನಾದ ನಿನ್ನ ಗಂಡ ಮತ್ತೆ ಸತ್ತಿದ್ದಾನೆ. ......



ಪ್ರಾರ್ಥನೆ




ಪಶುವಧಮತಿಘೋರಂ ಚೋದಿತಂ ವೇದಶಾಸ್ತ್ರೈಃ
ಶಮಯಿತುಮವತೀರ್ಣಂ ಜ್ಞಾನದಂ ಶಾಕ್ಯಸಿಂಹಂ ।
ಪ್ರಕಟಿತನವಮಾರ್ಗಾದ್ವೈತನಿರ್ವಾಣಕಲ್ಪಂ
ವಿಮಲಪರಮಹಂಸಂ ರಾಮಕೃಷ್ಣಂ ಭಜಾಮಃ ॥



ವೇದಶಾಸ್ತ್ರಗಳಲ್ಲಿ ವಿಧಿಸಿರುವ ಅತಿಘೋರವಾದ ಪಶುವಧೆಯನ್ನು ತಡೆಯಲು, ಜ್ಞಾನವನ್ನು ನೀಡುವ, ಅದ್ವೈತದ ನಿರ್ವಾಣವನ್ನೇ ಹೊಸ ರೀತಿಯಲ್ಲಿ ಬೋಧಿಸಿದ, ಶಾಕ್ಯ ಸಿಂಹನಾಗಿ ಅವತರಿಸಿದ ಶುದ್ಧ ಪರಮಹಂಸ ರೂಪಿಯಾದ ಶ್ರೀರಾಮಕೃಷ್ಣರನ್ನು ಭಜಿಸುತ್ತೇನೆ.

ಶ್ರುತಿನಿಗದಿತಮಾರ್ಗಸ್ಥಾಪನಾಯಾವತಾರಂ
ಜಿನನಯಬಹುವಾದ ಭ್ರಾಂತಿಮುನ್ಮೂಲಯಂತಂ ।
ಭುವನವಿಜಯಕೀರ್ತಿಂ ಶಂಕರಂ ಭಾಷ್ಯಕಾರಂ
ವಿಮಲಪರಮಹಂಸಂ ರಾಮಕೃಷ್ಣಂ ಭಜಾಮಃ ॥



ವೈದಿಕ ಮಾರ್ಗವನ್ನು ಸ್ಥಾಪನೆ ಮಾಡುವ ಸಲುವಾಗಿ, ಬೌದ್ಧರ ಅನೇಕ ವಿಧವಾದ ಸಿದ್ಧಾಂತಗಳಿಂದ ಉದ್ಭವಿಸಿದ ಭ್ರಾಂತಿಯನ್ನು ಹೋಗಲಾಡಿಸಿ, ಜಗತ್ತಿನಲ್ಲಿ ವಿಜಯದ ಕೀರ್ತಿಯನ್ನು ಹೊಂದಿರುವ ಭಾಷ್ಯಕಾರರಾದ ಶಂಕರರಾಗಿ ಅವತರಿಸಿದ ಶುದ್ಧ ಪರಮಹಂಸ ರೂಪಿಯಾದ ಶ್ರೀರಾಮಕೃಷ್ಣರನ್ನು ಭಜಿಸುತ್ತೇನೆ.

ಸೂಕ್ತಿಪ್ರಭ



ಮರ್ಯಾದೆ ಬರುವುದು ನಮಗೆ ಲಭಿಸುವ ಕೀರ್ತಿ, ಗೌರವಗಳಿಂದಲ್ಲ; ಅದು ನಮಗಿರುವ ತಿಳುವಳಿಕೆಯಿಂದ ಬರುತ್ತದೆ.

–ಅರಿಸ್ಟಾಟಲ್



ಒಳ್ಳೆಯ ವ್ಯಕ್ತಿಯೊಬ್ಬನ ಬದುಕಿನಲ್ಲಿ ಬರುವ ಅತ್ಯುತ್ತಮ ಕ್ಷಣಗಳೆಂದರೆ: ಹೆಸರಿಲ್ಲದ, ಎಂದಿಗೂ ನೆನಪಿನಲ್ಲಿ ಉಳಿಯದ ಪ್ರೀತಿ, ಕರುಣೆಯ ಸಣ್ಣ ಸಣ್ಣ ಕಾರ್ಯಗಳು.

–ವಿಲಿಯಂ ವರ್ಡ್ಸ್‌ವರ್ತ್



ಯಾರಿಂದ ನಾವು ಏನನ್ನೂ ಕಲಿಯಲಾಗದೋ, ಅಷ್ಟು ಅಜ್ಞಾನಿಯಾಗಿರುವ ಒಬ್ಬ ವ್ಯಕ್ತಿಯನ್ನು ನಾನು ಎಂದಿಗೂ ನೋಡಿಲ್ಲ.

–ಗೆಲಿಲಿಯೋ

ಆನೆಯನೇರುವೊಡೆ ದಾನವ ಮಾಡುವುದು
ಭಾನುಮಂಡಲವನಡರುವೊಡೆ – ಹಸಿದರ್ಗೆ
ನೀನೊಲಿದಿಕ್ಕು ಸರ್ವಜ್ಞ *–ಸರ್ವಜ್ಞ*





ಇತರರಲ್ಲಿ ಅತಿಸ್ವಲ್ಪ ಗುಣವಿದ್ದರೂ ಅದನ್ನು ಮಾತ್ರ ನೋಡಿ, ಹೊಗಳಿ, ಗೌರವಿಸುವುದನ್ನು ಅಭ್ಯಾಸ ಮಾಡು. ಇತರರ ಗುಣಕ್ಕೆ ಗೌರವ ಕೊಡದಿದ್ದರೆ ನಿನ್ನ ಮನಸ್ಸು ವಿಕಾಸವಾಗುವುದಿಲ್ಲ.

–ಸ್ವಾಮಿ ಬ್ರಹ್ಮಾನಂದ

ಸತ್ಯವು ಉದಾತ್ತ ಹಾಗೂ ಮಧುರ. ಅದು ಕೆಡುಕಿನಿಂದ ನಮ್ಮನ್ನು ರಕ್ಷಿಸಬಲ್ಲುದು. ಸತ್ಯಕ್ಕೆ ಹೊರತಾದ ಜಗದೋದ್ಧಾರಕ ಶಕ್ತಿ ಈ ಜಗತ್ತಿನಲ್ಲಿ ಬೇರಾವುದೂ ಇಲ್ಲ.

–ಗೌತಮ ಬುದ್ಧ


njgb
आपका अपना बैंक
Narmada Jhabua Gramin Bank, Indore
(A Joint Venture of Govt. of India, M.P. Govt. & Bank of India)
Education Loan
Home Loan
Personal Loan
Locker Facility
Retail Trade Loan
KCC Loan Facility
More than 350 Fully Computerised Branches
Winner of Inclusive Finance India Award for year 2014
Deposit Schemes of Our Bank
• Current Deposit
• Saving Deposit
• FDR/DBD (Quarterly compunding interest)
• Recurring / Flexi Recurring
• Monthly/Quarterly Income Deposit (MIC/QIC)
• Sunidhi Deposit scheme (Tax Saving Deposit Scheme) etc.
Loan Schemes of Our Bank
• Home Loan
• Education Loan
• Personal Loan
• Mortgage Loan
• Micro Finance
• Consumer Loan
• Business Loan – (with CC/OD Limit)
• Vehicle & SRTO Loan
• SHG, JLG, SCC, GCC, ACC, WCC etc..
Kollegal V. Raghvendra
Chairman
Head Office : Arcade Silver, Near Chappan Shop, New Palasia, Indore (M.P.) 452 001
☎ : (0731) 2549053-56, Fax : (0731) 2432432 • Website : www.njgb.in • Email : njgbhoindore@yahoo.com



ಆಧುನಿಕ ಭಾರತ ಮತ್ತು ಸನಾತನ ಧರ್ಮ

- ೧ -

'ದಿನದಿಂದ ದಿನಕ್ಕೆ ಜಗತ್ತು ಆಧುನಿಕವಾಗುತ್ತಿದೆ; ಪ್ರತಿ ಕ್ಷಣವೂ ಹೊಸಹೊಸ ಆವಿಷ್ಕಾರವಾಗುತ್ತಿದೆ; ಈ ಕಾಲಘಟ್ಟದಲ್ಲಿ ದೇವರು, ಧರ್ಮ, ವೇದಾಂತ ಎಂದು ಹಳೆಯ ತತ್ತ್ವಗಳ ಕಡೆಗೇ ಮತ್ತೆ ಮತ್ತೆ ಹೊರಳುತ್ತಾರಲ್ಲ!' ಎಂದು ಮೂಗು ಮುರಿಯುವ ಪ್ರವೃತ್ತಿ ಹೆಚ್ಚುತ್ತಿದೆ. ಹೌದು, ಮತ್ತೆ ಅದೇ ಪುರಾತನ ತತ್ತ್ವಗಳ ಕಡೆಗೆ, ಸನಾತನ ಧರ್ಮದ ಕಡೆಗೆ ಭಾರತೀಯ ಮನಸ್ಸು ಹೊರಳುತ್ತಿದೆ ಎಂಬುದೇ ನಿಜವಾಗಿದ್ದರೆ ಅದೊಂದು ಶುಭ ಸೂಚನೆಯೇ ಸರಿ. ಭಾರತ ಆಧುನಿಕವಾದಷ್ಟೂ ತನ್ನ ಹಳೆಯ ಮೌಲ್ಯಗಳನ್ನು ಬಿಡದೆ, ತನ್ನ ಪುರಾತನ ಧರ್ಮ, ಸಂಸ್ಕೃತಿ, ತತ್ತ್ವಗಳಿಗೆ ದೃಢವಾಗಿ ಅಂಟಿಕೊಂಡಿದೆ ಎಂದರೆ ಅದೊಂದು ಅತ್ಯುತ್ತಮ ಸಮತೋಲನವಲ್ಲವೇ? ಆದರೆ ಈ ರೀತಿಯ 'ಸಮರಸ' ಜನಸಾಮಾನ್ಯರಲ್ಲೆಲ್ಲ ವ್ಯಾಪಕಗೊಂಡಿದೆಯೆ?

ಇಂದಿನ ಸಮಾಜವನ್ನು ಎಚ್ಚರದಿಂದ ಗಮನಿಸಿದರೆ, ಇದಕ್ಕೆ 'ಹೌದು' ಮತ್ತು 'ಅಲ್ಲ' ಎಂಬ ಎರಡೂ ಉತ್ತರವನ್ನು ಕೊಡಬಹುದು ಅನ್ನಿಸುತ್ತಿದೆ. ಇದು ಸ್ಪಷ್ಟವಾದ ಉತ್ತರವಲ್ಲ, ನಿಜ. ಆದರೆ ಇಂದಿನ ಸಮಾಜದ ಬಗೆಬಗೆಯ ಮನೋಭಾವ, ಪ್ರವೃತ್ತಿ ಎಷ್ಟೊಂದು ಗೊಂದಲಮಯವೆಂದರೆ, ಅದರ ಸರಳ ವಿಶ್ಲೇಷಣೆ ಅಸಾಧ್ಯವೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ವಿಭಿನ್ನ ನೆಲೆಗಳಿಂದ ನೋಡಬೇಕು; ಆಗ ಒಂದಕ್ಕೊಂದು ವಿರುದ್ಧವೆನಿಸುವ ಉತ್ತರ ದೊರಕುತ್ತದೆ.

ಮೊದಲನೆಯದಾಗಿ, ಆಧುನಿಕತೆಗೆ ತನ್ನನ್ನು ತೆರೆದುಕೊಂಡಿರುವ ಭಾರತ, ವಿಭಿನ್ನ ಸಂಸ್ಕೃತಿ, ವಿಚಾರಧಾರೆ, ಜೀವನಕ್ರಮಗಳಿಂದ ಪ್ರಭಾವಿತವಾಗಿದೆ; ತನ್ನ ಸಾಮಾಜಿಕ ಜೀವನಕ್ರಮವನ್ನು ನಿರಂತರ ಬದಲಾಯಿಸುತ್ತಲೇ ಇದೆ. ಇದರೊಂದಿಗೆ ಈ ಪ್ರಭಾವದ ಆಧಿಕ್ಯದಿಂದ ನಾವು ನಮ್ಮತನವನ್ನು, ನಮ್ಮದೇ ಆದ ಬದುಕನ್ನು ಕಳೆದುಕೊಳ್ಳುತ್ತಿದ್ದೇವೆ; ಆದ್ದರಿಂದ ಆಧುನಿಕತೆಯ ಪ್ರಭಾವಕ್ಕೆ ಬಲಿಯಾಗದೆ, ನಮ್ಮ ಸಂಸ್ಕೃತಿ, ಧರ್ಮ, ತತ್ತ್ವ ಪರಂಪರೆಗಳನ್ನು ಉಳಿಸಿಕೊಳ್ಳಬೇಕೆನ್ನುವ ಎಚ್ಚರ, ಪ್ರಯತ್ನ ನಮ್ಮ ನಡುವೆ ನಡೆಯುತ್ತಿದೆ. ಈ ಅರ್ಥದಲ್ಲಿ ನಮ್ಮ ಸಮಾಜದಲ್ಲಿ ಹಳೆಯ-ಹೊಸ ಮೌಲ್ಯಗಳ ಸಾಮರಸ್ಯ ವ್ಯಾಪಕಗೊಳ್ಳುತ್ತಿದೆ ಎನ್ನಬೇಕು.

ಇನ್ನು ಎರಡನೆಯ ಉತ್ತರ: 'ಇಲ್ಲ', ಈ ಸಾಮರಸ್ಯವನ್ನು ಕೆಲವೊಂದು ವರ್ಗದ, ಕೆಲವು ಮಂದಿ ಸಂವೇದನಾಶೀಲ ವ್ಯಕ್ತಿಗಳು ಮಾತ್ರ ಕಂಡುಕೊಳ್ಳುತ್ತಾರೆ; ಸಮಾಜದ ಬಹುಪಾಲು ಜನ ಆಧುನಿಕತೆಯ, ನಗರಕೇಂದ್ರಿತ ಜೀವನಶೈಲಿಯ ಮೌಲ್ಯಗಳಿಗೆ ಮಾರುಹೋಗಿದ್ದಾರೆ. ಆದ್ದರಿಂದ ಈ ಸಾಮರಸ್ಯ ಅತ್ಯಂತ ಸೀಮಿತವಾದದ್ದು; ಹಳೆಯ ಮೌಲ್ಯ, ತತ್ತ್ವಗಳೆಲ್ಲ ತಿರಸ್ಕೃತವಾಗಿವೆ ಎಂಬ ಅಭಿಪ್ರಾಯ.

- ೨ -

ನಮ್ಮ ಸಮಾಜದಲ್ಲಿ ಈ ಎರಡೂ ಬಗೆಯ ಪ್ರವೃತ್ತಿಗಳು ಪ್ರಬಲವಾಗಿವೆ. ಆದರೆ ಒಂದು ಸಂಗತಿ ಸತ್ಯ: ಪ್ರಾಚೀನ ತತ್ತ್ವ, ಧರ್ಮ, ಸಂಸ್ಕೃತಿಯನ್ನು ಮಾತ್ರ ಅವಲಂಬಿಸಿದ ಜೀವನಕ್ರಮ ನಮಗೆ ಸಾಲದು; ಆಧುನಿಕ ಜಗತ್ತಿನ ಹೊಸ ವಿಚಾರಗಳು, ವೈಜ್ಞಾನಿಕ ಆವಿಷ್ಕಾರಗಳು, ನೂತನ ಬದಲಾವಣೆಗಳು ಭಾರತೀಯ ಜೀವನ ಕ್ರಮದಲ್ಲಿ ಅನಿವಾರ್ಯವಾಗಿ ಬರಬೇಕಾಗಿವೆ. ಅಷ್ಟೇ ಮುಖ್ಯವಾಗಿ, ನಮ್ಮಲ್ಲಿ ಪುರಾತನವಾದದ್ದನ್ನೆಲ್ಲ ತ್ಯಜಿಸುವ, ತಿರಸ್ಕರಿಸುವ ಮೂಲಕ ನಾವು 'ಆಧುನಿಕ' ಬದುಕನ್ನು ನಡೆಸಲಾರೆವು; ಇದರಿಂದ ನಮ್ಮ ದೇಶದ ತಾಯಿಬೇರನ್ನೇ ನಾವು ಕತ್ತರಿಸಿ ಹಾಕಿದಂತಾಗುವುದು. ಹಳೆಯ ಮತ್ತು ಹೊಸ ಜೀವನ ಕ್ರಮದ ಸಮ ಪ್ರಮಾಣದ ಸಾಮರಸ್ಯವು ಹಿಂದೆಂದಿಗಿಂತಲೂ ಇಂದು ಅಗತ್ಯವಾಗಿದೆ. ಈ ಪ್ರಸ್ತುತತೆ ನಮ್ಮ ಧರ್ಮ, ಸಂಸ್ಕೃತಿ, ತತ್ತ್ವಗಳ ಹೊಸ ಆವಿಷ್ಕಾರಕ್ಕೆ ಮತ್ತು ಹೊಸ ವ್ಯಾಖ್ಯಾನಕ್ಕೆ ದಾರಿ ಮಾಡುತ್ತದೆ.

ಒಂದರ್ಥದಲ್ಲಿ ಹಿಂದೂಧರ್ಮದ ಮರುವ್ಯಾಖ್ಯಾನ ಹತ್ತೊಂಬತ್ತನೇ ಶತಮಾನದ ಅಂತ್ಯಭಾಗದಲ್ಲೇ ನಡೆಯಿತು. ಆಧುನಿಕ ವಿದ್ಯಾಭ್ಯಾಸ ಪಡೆದ ಹಿಂದೂ ನೇತಾರರು ಹೊಸ ಬಗೆಯ ಧಾರ್ಮಿಕ ಚಳುವಳಿಗಳನ್ನು ಆರಂಭಿಸಿದ್ದು, ಶ್ರೀರಾಮಕೃಷ್ಣ-ವಿವೇಕಾನಂದರ, ಶ್ರೀ ಅರವಿಂದರ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೂಡಿಬಂದ ಭಾರತೀಯ ಪರ ಚಿಂತಕರ (ತಿಲಕ್, ಗಾಂಧೀಜಿ ಪ್ರಮುಖರು) ವಿಚಾರಧಾರೆ

ಆಧುನಿಕ ಯುವಜನತೆಯನ್ನು ಪ್ರಭಾವಿಸಿದ್ದು ಐತಿಹಾಸಿಕ ಸಂಗತಿ. ಇವು ಭಾರತೀಯ ಪರಂಪರೆ, ಸಂಸ್ಕೃತಿಗಳ ಪುನರುತ್ಥಾನಕ್ಕೆ ಕಾರಣವಾದರೂ, ಆಧುನಿಕತೆ ಹಲವು ರಂಗಗಳ ಮೂಲಕ ನಮ್ಮ ಜನಜೀವನವನ್ನು ಪ್ರವೇಶಿಸುವ ಮತ್ತು ಪ್ರಭಾವಗೊಳಿಸುವ ಪ್ರಕ್ರಿಯೆ ಅವ್ಯಾಹತವಾಗಿ ಮುಂದುವರೆಯಿತು; ಯಾವ ಚಳುವಳಿಗೂ ಅದನ್ನು ತಡೆಯಲಾಗಲಿಲ್ಲ. ಅನಿವಾರ್ಯವಾಗಿ ನಡೆದ ಈ ಬದಲಾವಣೆಯಿಂದಾಗಿ ನಮ್ಮ ಸಮಾಜ ವಿಶಾಲದೃಷ್ಟಿಯನ್ನು ಪಡೆಯಿತು, ಸಮೃದ್ಧಗೊಂಡಿತು. ಅದರೊಂದಿಗೆ ಹಲವು ಬಗೆಯಲ್ಲಿ ಸಾಂಸ್ಕೃತಿಕ ಹಿನ್ನಡೆ ಉಂಟಾಯಿತೆನ್ನುವುದೂ ನಿಜ.

ಈಚಿನ ವರ್ಷಗಳಲ್ಲಿ, ವಿಶೇಷವಾಗಿ ಕಂಪ್ಯೂಟರ್, ಮೊಬೈಲ್, ಟಿ.ವಿ. ಮೊದಲಾದ ಸಂಪರ್ಕ ಮಾಧ್ಯಮಗಳ ಪ್ರಭಾವ ದಟ್ಟವಾಗುತ್ತಿರುವ ಈ ಕಾಲಘಟ್ಟದಲ್ಲಿ ಭಾರತೀಯ ಸಂಸ್ಕೃತಿ, ಧರ್ಮ, ತತ್ತ್ವ, ಪರಂಪರೆಗಳ ವಿರುದ್ಧ ಪ್ರಚಾರ ನೇರ ಹಾಗೂ ಪರೋಕ್ಷವಾಗಿ ನಡೆಯುತ್ತಿದೆ. ಇದಕ್ಕೆ ಹಿನ್ನೆಲೆಯಾಗಿ ರಾಜಕೀಯ-ಆರ್ಥಿಕ ಧ್ರುವೀಕರಣ, ಜಾಗತಿಕ ವ್ಯಾಪಾರೀಕರಣ, ಜಾಹೀರಾತು ಮುಂತಾದ ಮಾಧ್ಯಮಗಳ ಪೈಪೋಟಿ – ಇವೆಲ್ಲ ಕೆಲಸ ಮಾಡುತ್ತಿವೆ. ಇವು ಮಾನವ ಸ್ವಭಾವವನ್ನು ಅರಿತೋ ಅರಿಯದೆಯೋ ಸಂದೇಹವಾದದತ್ತ, ನಾಸ್ತಿಕ ಪ್ರವೃತ್ತಿಯತ್ತ ವಾಲುವಂತೆ ಮಾಡುತ್ತಿವೆ. ಆರಂಭದಲ್ಲಿ ಹೇಳಿದ 'ಮೂಗು ಮುರಿಯುವ' ಪ್ರವೃತ್ತಿ ಇಂಥ ಸನ್ನಿವೇಶದಲ್ಲೇ ಮೂಡಿಬರುತ್ತದೆ.

ಆದರೆ ಭಾರತದ ಇತಿಹಾಸದುದ್ದಕ್ಕೂ ಕಂಡುಬರುವ ಒಂದು ಅತ್ಯದ್ಭುತ ಶಕ್ತಿ – ಸಾಂಸ್ಕೃತಿಕ ಸಮತೋಲನ. ಯಾವ ಕ್ಷೇತ್ರದಲ್ಲಿ ಏರುಪೇರಾದರೂ ಸಂಸ್ಕೃತಿ ತನ್ನ ಮೂಲದಿಂದ ಎದ್ದು ನಿಲ್ಲುತ್ತದೆ; ಏರುಪೇರನ್ನು ಅಲ್ಲೋಲಕಲ್ಲೋಲಗೊಳಿಸಿ ಸಮಾಜದ ಸಮತೋಲನವನ್ನು ನೆಲೆನಿಲ್ಲಿಸುತ್ತದೆ. ವೇದಕಾಲದಿಂದೀಚೆಗೆ ಭಾರತದ ಮೇಲೆ ನಿರಂತರವಾಗಿ ನಡೆದ ವಿದೇಶೀ ಆಕ್ರಮಣಗಳಿಂದ ಸಾಂಸ್ಕೃತಿಕ, ಸಾಮಾಜಿಕ ಜನಜೀವನ ಹಲವು ಬಾರಿ ಏರುಪೇರಾಯಿತು; ಆದರೆ ನಮ್ಮ ಸಂಸ್ಕೃತಿ ಅದನ್ನೆಲ್ಲ ಜೀರ್ಣಿಸಿಕೊಂಡು ತನ್ನ ಸಮತೋಲನವನ್ನು ಉಳಿಸಿಕೊಂಡಿತು. ಈಚೆಗೆ ಮತ್ತೆ ನಮ್ಮ ಸಮಾಜ ತನ್ನ ಸಾಂಸ್ಕೃತಿಕ ಮೂಲವನ್ನು ಮರೆತು ದೂರ ಸರಿದರೆ, ನಮ್ಮ ಸಂಸ್ಕೃತಿಯ ಆಳದಿಂದಲೇ ಅದಕ್ಕೆ ಪ್ರಬಲವಾದ ಪ್ರತಿಕ್ರಿಯೆ ಬರುವುದು; ಮತ್ತೆ ಸಮತೋಲನ ಸ್ಥಾಪಿಸಲ್ಪಡುವುದು. ಇದು ಭಾರತದ ವೈಶಿಷ್ಟ್ಯ.

– ೩ –

ನಮ್ಮ ಸಂಸ್ಕೃತಿಯಲ್ಲಿ ಈ ಸಮತೋಲನ ಸಾಧ್ಯವಾಗಿರುವುದು ಅದರ ಆಧ್ಯಾತ್ಮಿಕ ಸ್ವರೂಪದಿಂದಾಗಿ. ನಮ್ಮಲ್ಲಿ ಮಾನವನ ಬದುಕಿಗೂ, ಆದರ್ಶಕ್ಕೂ, ಅವನ ಗೊತ್ತುಗುರಿಗೂ ಒಂದು ಆಧಾರವನ್ನು ಒದಗಿಸಿರುವುದೇ ಸನಾತನ ಧರ್ಮ. ಇದರ ವೈಶಿಷ್ಟ್ಯವನ್ನು ಕುರಿತು ಸ್ವಾಮಿ ವಿವೇಕಾನಂದರು 'ಹಿಂದೂ ಧರ್ಮ ಮತ್ತು ಶ್ರೀರಾಮಕೃಷ್ಣ' ಎಂಬ ಲೇಖನದಲ್ಲಿ ಹೇಳುತ್ತಾರೆ:

'' 'ಸತ್ಯ'ದಲ್ಲಿ ಎರಡು ವಿಧಗಳಿವೆ. ಒಂದನೆಯದು, ಮಾನವನ ಸಾಧಾರಣ ಇಂದ್ರಿಯಗಳಿಗೆ ಗ್ರಾಹ್ಯವಾದುದು ಮತ್ತು ಇಂದ್ರಿಯಜ್ಞಾನವನ್ನು ಆಧರಿಸಿದ ತರ್ಕವನ್ನು ಅವಲಂಬಿಸಿದುದು. ಎರಡನೆಯದು ಸೂಕ್ಷ್ಮವಾದ ಯೋಗಶಕ್ತಿಯಿಂದ ಗ್ರಾಹ್ಯವಾದುದು. ಒಂದನೆಯದರ ಸಹಾಯದಿಂದ ಸಂಗ್ರಹಿಸಲಾದ ಜ್ಞಾನವನ್ನು 'ವಿಜ್ಞಾನ' ಎಂದು ಕರೆಯುತ್ತೇವೆ. ಎರಡನೆಯದರ ಸಹಾಯದಿಂದ ವೇದ್ಯವಾದ ಜ್ಞಾನವನ್ನು 'ವೇದಗಳು' ಎಂದು ಕರೆಯುತ್ತೇವೆ. ವೇದಗಳೆಂದು ಕರೆಯಲ್ಪಡುವ, ಅನಾದಿಯೂ ಅನಂತವೂ ಆದ ಇಂದ್ರಿಯಾತೀತ ಸತ್ಯಗಳು ಅನವರತವೂ ಅಸ್ತಿತ್ವದಲ್ಲಿವೆ. ಈ ಸತ್ಯಗಳ ಸಹಾಯದಿಂದಲೇ ಸ್ವಯಂ ಸೃಷ್ಟಿಕರ್ತನು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಈ ಅತೀಂದ್ರಿಯ ಶಕ್ತಿ ಯಾವ ವ್ಯಕ್ತಿಯಲ್ಲಿ ಅಭಿವ್ಯಕ್ತವಾಗುವುದೋ ಅವನಿಗೆ 'ಋಷಿ' ಎಂದು ಹೆಸರು; ಮತ್ತು ಈ ಶಕ್ತಿಯ ಸಹಾಯದಿಂದ ಅವನು ಯಾವ ಅಲೌಕಿಕ ಸತ್ಯಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವನೋ ಆ ಸತ್ಯಗಳಿಗೆ 'ವೇದಗಳು' ಎಂದು ಹೆಸರು.''

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೫, ಪು. ೩೮೩)

ಸ್ವಾಮೀಜಿ ಮುಂದುವರಿದು ಹೇಳುತ್ತಾರೆ:

''ಈ ವೇದರಾಶಿಯು ಜ್ಞಾನಕಾಂಡ, ಕರ್ಮಕಾಂಡಗಳೆಂದು ಎರಡು ಭಾಗಗಳಾಗಿವೆ. ಕರ್ಮಕಾಂಡದಲ್ಲಿರುವ ಕ್ರಿಯೆ ಮತ್ತು ಅದರಿಂದ ಹುಟ್ಟುವ ಫಲಗಳು ಮಾಯಾಜಗತ್ತಿಗೆ ಸೀಮಿತವಾಗಿವೆ. ಅವು ದೇಶ ಕಾಲ ಪಾತ್ರಾದಿ ನಿಯಮಾಧೀನವಾಗಿ ಹಿಂದೆ ಪರಿವರ್ತನೆ ಹೊಂದಿದವು; ಇಂದೂ ಹೊಂದುತ್ತಿವೆ; ಮುಂದೆಯೂ ಹೊಂದುವುವು.

''ಸಾಮಾಜಿಕ ರೀತಿನೀತಿಗಳೂ ಕೂಡ ಈ ಕರ್ಮಕಾಂಡದ ಮೇಲೆಯೇ ನಿಂತಿರುವುದರಿಂದ ಅವು ಕಾಲಕಾಲಕ್ಕೆ ಪರಿವರ್ತನೆ ಹೊಂದುತ್ತಲೇ ಇರುವುವು; ಹೊಂದಲೇಬೇಕು. ಸತ್‌ಶಾಸ್ತ್ರ ಮತ್ತು ಸದಾಚಾರಗಳಿಗೆ ಮತ್ತು ಸಂತರ ಜೀವನಾದರ್ಶಗಳಿಗೆ ಅವಿರೋಧವಾಗಿರುವ ಲೋಕಾಚಾರಗಳು ಮಾತ್ರ ಆಯಾಕಾಲದಲ್ಲಿ ಸ್ವೀಕೃತವಾಗುತ್ತಿರುವುವು. ಶಾಸ್ತ್ರದ ಮೂಲೋದ್ದೇಶಗಳಿಗೂ, ಸಂತರ ನಡೆನುಡಿಗಳಿಗೂ ವಿರೋಧವಾದ ಆಚರಣೆಗಳ ಅಂಧಾನುಕರಣೆಯೇ ಆರ್ಯರ ಅಧಃಪತನಕ್ಕೆ ಬಹು ಮುಖ್ಯವಾದ ಕಾರಣವಾಯಿತು.

''ಜ್ಞಾನಕಾಂಡ ಅಥವಾ ವೇದಾಂತವು ಮಾತ್ರವೇ ಸರ್ವಕಾಲಗಳಲ್ಲಿಯೂ ಮಾನ್ಯತೆಯನ್ನು ಪಡೆದಿದೆ. ಏಕೆಂದರೆ ಅದು ಮಾತ್ರವೇ ಯೋಗ, ಭಕ್ತಿ, ಜ್ಞಾನ, ಕರ್ಮ ಇವುಗಳ ಮೂಲಕ

ಜನರನ್ನು ಮಾಯೆಯಿಂದ ಪಾರುಮಾಡಿ ಅವರಿಗೆ ಮುಕ್ತಿಯನ್ನು ದೊರಕಿಸಿಕೊಡುತ್ತದೆ. ವೇದಾಂತದ ಪ್ರಾಮಾಣ್ಯವು ಕಾಲ, ದೇಶ, ಪಾತ್ರಗಳ ಮಿತಿಗೆ ಒಳಪಡದೆ ಇರುವುದರಿಂದ ಅದು ಸಮಸ್ತ ಮಾನವತೆಗೂ ಶಾಶ್ವತವಾದ ವಿಶ್ವಧರ್ಮವನ್ನು ಬೋಧಿಸುವ ಏಕೈಕ ಶಾಸ್ತ್ರವಾಗಿ ಉಳಿದಿದೆ.'' *(ಅಲ್ಲೇ, ಪು. ೨೮೪)*

ಸತ್ಯವನ್ನು ಇಂದ್ರಿಯಗ್ರಹಿಕೆ ಮತ್ತು ಅವುಗಳ ಆಧಾರದಿಂದ ನಿರೂಪಿತವಾದ ತರ್ಕದಿಂದ ಮಾತ್ರ ನಿರ್ಣಯಿಸುವ ಆಧುನಿಕ ವಿಜ್ಞಾನದ ವಿಧಾನವನ್ನು ಸನಾತನ ಧರ್ಮ ಅವಲಂಬಿಸುವುದಿಲ್ಲ. ನಮ್ಮಲ್ಲಿ 'ಪ್ರತ್ಯಕ್ಷ'ವೆಂಬುದು ಒಂದು ಪ್ರಮಾಣವಾಗಿದ್ದರೂ, ಸತ್ಯವನ್ನು ನಿರ್ಣಯಿಸಲು ಅದು ಸಾಧನವಲ್ಲ. ಹಿಂದಿನ ಋಷಿಮುನಿಗಳ ಅನುಭವದಿಂದ ನಿರೂಪಿತವಾದ ವೇದಗಳೇ (ಅಥವಾ 'ಶಬ್ದ') ನಿಜವಾದ ಪ್ರಮಾಣ. '**ಶಬ್ದ**'ವೆಂದರೆ ವೇದಗಳು ಎಂದೂ, 'ಸಾಕ್ಷಾತ್ಕಾರದ ಮೂಲಕ ಸತ್ಯದರ್ಶನವನ್ನು ಪಡೆದವನ ಮಾತು' ಎಂದೂ ಅರ್ಥ. ಈ ದೃಷ್ಟಿಯಲ್ಲಿ '**ಶಬ್ದ ಪ್ರಮಾಣ**'ವೆಂದರೆ 'ವೇದಗಳು ಹಾಗೂ ಸಂತರ ಅನುಭವದ ನುಡಿ' ಎಂದು ಅರ್ಥೈಸಬೇಕು. ಆದ್ದರಿಂದಲೇ 'ವೇದಗಳು ಆತ್ಯಂತಿಕ ಪ್ರಮಾಣ; ಅವುಗಳ ಮಾತು ಅಂತಿಮ' ಎಂಬುದು ನಮ್ಮ ತತ್ತ್ವಗಳ ಆಧಾರಸ್ತಂಭವಾಗಿದೆ. ಅದೇ ರೀತಿ 'ಗುರುಹಿರಿಯರ ಮಾತು ಮೀರಬಾರದು' ಎಂಬ ಆದರ್ಶಕ್ಕೂ ಇದೇ ಮೂಲ; ಏಕೆಂದರೆ ನಮ್ಮ ಪರಂಪರೆಯ ಪ್ರಕಾರ ಸತ್ಯವೆಂಬುದು ನಿರ್ಧರಿಸಲ್ಪಡುವುದು ಅನುಭವದ ಮೂಲಕ. ನಿಜವಾಗಿಯೂ ಅಂಥ ಅನುಭವಗಳನ್ನು ಪಡೆದವರೇ ಸಂತರು, ಗುರುಹಿರಿಯರು; ತನ್ನ ಅರಿವಿಗೆ ನಿಲುಕದ ಉನ್ನತ ಜ್ಞಾನವನ್ನು ಪಡೆಯಲು ಸಾಧಕನು ಗುರುವಿಗೆ, ಸನಾತನ ಧರ್ಮ ಹೇಳುವ ಸತ್ಯಕ್ಕೆ ಸಂಪೂರ್ಣ ತನ್ನನ್ನು ಸಮರ್ಪಿಸಿಕೊಳ್ಳುವುದೊಂದೇ ಮಾರ್ಗ. ಆದ್ದರಿಂದ ವೈಜ್ಞಾನಿಕ ವಿಧಾನದಂತೆ ಸನಾತನ ಧರ್ಮವು ಸತ್ಯದ 'ಪ್ರದರ್ಶನ' ಅನಿವಾರ್ಯವೆನ್ನುವುದಿಲ್ಲ; ಸತ್ಯದ ಸಾಕ್ಷಾತ್ಕಾರ, ನೇರ ಅನುಭವ ಅತ್ಯಗತ್ಯವೆನ್ನುತ್ತದೆ. ಅದು ಪೂರ್ಣಗೊಂಡಾಗಲೇ ಎಲ್ಲ ಸಂದೇಹಗಳ ನಿವಾರಣೆ; ಎಲ್ಲ ಸಾಧನೆಗಳ ಉದ್ದೇಶ ಪ್ರಾಪ್ತಿ.

ಅವಿನಾಶಿಯಾದ, ಆದಿ ಅಂತ್ಯಗಳಿಲ್ಲದ 'ಜ್ಞಾನ'ವೇ ವೇದ, ಅದನ್ನು ಅವಲಂಬಿಸಿದ ಜೀವನವಿಧಾನವೇ **ಸನಾತನ ಧರ್ಮ**. ಅದು ಎಂದೂ ನಾಶವಾಗದು, ಆದ್ದರಿಂದಲೇ ಅದು '**ಸನಾತನ**'. ಈ ಧರ್ಮ ಕಾಲದ ದವಡೆಯಲ್ಲಿ ಸಿಕ್ಕಿ ನುಚ್ಚುನೂರಾದಂತೆ ಕಾಣಿಸಬಹುದು; ಆದರೆ ಅವನತಿಯ ಕೊನೆಯ ಕ್ಷಣದಲ್ಲಿ ಅದನ್ನು ಮತ್ತೆ ಉದ್ಧರಿಸುವ ವ್ಯಕ್ತಿಗಳು ಹುಟ್ಟಿಬರುತ್ತಾರೆ. ಅವರನ್ನು ದೇವರೆಂದೂ, ಅವತಾರವೆಂದೂ ಜನ ಅರಿತು ಪೂಜಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿ ಶ್ರೀರಾಮಕೃಷ್ಣರನ್ನು ಅವತಾರ ವರಿಷ್ಠರೆಂದೇ ಸಾರುತ್ತಾರೆ. *(ಕೃತಿಶ್ರೇಣಿ ೫, ಪು. ೨೮೬–೮೭).*

ಸನಾತನ ಧರ್ಮವನ್ನು ಕುರಿತು ಶ್ರೀರಾಮಕೃಷ್ಣರು ಹೇಳುವ ಮಾತೂ ಗಮನಾರ್ಹ: **''ಋಷಿಗಳ ಧರ್ಮ, ಎಂದರೆ ಸನಾತನ ಧರ್ಮ ಅನಾದಿಕಾಲದಿಂದ ಬದುಕಿ ಬಂದಿದೆ. ಅನಂತಕಾಲದವರೆಗೆ ಬದುಕಿಯೂ ಇರುತ್ತದೆ. ಈ ಸನಾತನ ಧರ್ಮದಲ್ಲಿ ನಿರಾಕಾರಪೂಜೆ, ಸಾಕಾರಪೂಜೆ, ಈ ರೀತಿಯಾಗಿ ಎಲ್ಲಾ ವಿಧದ ಪೂಜೆಗಳೂ ಇವೆ; ಜ್ಞಾನಮಾರ್ಗ, ಭಕ್ತಿಮಾರ್ಗ ಎಲ್ಲಾ ಇವೆ. ಉಳಿದ ಧರ್ಮಗಳೆಲ್ಲ, ಎಂದರೆ ಆಧುನಿಕ ಧರ್ಮಗಳು ಕೆಲವು ಕಾಲ ಬದುಕಿರುತ್ತವೆ, ಅನಂತರ ನಶಿಸುತ್ತವೆ.''**

(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೪೨೬)

ಸಂತರ ಅನುಭವಗಳು, ಅವರ ಉಪದೇಶಗಳು ಈ ಸನಾತನ ಧರ್ಮದ ಅಂಗಗಳೇ. ಏಕೆಂದರೆ ಅವು ದಿವ್ಯವಾದ, ಅವಿನಾಶಿಯಾದ ಸತ್ಯದ ಸ್ಪರ್ಶದಿಂದ ಪುನೀತಗೊಂಡವುಗಳು. ಕಾಲ, ದೇಶ, ಸನ್ನಿವೇಶಗಳಿಂದ ಬದ್ಧವಾದ ಪ್ರಾಪಂಚಿಕ ಬದಲಾವಣೆಗಳು ಈ ಬಗೆಯ ಜ್ಞಾನವನ್ನು ಬೋಧಿಸಲಾರವು. ಸಂತರ ಅನುಭವಗಳೇ ವೇದರೂಪದ ಜ್ಞಾನವಾಗಿಯೂ, ವೇದಾಂತದ ಸತ್ಯವಾಗಿಯೂ ಹರಿದುಬಂದಿದೆ; ಇದನ್ನು ಅವಲಂಬಿಸುವ ಧರ್ಮವೇ ಸನಾತನ ಧರ್ಮ; ಅದೇ ನಮ್ಮ ಸಂಸ್ಕೃತಿಯ ಬೇರು.

– ೪ –

ಆಧುನಿಕ ಯುಗದ ವಿಜ್ಞಾನ, ತಂತ್ರಜ್ಞಾನ ಹಾಗೂ ಇನ್ನಿತರ ಆವಿಷ್ಕಾರಗಳನ್ನು ಸನಾತನಧರ್ಮ ತಿರಸ್ಕರಿಸುವುದಿಲ್ಲ. ಅದರ ಇನ್ನೊಂದು ರೂಪವೇ ಆಗಿರುವ ವೇದಾಂತ ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದೆ. ವಿಚಾರ, ಗ್ರಹಿಕೆ, ವಿಶ್ಲೇಷಣೆ, ಅನುಭವ ಈ ಎಲ್ಲ ಬಗೆಯ ಪ್ರಯೋಗಗಳಿಗೂ ವೇದಾಂತ ಅವಕಾಶ ನೀಡುತ್ತದೆ. ವೇದಾಂತದ ಸೂಕ್ಷ್ಮತತ್ತ್ವಗಳಿಗೂ ಭೌತಶಾಸ್ತ್ರದ ಅತ್ಯುಚ್ಚನಿಯಮಗಳಿಗೂ ಅನೇಕ ಹೋಲಿಕೆ, ಸಾಮ್ಯತೆಗಳಿರುವುದನ್ನು ಅನೇಕರು ಗುರುತಿಸಿದ್ದಾರೆ. ವಿಜ್ಞಾನವನ್ನು ವೇದಾಂತದ ದೃಷ್ಟಿಯಿಂದ ಅಧ್ಯಯನ ಮಾಡುವ, ವಿಶ್ಲೇಷಿಸುವ ಕಾರ್ಯ ಈ ಆಧುನಿಕ ಯುಗದಲ್ಲಿ ನಡೆಯಬೇಕಾಗಿದೆ.

ಸನಾತನಧರ್ಮದ ಆಧ್ಯಾತ್ಮಿಕ ಮನೋಭಾವ ಹಲವು ಬಗೆಯ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ಉತ್ತರ ನೀಡುತ್ತದೆ. ಅದು ಯಾವುದನ್ನೂ ವಿರೋಧಿಸದೆ, ಎಲ್ಲವನ್ನೂ ಮುಕ್ತವಾಗಿ ಸ್ವೀಕರಿಸುತ್ತದೆ. ವೈಚಾರಿಕ, ವೈಜ್ಞಾನಿಕ, ತಾತ್ತ್ವಿಕ ಅನ್ವೇಷಣೆಗಳು ಏಕತೆಯತ್ತ ಸಾಗುವುದನ್ನೇ ಸನಾತನಧರ್ಮ ಸಾರುತ್ತದೆ. ಇದೇ ಭಾರತದ ಸಹಜಧರ್ಮ; ಇದೇ ನಮ್ಮ ಸಂಸ್ಕೃತಿಯ ಬೆನ್ನೆಲುಬು. ಸಮಾಜ, ದೇಶ, ವಿಶ್ವ, ಸಮಸ್ತ ಜೀವಕೋಟಿ – ಈ ಎಲ್ಲ ವಲಯಗಳಲ್ಲೂ ಶಾಂತಿ, ಸಮೃದ್ಧಿ, ಪ್ರೀತಿಗಳನ್ನು ತರುವ, ಎಲ್ಲರಿಗೂ ಸತ್ಯದ ಬೆಳಕನ್ನು ನೀಡುವ ಆಶಯ ಈ ಧರ್ಮದಲ್ಲಿದೆ.

ವಿಜ್ಞಾನಿ



ವಿಜ್ಞಾನವೆಂದರೇನು? ಭಗವಂತನನ್ನು ವಿಶೇಷ ರೂಪದಿಂದ ಅರಿಯುವಿಕೆ. ಕಟ್ಟಿಗೆಯಲ್ಲಿ ಬೆಂಕಿಯಿದೆ ಎಂಬ ಅರಿವು ಮತ್ತು ದೃಢಶ್ರದ್ಧೆಗೆ 'ಜ್ಞಾನ' ಅಂತ ಹೆಸರು. ಅದರ ಬೆಂಕಿಯಿಂದ ಅನ್ನ ಬೇಯಿಸಿ ಉಂಡು ತಿಂದು, ಹೃಷ್ಟಪುಷ್ಟರಾಗುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನಿದ್ದಾನೆ ಎಂಬುದರ ಸ್ವಾತ್ಮಾನುಭವ ಹೊಂದುವುದಕ್ಕೆ 'ಜ್ಞಾನ' ಅಂತ ಹೆಸರು. ಆದರೆ ಆತನೊಡನೆ ಸಲಿಗೆಯಿಂದ ಮಾತಕತೆಯಾಡುವುದಕ್ಕೆ, ಆತನೊಡನೆ ವಾತ್ಸಲ್ಯ, ಸಖ್ಯ, ದಾಸ್ಯ, ಮಧುರ – ಈ ಭಾವಗಳಿಂದ ಆನಂದಪಡುವುದಕ್ಕೆ 'ವಿಜ್ಞಾನ' ಅಂತ ಹೆಸರು. ಭಗವಂತನೇ ಈ ಜೀವಜಗತ್ತು ಎಲ್ಲವೂ ಆಗಿದ್ದಾನೆ ಎಂಬುದರ ಪ್ರತ್ಯಕ್ಷದರ್ಶನಕ್ಕೆ 'ವಿಜ್ಞಾನ' ಅಂತ ಹೆಸರು.

❋ ಯಾರಿಗೆ ಬೆಳಕಿನ ಅರಿವು ಇದೆಯೋ, ಆತನಿಗೆ ಕತ್ತಲೆಯ ಅರಿವೂ ಇರುತ್ತದೆ. ಯಾರಿಗೆ ಸುಖದ ಬೋಧೆ ಇದೆಯೋ, ಆತನಿಗೆ ದುಃಖದ ಬೋಧೆಯೂ ಇರುತ್ತದೆ. ಯಾರಿಗೆ ಒಳ್ಳೆಯದರ ತಿಳಿವು ಇರುವುದೋ, ಆತನಿಗೆ ಕೆಟ್ಟದರ ತಿಳಿವೂ ಇರುತ್ತದೆ. ಯಾರಿಗೆ ನಾನು ಎಂಬುದರ ಅರಿವು ಇರುವುದೋ, ಅತನಿಗೆ ನೀನು ಎಂಬುದರ ಅರಿವೂ ಇರುತ್ತದೆ.

❋ ಬ್ರಹ್ಮಜ್ಞಾನವಸ್ಥೆಗೂ ಅತೀತವಾದದ್ದು ಬೇರೊಂದಿದೆ. ಜ್ಞಾನ ದೊರೆತ ಮೇಲೆ ವಿಜ್ಞಾನ. ಯಾರಿಗೆ ಜ್ಞಾನದ ಅರಿವು ಇದೆಯೋ, ಅತನಿಗೆ ಅಜ್ಞಾನದ ಅರಿವೂ ಇರುತ್ತದೆ. ವಸಿಷ್ಠ ತನ್ನ ನೂರು ಮಕ್ಕಳನ್ನೂ ಕಳೆದುಕೊಂಡಿದ್ದಕ್ಕಾಗಿ ಶೋಕಾಕ್ರಾಂತನಾದ. ವಸಿಷ್ಠನಂಥ ಜ್ಞಾನಿ ಏಕೆ ಪುತ್ರಶೋಕಾಕ್ರಾಂತನಾಗಬೇಕು ಎಂಬುದಾಗಿ ಲಕ್ಷ್ಮಣ ರಾಮನನ್ನು ಕೇಳಿದಾಗ, ಆತ ಹೇಳಿದ: 'ನೀನು ಜ್ಞಾನಾಜ್ಞಾನಗಳಿಗೆ ಅತೀತನಾಗು. ಯಾರಲ್ಲಿ ಜ್ಞಾನವು ಇರುತ್ತದೆಯೋ, ಆತನಲ್ಲಿ ಅಜ್ಞಾನವೂ ಇರುತ್ತದೆ. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ, ಬೇರೊಂದು ಮುಳ್ಳನ್ನು ಹುಡುಕಿ ತಂದು ಅದನ್ನು ತೆಗೆಯಬೇಕಾಗುತ್ತದೆ; ಬಳಿಕ ಎರಡನೆ ಮುಳ್ಳನ್ನೂ ಬಿಸಾಡಿಬಿಡಬೇಕು.

❋ ಕೆಲವರು ಹಾಲಿನ ವಿಷಯವಾಗಿ ಕೇಳಿದ್ದಾರೆ, ಇನ್ನು ಕೆಲವರು ಅದನ್ನು ನೋಡಿದ್ದಾರೆ, ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ಯಾರು ಅದರ ವಿಷಯವಾಗಿ ಕೇವಲ ಕೇಳಿದ್ದಾನೋ ಆತ 'ಅಜ್ಞಾನಿ'. ಯಾರು ಅದನ್ನು ನೋಡಿದ್ದಾನೊ ಆತ 'ಜ್ಞಾನಿ'. ಆದರೆ ಯಾರು ಅದನ್ನು ಕುಡಿದಿದ್ದಾನೊ ಆತ 'ವಿಜ್ಞಾನಿ'.

❋ ವಿಜ್ಞಾನ ದೊರೆತ ನಂತರ ಸಂಸಾರದಲ್ಲೂ ಇರಬಹುದು. ಆಗ ಬಹಳ ಸ್ಪಷ್ಟವಾಗಿ ಅನುಭವವಾಗುತ್ತದೆ, ಭಗವಂತನೇ ಈ ಜೀವ ಜಗತ್ತು ಆಗಿದ್ದಾನೆ. ಆತ ಈ ಸಂಸಾರದಿಂದ ಪ್ರತ್ಯೇಕವಲ್ಲ ಎಂಬುದಾಗಿ.

❋ ಚಾವಣಿಯ ಮೇಲಕ್ಕೆ ಹತ್ತಿದ ನಂತರ ಗೊತ್ತಾಗುತ್ತದೆ, ಯಾವ ವಸ್ತುಗಳಿಂದ – ಇಟ್ಟಿಗೆ, ಸುಣ್ಣ, ಇಟ್ಟಿಗೆ ಚೂರು – ಚಾವಣಿ ತಯಾರಾಗಿದೆಯೋ, ಅದೇ ವಸ್ತುಗಳಿಂದ ಹಂತಗಳೂ ತಯಾರಾಗಿವೆ ಎಂದು.

❋ ಅಜ್ಞಾನ, ಜ್ಞಾನ, ವಿಜ್ಞಾನ. ಜ್ಞಾನಿಗೆ ತೋರುತ್ತದೆ, ಇರುವವನು ಭಗವಂತನೊಬ್ಬನೇ, ಆತನೇ ಕರ್ತೃ, ಆತನೇ ಸೃಷ್ಟಿ – ಸ್ಥಿತಿ – ಪ್ರಳಯ ಕಾರ್ಯ ಮಾಡುತ್ತಾನೆ ಎಂಬುದಾಗಿ. ವಿಜ್ಞಾನಿಗೆ ತೋರುತ್ತದೆ, ಆತನೇ ಎಲ್ಲವೂ ಎಂಬುದಾಗಿ.

❋ ಜ್ಞಾನಿ–ಸಾಧುವಿಗೂ, ವಿಜ್ಞಾನಿ–ಸಾಧುವಿಗೂ ವ್ಯತ್ಯಾಸವಿದೆ. ಜ್ಞಾನಿ–ಸಾಧು ಕುಳಿತುಕೊಳ್ಳುವ ವಿಧಾನವೇ ಬೇರೆ. ಆತ ಮೀಸೆ ಹುರಿ ಮಾಡಿ ಕುಳಿತುಕೊಳ್ಳುತ್ತಾನೆ. ಯಾರಾದರೂ ಆತನನ್ನು ನೋಡಲು ಬಂದರೆ ಅವರನ್ನು ಕೇಳುತ್ತಾನೆ: 'ಒಳ್ಳೇದು, ಏನಾದರೂ ಪ್ರಶ್ನೆ ಕೇಳುವುದು ಇದೆಯೆ?' ಆದರೆ ಯಾರು ಭಗವಂತನನ್ನು ಸತತ ದರ್ಶಿಸುತ್ತ ಆತನೊಡನೆ ಸ್ನೇಹಭಾವದಿಂದ ಮಾತುಕತೆಯಾಡುತ್ತಿರುವನೋ, ಆತ ಕೆಲವು ವೇಳೆ ಜಡನ ಹಾಗೆ, ಇನ್ನು ಕೆಲವು ವೇಳೆ ಪಿಶಾಚಿಯ ಹಾಗೆ, ಮತ್ತೆ ಕೆಲವು ವೇಳೆ ಬಾಲಕನ ಹಾಗೆ, ಮತ್ತೂ ಕೆಲವು ವೇಳೆ ಉನ್ಮತ್ತನ ಹಾಗೆ ವರ್ತಿಸುತ್ತಿರುತ್ತಾನೆ.

ಸಮಾಧಿಸ್ಥನಾದಾಗ ಬಾಹ್ಯಜ್ಞಾನಶೂನ್ಯನಾಗಿ ಜಡನಂತೆ ಕಾಣಬರುತ್ತಾನೆ. ಎಲ್ಲವೂ ಬ್ರಹ್ಮಮಯವಾಗಿರುವುದನ್ನು ನೋಡಿ ಆತ ಪಿಶಾಚಿಯ ಹಾಗೆ ವರ್ತಿಸುತ್ತಾನೆ; ಶುಚಿ, ಅಶುಚಿಯ ಬೋಧೆ ಇರದು. ಆತನ ನಡೆ, ನುಡಿ, ವ್ಯವಹಾರ ನೋಡಿ ಜನ ಭಾವಿಸಿಕೊಳ್ಳುತ್ತಾರೆ ಆತ ಹುಚ್ಚ ಎಂದು.

❋ ಬಾಲಕನ ಅವಸ್ಥೆಯಲ್ಲಿ ಇರುವಾಗ, ಏನೋ ಅರಿಯದ ಹಸುಳೆಯ ಹಾಗೆ, ಚಿಕ್ಕ ಹುಡುಗನಂತೆ ಹುಡುಗಾಟವಾಡುತ್ತಿರುತ್ತಾನೆ, ಮತ್ತೆ ಕೆಲವು ವೇಳೆ ಉಪದೇಶವೀಯುತ್ತಾನೆ – ವೀರ ಯುವಕ ವ್ಯಕ್ತಿಯ ಹಾಗೆ.

❋ ಜ್ಞಾನದ ಮೊದಲನೆ ಚಿಹ್ನೆ ಶಾಂತಸ್ವಭಾವ, ಎರಡನೆಯದು ಅಭಿಮಾನಶೂನ್ಯತೆ. ಜ್ಞಾನಿ ಸಾಧುಗಳ ಮುಂದೆ ತ್ಯಾಗಿ. ಕರ್ಮಕ್ಷೇತ್ರದಲ್ಲಿ – ಅಂದರೆ ಲೆಕ್ಚರ್–ಗಿಕ್ಚರ್ ಕೊಡುವ ಸಮಯದಲ್ಲಿ ಸಿಂಹಸದೃಶ, ಹೆಂಡತಿಯ ಎದುರು ರಸಿಕರಾಜ, ರಸಿಕ ಪಂಡಿತ.

❋ ಬ್ರಹ್ಮಜ್ಞಾನವನ್ನು ಕೃಪೆಮಾಡಿದ ನಂತರವೂ ಭಗವಂತ ಭಕ್ತನಲ್ಲಿ ಸ್ವಲ್ಪ 'ಅಹಂ' ಅನ್ನು ಉಳಿಸಿಬಿಟ್ಟಿರುತ್ತಾನೆ. ಆ 'ಅಹಂ' 'ಭಕ್ತನ ಅಹಂ' 'ವಿದ್ಯೆಯ ಅಹಂ'. ಆ 'ಅಹಂ' ಮೂಲಕ ಭಗವಂತನ ಅನಂತ ಲೀಲೆಯನ್ನು ಆಸ್ವಾದಿಸುತ್ತಾನೆ.

ಶ್ರೀರಾಮಕೃಷ್ಣ ವಚನವೇದ ದಿಂದ

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ-೭



''ಮತ್ತೊಂದು ದಿನ ಧ್ಯಾನ ಮಾಡಲು ಕಲಿಸುತ್ತಿದ್ದರು – ನಾನು ಚಿಕ್ಕವನಾದರೂ ಕೂಡ ನನ್ನನ್ನು ಏಕಾಂತಕ್ಕೆ ಕರೆದುಕೊಂಡರು. ನನ್ನ ಮನದಲ್ಲಿ ಆಗ ಸ್ವಲ್ಪವೂ ಗೊಂದಲವಿರುತ್ತಿರಲಿಲ್ಲ. ದೊಡ್ಡವನಾದ ಮೇಲೂ ಸೊಂಟದ ಮೇಲೆ ಬಟ್ಟೆಯನ್ನು ಸುತ್ತಿಕೊಂಡು ಹೊರಗೆ ಹೋಗುತ್ತಿದ್ದೆ, ಶೌಚಕ್ಕೆ ಹೋಗುತ್ತಿದ್ದೆ. ಜನರೆದುರು ನನಗೆ ನಾಚಿಕೆಯಾಗುತ್ತಿರಲಿಲ್ಲ. ನನ್ನ ಪ್ರಾಯದ ಹುಡುಗರಿಗೆ ಹಾಗೆ ಮಾಡಲು ನಾಚಿಕೆಯಾಗುತ್ತಿತ್ತು, ಆದರೆ ನನಗಾಗುತ್ತಿರಲಿಲ್ಲ. 'ನಾಚಿಕೆ ಇಲ್ಲದಿರುವುದು' ಎಂದರೇನೆಂದೇ ನನಗಾಗ ಅರ್ಥವಾಗುತ್ತಿರಲಿಲ್ಲ.

''ಆಗ ನನ್ನ ಮನಸ್ಸು ಗೊಂದಲಕ್ಕೊಳಗಾಗುತ್ತಿರಲಿಲ್ಲ. ಆದರೂ ಠಾಕೂರರು ನನಗೆ ಕಲಿಸಿದರು: 'ನೋಡು, ಧ್ಯಾನಿಸುತ್ತಿರುವಾಗ ಮನಸ್ಸು ಆಕಡೆ, ಈಕಡೆ ಹೋದರೆ ಮನೋಯೋಗದಿಂದ ಚೆನ್ನಾಗಿ ಜಪ ಮಾಡು. ಅದರಿಂದಲೂ ಸಾಧ್ಯವಾಗದಿದ್ದರೆ ಜಪದ ಮೇಲಿನ ಆಸಕ್ತಿಯನ್ನೇ ಬಿಟ್ಟು ನಿನಗೆ ಹೇಗೆ ಬೇಕೋ ಹಾಗೆ ಧ್ಯಾನ ಮಾಡು. ಈ ರೀತಿ ಧ್ಯಾನ ಮಾಡಿದಾಗ ಜಪವೂ ಇರುತ್ತದೆ, ಆಂತರಿಕವಾಗಿ ಧ್ಯಾನವೂ ಇರುತ್ತದೆ. ಈ ರೀತಿಯಾಗಿ ಭಾವಿಸು: 'ಹೃದಯ ಮಂದಿರದಲ್ಲಿ ನನ್ನ ಇಷ್ಟದೇವತೆ ನೆಲೆಸಿದ್ದಾನೆ. ಸುಂದರ, ಶಾಂತ ನಗುಮುಖ.' ಆರತಿ ಮಾಡುತ್ತಿರುವಂತೆ ಭಾವಿಸು – ದೀಪದಾರತಿ, ಕರ್ಪೂರದಾರತಿ, ಹೂವು, ಚಾಮರಗಳಿಂದ – ಹೀಗೆ ಆರತಿ ಮುಗಿಯುತ್ತಲೇ ಇಲ್ಲವೆಂದು ಭಾವಿಸು. ಬಹಳ ಹೊತ್ತಿನ ಬಳಿಕ ಆರತಿಯಾದ ಮೇಲೆ ಹೂವಿನ ಮಾಲೆಯನ್ನು ಪೋಣಿಸಲು ನೀನು ಕುಳಿತೆ – ತುಂಬ ಚೆಲುವಾದ ಹೂಗಳು, ಎಷ್ಟು ಸುಂದರವೋ ಅಷ್ಟೇ ಸುಗಂಧಭರಿತವೂ ಕೂಡ. ದೊಡ್ಡ ಮಲ್ಲಿಗೆ ಹೂವಿನ ದಿಂಡು, ಇನ್ನೂ ಅನೇಕ ಹೂಗಳು. ಆತನ ಪಾದಪದ್ಮಗಳಿಗೆ ಹಿಡಿಹಿಡಿಯಾಗಿ ಪದ್ಮಪುಷ್ಪದ ಅಂಜಲಿಯನ್ನು ಅರ್ಪಿಸು – ಕೆಂದಾವರೆ, ಬಿಳಿದಾವರೆ, ತಾವರೆ ಹೂಗಳು ಮುಗಿದ ಮೇಲೆ ದಾಸವಾಳ ಆರಂಭವಾಯಿತು. ದಾಸವಾಳದ ಸ್ತೂಪವೇ ಆಯಿತು. ಅದಾದ ಮೇಲೆ ಇನ್ನೂ ಅನೇಕ ಹೂಗಳು – ಬಿಳಿ ಹೂ, ನಾನಾ ಬಗೆಯ ಹೂಗಳು. ಒಂದಾದ ಮೇಲೊಂದು – ಮುಗಿಯಲು ಬಿಡಬೇಡ! ಹೂಗಳ ನಂತರ ನಾನಾಬಗೆಯ ಫಲಮೂಲ, ಸಿಹಿತಿಂಡಿ; ಅದನ್ನು ಸುಂದರವಾಗಿ ಸಜ್ಜುಗೊಳಿಸಿ ನಿವೇದಿಸುತ್ತಿರುವೆ. ಹೀಗೆ ಮನಸ್ಸನ್ನು ಅದರಲ್ಲಿ ತೊಡಗಿಸಬೇಕು. ಮನಸ್ಸು ಯಾವಾಗಲೂ ವಿಷಯಸುಖಗಳತ್ತ ಸಾಗುತ್ತದೆ.(ರೂಪ, ರಸ, ಗಂಧ, ಶಬ್ದ, ಸ್ಪರ್ಶ) ಈ ಸುಖಗಳನ್ನು ಭಗವಂತನೆಡೆಗೆ, ಇಷ್ಟದೇವತೆಯೆಡೆಗೆ ತಿರುಗಿಸಿದರೆ ಅವುಗಳ ದೋಷಗಳು ಕಳೆದುಹೋಗುತ್ತವೆ.'

''ಸದಾ ಭಗವಂತನ ಸ್ಮರಣೆ, ಮನನ, ಆತನನ್ನೇ ಸಂಪೂರ್ಣ ಅವಲಂಬಿಸುವುದು – ಇದೇ ಸಾಧನೆ, ಇದೇ ಕೊನೆಯ ಮಾತು. ನಾವು ಠಾಕೂರರನ್ನು ಕಂಡಿದ್ದೇವೆ. ಅವರ ಬಳಿ ಕಲಿತು ನಮ್ಮ ಸ್ವಂತ ಜೀವನವನ್ನು ಸಾಧ್ಯವಾದಷ್ಟು ರೂಪಿಸಿಕೊಂಡಿದ್ದೇವೆ. ಠಾಕೂರರ ಹಾಗೂ ಅವರ ಶಿಷ್ಯರುಗಳ ಜೀವನವನ್ನು ನೋಡಿ ನಿಮ್ಮ ಸ್ವಂತ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸದಿದ್ದರೆ, ಇಷ್ಟೊಂದು ಕೆಲಸಕಾರ್ಯ ಮಾಡುವುದರಲ್ಲಿ ಅರ್ಥವಿಲ್ಲ. ಪ್ರತಿಕ್ಷಣವೂ ಪ್ರಾರ್ಥನೆ ಮಾಡು: 'ಠಾಕೂರ್, ದರ್ಶನ ನೀಡು, ದರ್ಶನ ನೀಡು. ಯೂರೋಪು, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ಹೀಗೆ ಎಷ್ಟೊಂದು ದೂರದೇಶಗಳ ಜನರು ನಿನ್ನನ್ನು ನೋಡುತ್ತಾರೆ, ಅವರಿಗೆ ನಿನ್ನ ಭಾವ ತಲುಪುತ್ತಿದೆ! ಅಲ್ಲಿನ ಅದೆಷ್ಟು ಜನರಿಗೆ ನೀನು ಸ್ವಪ್ನದರ್ಶನವನ್ನು ನೀಡುತ್ತೀಯಾ, ನನಗೇಕೆ ದರ್ಶನ ನೀಡುವುದಿಲ್ಲ? ನಾವು ನಿನಗೆ ಇಷ್ಟು ಸಮೀಪದಲ್ಲಿದ್ದೇವೆ, ನಮಗೂ ವಿಶ್ವಾಸ, ವ್ಯಾಕುಲತೆಗಳನ್ನು ನೀಡು; ತೀವ್ರ ವೈರಾಗ್ಯವನ್ನು ನೀಡು. 'ಇಂದೂ ಭಗವಂತನನ್ನು ನೋಡಲಿಲ್ಲ!' ಎಂಬ ಭಾವ ಪ್ರತಿದಿನವೂ ನಿನ್ನನ್ನು ಕೊರೆಯುತ್ತಿರಬೇಕು.''

* * *

ನಿನ್ನೆ ರಾತ್ರಿ ಎರಡು ಗಂಟೆಯ ಸಮಯದಲ್ಲಿ ಎಚ್ಚರಗೊಂಡೆ. ನನಗೆ ಭಾರೀ ಆನಂದವಾಗುತ್ತಿತ್ತು. ಏಕೋ ತಿಳಿಯೆ, ಕಿಟಕಿಯನ್ನು ತೆಗೆದು ಹಾಡಲಾರಂಭಿಸಿದೆ:

(೧) **ಪರ್ವತ ಪಾಥಾರ್ ...** *(ಗಿರಿಶಿಖರ ವ್ಯೋಮದಲ್ಲಿ..)*

(೨) **ಏಕ್ ಸನಾತನ ಪುರುಷ ನಿರಂಜನ**
ಆದಿ ಅನಾದಿ ಗುರು!.....
(ಏಕ ಪುರಾತನ ಪುರುಷ ನಿರಂಜನ
ಪಾದದಿ ಚಿತ್ತವ ನಿಲ್ಲಿಸೋ..)

'' ಈ ಹಾಡು 'ಕಥಾಮೃತ'(ಶ್ರೀರಾಮಕೃಷ್ಣ ವಚನವೇದದ ಮೂಲ ಬಂಗಾಳಿ ಶೀರ್ಷಿಕೆ) ದಲ್ಲಿದೆ; ಅದನ್ನು ಏರುಧ್ವನಿಯಲ್ಲಿ ಹಾಡಿದೆ. ಗೋಪಾಲ್ ಮಹಾರಾಜರಿಗೆ (ಸ್ವಾಮಿ ಗುಣಾತೀತಾನಂದ) ಅದು ಕೇಳಿಸಿತು. ಶರೀರ ಸ್ವಲ್ಪ ಚೆನ್ನಾಗಿದ್ದ ದಿನ ಯಾವ ಬಂಧನವೂ ಇರುವುದಿಲ್ಲ. ನೀನೇ ನೋಡುತ್ತಿದ್ದೀಯಲ್ಲಾ, ನಾನು ಹುಡುಗರೊಂದಿಗೂ ಜಗಳವಾಡುತ್ತೇನೆ.

''ಬೇಲೂರಿನಲ್ಲೊಂದು ದಿನ, ಇನ್ನೂ ಬೆಳಗಾಗಿರಲಿಲ್ಲ; ಆಗಲೇ ಎದ್ದುಬಿಟ್ಟೆ. ಎದ್ದ ತಕ್ಷಣ ಸ್ವಾಮೀಜಿಯನ್ನು ನೋಡುವ ಆಸೆಯಾಯಿತು. ಅವರ ಕೋಣೆಯ ಬಳಿಗೆ ಹೋಗಿ, ನಿಧಾನವಾಗಿ ಪ್ರವೇಶಿಸಿದೆ. ಸ್ವಾಮೀಜಿ ಮಲಗಿದ್ದಾರೆ ಎಂದು ಭಾವಿಸಿದೆ. ಆದರೆ ಅವರು ಎಚ್ಚರವಾಗಿದ್ದರು. ಒಳಗೆ ಕಾಲಿಡುತ್ತಲೇ ಹಾಡಿನ ರೂಪದಲ್ಲಿ ಉತ್ತರ ಸಿಕ್ಕಿತು:

Knocking Knocking – who is there?
Waiting, Waiting – O how fair!
Waiting, waiting – brother dear.

''ಆಗ ಬೇಲೂರು ಮಠ ನೀಲಾಂಬರ ಮುಖರ್ಜಿಯ ತೋಟದಲ್ಲಿತ್ತು. ಒಂದು ದಿನ ರಾತ್ರಿ ಎರಡು ಗಂಟೆಯವರೆಗೂ ವೇದಾಂತದ ಚರ್ಚೆ ನಡೆಯಿತು. ಮಾನವನ ಆತ್ಮಕ್ಕೆ ಅಧೋಗತಿ ಬರುವುದೆ? ಪುನರ್ಜನ್ಮ ಇದೆಯೆ, ಇಲ್ಲವೆ? ಸ್ವಾಮೀಜಿ ಚರ್ಚೆ ಶುರುಮಾಡಿ ಮಧ್ಯಸ್ಥಿಕೆ ವಹಿಸಿ, ಸುಮ್ಮನಿದ್ದುಕೊಂಡು ನಗುತ್ತಿದ್ದಾರೆ. ಯಾವ ಪಕ್ಷಕ್ಕೆ ಮುಂದುವರೆಸಲು ಸಾಧ್ಯವಾಗುತ್ತಿಲ್ಲವೋ ಅವರಿಗೆ ಹೊಸ ವಿಚಾರವನ್ನು ಕೊಟ್ಟು ಪ್ರೇರಣೆ ನೀಡುತ್ತಿದ್ದಾರೆ. ರಾತ್ರಿ ೨ ಗಂಟೆಯ ನಂತರ ಚರ್ಚೆ ನಿಲ್ಲಿಸಿದಾಗ ಎಲ್ಲರೂ ಮಲಗಿ ನಿದ್ರಿಸಿದರು. ೪ ಗಂಟೆ ಬಾರಿಸುತ್ತಲೇ ಸ್ವಾಮೀಜಿ ನನ್ನನ್ನೆಬ್ಬಿಸಿದರು. ಅವರು ಮೊದಲೇ ತಮ್ಮ ಕೆಲಸಗಳನ್ನೆಲ್ಲ ಮುಗಿಸಿ, ಯಾವುದೋ ಹಾಡನ್ನು ಗೊಣಗುಟ್ಟುತ್ತಾ ನಡೆದಾಡುತ್ತಿದ್ದಾರೆ. ಅವರು ನನಗೆ ಹೇಳಿದರು, 'ಗಂಟೆ ಬಾರಿಸು. ಎಲ್ಲರೂ ಏಳಲಿ. ಅವರು ಮಲಗಿರುವುದನ್ನು ನನಗೆ ನೋಡಲಾಗುತ್ತಿಲ್ಲ.' ಅದಕ್ಕೆ ನಾನೆಂದೆ, 'ಈಗ ತಾನೆ ಎರಡು ಗಂಟೆಗೆ ಮಲಗಿದ್ದಾರೆ, ಸ್ವಲ್ಪ ನಿದ್ರಿಸಲಿ.'

''ಅದಕ್ಕೆ ಸ್ವಾಮೀಜಿ ಕಟುವಾಗಿ ಹೇಳಿದರು, 'ಏನು? ಎರಡು ಗಂಟೆಗೆ ಮಲಗಿದರೆಂದು ಆರು ಗಂಟೆಗೆ ಏಳಬೇಕೆ? ಅದನ್ನು ನನಗೆ ಕೊಡು. ನಾನೇ ಗಂಟೆ ಬಾರಿಸುತ್ತೇನೆ. ನಾನಿರುವಾಗಲೇ ಹೀಗೆ ಮಾಡುತ್ತೀರಲ್ಲ ! ನಾನು ಮಠವನ್ನು ಸ್ಥಾಪಿಸಿದ್ದು ನಿದ್ದೆ ಮಾಡಲೆಂದೇ?' ಆಗ ನಾನು ಬಹಳ ಜೋರಾಗಿಯೇ ಗಂಟೆ ಬಾರಿಸಿದೆ. ಎಲ್ಲರೂ ಥಟ್ಟನೆ ಎದ್ದು ಕೂಗಾಡತೊಡಗಿದರು. 'ಯಾರವನು? ಯಾರವನು?' ಅಂತ. ಅವರು ನನ್ನನ್ನು ಸೀಳಿಬಿಡುತ್ತಿದ್ದರೋ ಏನೋ. ಆದರೆ ನನ್ನ ಹಿಂದೆ ಸ್ವಾಮೀಜಿ ನಿಂತು ನಗುತ್ತಿರುವುದನ್ನು ನೋಡಿ, ಎಲ್ಲರೂ ಕಣ್ಣುಜ್ಜಿಕೊಳ್ಳುತ್ತಾ ಅಲ್ಲಿಂದ ಆ ಕೋಣೆಯತ್ತ ಹೊರಟುಹೋದರು.

''ಬಹುಶಃ ಬೇಲೂರಿನಲ್ಲಿರಬೇಕು – ಹರಿ ಮಹಾರಾಜರು ಒಂದು ದಿನ ಧ್ಯಾನಕ್ಕೆ ಹೋಗಲಿಲ್ಲವೋ, ಅಥವಾ ತಡವಾಗಿತ್ತೋ ಗೊತ್ತಿಲ್ಲ. ಸ್ವಾಮೀಜಿ ಕೇಳಿದರು, 'ಏಕೆ?' ಅಂತ. ಹರಿ ಮಹಾರಾಜರು ಉತ್ತರಿಸಿದರು, 'ಸ್ವಲ್ಪ ಚಳಿ ಜ್ವರ ಬಂದ ಹಾಗಿದೆ.' ಮೊದಲು ಸ್ವಾಮೀಜಿ ಒಂದೇ ಸಮನೆ ಬೈದರು. 'ಈಗಲೂ ಇದೇ ದೇಹ ದೇಹ! ಛಿ!' ಹರಿ ಮಹಾರಾಜರು ನಮ್ಮೆಲ್ಲರ ಪೈಕಿ ಕಠೋರ ಸ್ವಭಾವದವರು, ತಪಸ್ವಿ, ಸಹನಶೀಲರು. ಸ್ವಾಮೀಜಿ ಮಾತುಗಳನ್ನು ಕೇಳಿ ಮೌನವಾಗಿದ್ದರು. ನಂತರ ಸ್ವಾಮೀಜಿ ಅವರನ್ನು ಪ್ರೀತಿಯಿಂದ ಸಂತೈಸಿದರು, 'ನಿಮ್ಮನ್ನೆಲ್ಲ ಏಕೆ ಬಯ್ಯುತ್ತೇನೆ ಗೊತ್ತೆ? ನೀವೆಲ್ಲ ಠಾಕೂರರ ಮಕ್ಕಳು. ನಿಮ್ಮನ್ನು ನೋಡಿ ಪ್ರಪಂಚ ಕಲಿಯುತ್ತದೆ. ನಮ್ಮಲ್ಲಿ ಸ್ವಲ್ಪ ಕುಂದುಕೊರತೆಗಳನ್ನು ನೋಡಿದರೂ ನನಗೆ ಬಹಳ ಬೇಸರವಾಗುತ್ತದೆ. ನೀವು ಸ್ವಲ್ಪ ಅಜಾಗರೂಕರಾಗಿದ್ದರೆ, ಜನರು ಮತ್ತಷ್ಟು ಅಜಾಗರೂಕರಾಗುತ್ತಾರೆ. ಠಾಕೂರರು ಹೇಳುತ್ತಿದ್ದರಲ್ಲವೆ, 'ನಾನು ೧೬ ಪಾಲು ಮಾಡಿದರೆ ನೀವು ೧ ಪಾಲಾದರೂ ಮಾಡಿ. ಅದೇ ರೀತಿ ನೀವೇನಾದರೂ ೧ ಪಾಲು ಮಾಡಿದರೆ ಜನರು ಅದರಲ್ಲಿ ೧೬ನೆಯ ೧ ಪಾಲು ಮಾಡುತ್ತಾರೆ. ನೀವು ಅಷ್ಟೂ ಕೂಡ ಮಾಡದಿದ್ದರೆ ಅವರೆಲ್ಲಿ ನಿಲ್ಲುವರು?' ಅಂತ?' ''

ರಾತ್ರಿ ೮ ಗಂಟೆಗೆ ಕೋಣೆಯಲ್ಲಿ ಬಾಬಾ ಒಬ್ಬ ಬ್ರಹ್ಮಚಾರಿಗೆ ಹೇಳುತ್ತಿದ್ದಾರೆ, ''ಊಟವಾದ ಮೇಲೆ ಒಂಬತ್ತು ಗಂಟೆಯ ಹೊತ್ತಿಗೆ ಬಾ. 'ಸ್ಮೃತಿಕಥೆ'ಯನ್ನು ಬರೆಸುತ್ತೇನೆ. ಆಗ ತುಂಬಾ ಹೊತ್ತು ಬರೆಸಬಹುದು.'' ಬ್ರಹ್ಮಚಾರಿಗಳು ಊಟವಾದ ಮೇಲೆ ತನಗೆ ಬರೆಯುವುದು ಕಷ್ಟವೆಂದು ಹೇಳಿದರೆಂದು ತೋರುತ್ತದೆ. ಅದಕ್ಕೆ ಬಾಬಾ ಸ್ವಲ್ಪ ದನಿ ಏರಿಸಿ ಹೇಳುತ್ತಿದ್ದಾರೆ, ''ಏನು? ಆಗುವುದಿಲ್ಲವೆ? ಊಟವಾದ ಕೂಡಲೆ ನಿದ್ರೆ? ಒಂಬತ್ತು ಗಂಟೆಗೇನೆ? ಜಪಧ್ಯಾನವಂತೂ ಬಿಟ್ಟೇಬಿಡು, ಸ್ವಲ್ಪ ಓದುವುದೂ ಬೇಡವೇ? ನಾನು ಹೇಳುತ್ತಿದ್ದೇನೆ, ಆದರೂ ಆಗುವುದಿಲ್ಲವೆಂದು ನೀನು ಹೇಳುತ್ತಿದ್ದೀಯಲ್ಲಾ! ನಾನು ಮುದುಕ, ಎಚ್ಚರವಿದ್ದು ಆಲೋಚಿಸುತ್ತ ಬರೆಸುತ್ತೇನೆ. ಆದರೆ ನೀನು ಯುವಕ – ನಿನ್ನಿಂದ ಸಾಧ್ಯವಿಲ್ಲವೆ?'' ಹೀಗೆನ್ನುತ್ತಾ ಬಾಬಾ ಎದ್ದು ಕುಳಿತರು. ಅವರ ಕಣ್ಣು, ಮುಖ ಉಗ್ರವಾಗಿವೆ. ಅವರು ಮತ್ತೆ ಹೇಳುತ್ತಿದ್ದಾರೆ, ''ಸ್ವಾಮೀಜಿಗೆ ಇದೆಲ್ಲ ಮೊದಲೇ ಗೊತ್ತಿತ್ತು. ಆದ್ದರಿಂದಲೇ ಎಚ್ಚರಿಕೆ ನೀಡುತ್ತ ಹೇಳಿದರು – 'monastic indolence (ಸನ್ಯಾಸಿಗಳ ಆಲಸ್ಯ) ಬಹಳ ಭಯಂಕರವಾದ್ದು. ಅದರದ್ದೇ ಭಯ, ನಾಳೆ ನಮಗಾಗುವುದೂ ಇದೇ –

ಬರಿಯ ಊಟ, ನಿದ್ರೆ! ಅದರಿಂದ ಶ್ರೇಷ್ಠ ಚಿಂತನೆ, ಉದಾತ್ತ ಭಾವನೆಗಳನ್ನು ಗ್ರಹಿಸುವ ಶಕ್ತಿ ಹೊರಟು ಹೋಗುತ್ತದೆ.' ಎಷ್ಟು ದೊಡ್ಡ ಆದರ್ಶವನ್ನಿಟ್ಟಕೊಂಡು ಇಲ್ಲಿಗೆ ಬಂದಿದ್ದೀಯಾ, ಆಲೋಚಿಸು ನೋಡೋಣ. ಹೀಗೆ ಇದ್ದುಕೊಂಡೇ ಸ್ವಾಮೀಜಿಯ ಸಂಘದ ಸೇವೆ ಮಾಡುವೆಯೆಂದು ಭಾವಿಸಿದ್ದೀಯಾ? ಧ್ಯಾನ-ಧಾರಣೆ ನಿನಗೆ ಸಾಧ್ಯವಿಲ್ಲ, ಮಣ್ಣು ಅಗೆಯಲೂ ಸಾಧ್ಯವಿಲ್ಲದಿದ್ದರೆ language (ಭಾಷೆ) ಕಲಿತುಕೋ. ದೇಶವಿದೇಶಗಳ ಭಾಷೆ, English, French, German ಇತ್ಯಾದಿ. ಅಷ್ಟು ದೂರ ಏಕೆ ಹೋಗಬೇಕು? ಸಂಸ್ಕೃತ, ಹಿಂದಿ, ಇವುಗಳನ್ನಾದರೂ ಚೆನ್ನಾಗಿ ಕಲಿ, ಅದರಿಂದಲೂ ಅನೇಕ ಕೆಲಸಗಳಾಗುತ್ತವೆ. ——ಗೆ ಹಿಂದೀ ಕಲಿಯಲು ಹೇಳಿದ್ದೆ. ಎಷ್ಟು ಚೆನ್ನಾಗಿ ಕಲಿತಿದ್ದಾನೆ! ನಿರರ್ಗಳವಾಗಿ ಮಾತನಾಡುತ್ತಾನೆ. ಯಾವುದೇ ಕೆಲಸವಾಗಲಿ, ಮಾಡು. ಇಲ್ಲದಿದ್ದರೆ ಸೋಮಾರಿಯಾಗುತ್ತೀಯಾ. ಆಗ ಏನೂ ಸಾಧ್ಯವಾಗದು. ಅದೂ ಇಲ್ಲ, ಇದೂ ಇಲ್ಲ ಎಂದಾಗುತ್ತದೆ. ನೀವು young men (ಯುವಕರು), ೯ ಗಂಟೆಯ ನಂತರ ಇನ್ನೇನೂ ಮಾಡಲಾಗುವುದಿಲ್ಲವೆಂದು ಹೇಳಲು ನಾಚಿಕೆಯಾಗುವುದಿಲ್ಲವೆ? ಮುದುಕ ಕೆಲಸ ಮಾಡಿ ಸಾಯುತ್ತಿರುವುದನ್ನು ನೀನು ಕಣ್ಣಾರೆ ನೋಡುತ್ತಿಲ್ಲವೆ? ನೋಡಿಯಾದರೂ ಸ್ವಲ್ಪ ಕಲಿತುಕೋ. ಸರಿ, ೯ ಗಂಟೆಗೆ ಮಲಗುತ್ತಿದ್ದೀಯಾ. ಬೆಳಿಗ್ಗೆ ೩ ಗಂಟೆಗೇ ಎದ್ದು ಸ್ವಲ್ಪ ಜಪಧ್ಯಾನಕ್ಕೆ ಕುಳಿತುಕೊಳ್ಳುತ್ತೀ ಎಂದಾದರೂ ಹೇಳಬಲ್ಲೆಯಾ? ನಿನಗೆ ಅದೂ ಸಾಧ್ಯವಿಲ್ಲ. ಯಥಾಪ್ರಕಾರ ೬ ಗಂಟೆಗೆ ಏಳುತ್ತೀಯಾ, ಮತ್ತೆ ಮಧ್ಯಾಹ್ನ ವಿಶ್ರಾಂತಿ –ಅಂದರೆ ೩ ಗಂಟೆ ನಿದ್ರೆ. ಇವರೆಲ್ಲ ೩ ಗಂಟೆಗೆ ನಿದ್ದೆಮಾಡಿ ಎದ್ದು ಹೇಳುತ್ತಾರೆ, 'ನಾನು ವಿಶ್ರಮಿಸುತ್ತಿದ್ದೆ!' ಅಂತ. ನಾವೆಲ್ಲ ವಿಶ್ರಾಂತಿ ಎಂದರೆ 'ಕಾರ್ಯಾಂತರ' ಎಂದು ಭಾವಿಸುತ್ತೇವೆ – ಸ್ವಲ್ಪ ಹೊತ್ತು ಮಲಗಿ, ಬಳಿಕ ಕುಳಿತು ಓದುವುದು.''

ಅದೇ ಬ್ರಹ್ಮಚಾರಿ ಒಂದು ದಿನ ಸಂಜೆ ತಲೆಗೊಂದು ಪಗಡಿ ಸುತ್ತಿಕೊಂಡು ಕೈಯಲ್ಲಿ ದಂಡ, ಕಮಂಡಲುವನ್ನು ಹಿಡಿದುಕೊಂಡು ಬಾಬಾ ಹತ್ತಿರ ಎರಡು ಬಾರಿ ಹಾದುಹೋದ. ಬಾಬಾ ಜಗಲಿಯಲ್ಲಿ ಕ್ಯಾಂಪ್‌ಕಾಟ್‌ನ ಮೇಲೆ ಕುಳಿತ್ತಿದ್ದಾರೆ. ಬ್ರಹ್ಮಚಾರಿಯನ್ನು ನೋಡಿ ಹೇಳಿದರು: ''ಏನು? ಏನು ಆಲೋಚಿಸುತ್ತಿದ್ದೀಯಾ? ದಂಡ, ಕಮಂಡಲುಗಳೇಕೆ? ನನಗೆ ಅರ್ಥವಾಯಿತು, ಅದನ್ನು ಬಾಯಿಬಿಟ್ಟು ಹೇಳಲಾಗದೆ? ನನಗೆ ಇದೆಲ್ಲ ಇಷ್ಟವಾಗುವುದಿಲ್ಲ. ಕರ್ಮಿಗೆ ಕಾವಿವಸ್ತ್ರ ಏಕೆ? ಬಿಳಿಯ ಬಟ್ಟೆ ಧರಿಸಿಕೊಂಡೇ ಯಾವುದಾದರೂ ಆಶ್ರಮದಲ್ಲಿ ಕೆಲಸ ಮಾಡುತ್ತಿರು. ತ್ಯಾಗ-ತಪಸ್ಸುಗಳನ್ನೂ ಮಾಡು. ಸಂನ್ಯಾಸಿಯಾಗುವುದು ಕೊನೆಗೆ. ಆಗ ಅದು ಇನ್ನೊಂದು ರೀತಿ. ಸಂನ್ಯಾಸಿ ಕಾಷಾಯ ಧರಿಸುತ್ತಾನೆ, ಭಿಕ್ಷಾವ್ರತ ಪಾಲಿಸಿ ಸಾಧನೆ ಮಾಡುತ್ತಾನೆ, ಪರಿವ್ರಾಜಕನಾಗುವನು. ನಿನಗದು ಸಾಧ್ಯವೆ?''

ಸಂಜೆಯ ಆರತಿಗೆ ಮುನ್ನ ಬಾಬಾ ಕೋಣೆಯ ಹೊರಗಿನ ಹಾಲ್‌ನಲ್ಲಿ, ಕುರ್ಚಿಯಲ್ಲಿ ಒಬ್ಬರೇ ಮೌನವಾಗಿ ಕುಳಿತಿದ್ದಾರೆ. ಹತ್ತಿರ ಯಾರೂ ಇಲ್ಲ. ಭಕ್ತ ಅವರ ಬಳಿ ಹೋದ. ಅವನಿಗೆ ಅವರು ಹೇಳಿದರು, ''ಎಲ್ಲಿ, ಸ್ವಲ್ಪ ಬೀಸಣಿಗೆ ತಾ ನೋಡೋಣ.''

ಭಕ್ತನು ನಿಧಾನವಾಗಿ ಅವರ ದೇಹಕ್ಕೆ ಗಾಳಿ ಬೀಸುತ್ತಿದ್ದಾನೆ. ಆಗ, ''ಸೆಕೆಗಾಗಿ ಅಲ್ಲ, ಕಾಲಿನ ಮೇಲೆ ದೊಡ್ಡ ಸೊಳ್ಳೆ ಕುಳಿತಿದೆ'' ಎಂದರು. ಭಕ್ತ ಆ ಪವಿತ್ರ ಸಂಜೆಯಲ್ಲಿ ಮೌನವಾಗಿ ನಿಧಾನವಾಗಿ ಅವರ ಕಾಲುಗಳಿಗೆ ಗಾಳಿ ಬೀಸತೊಡಗಿದ.

(ಮುಂದುವರಿಯುವುದು)

ಪಕ್ಷಿಗಳಲ್ಲೂ ಮಾನವೀಯ ಸಂವೇದನೆಗಳು

ಆ ದಿನಗಳಲ್ಲಿ ನಾನು ನನ್ನ ಹಳೆಯ ಮನೆಯ ತಾರಸಿಯ ಮೂಲೆಯಲ್ಲಿ ಪಾರಿವಾಳಗಳಿಗೆ ಪ್ರತಿದಿನ ಧಾನ್ಯವನ್ನು ಹಾಕುತ್ತಿದ್ದೆ. ಒಂದು ದಿನ ನಾನು ತುರ್ತು ಕಾರ್ಯಕ್ಕಾಗಿ ಒಬ್ಬರನ್ನು ಭೇಟಿಯಾಗಲು ಹೋಗಬೇಕಾಗಿತ್ತು. ಆದ್ದರಿಂದ ನಾನು ಹಕ್ಕಿಗಳಿಗೆ ಧಾನ್ಯವನ್ನು ಹಾಕುವಂತೆ ಪತ್ನಿಗೆ ಹೇಳಿ ಹೋದೆ. ನಾನು ಮರಳಿ ಬರಲು ಒಂದು ಗಂಟೆ ತಡವಾಯಿತು. ಬಂದು ನೋಡಿದರೆ ಪಾರಿವಾಳಗಳು ಛತ್ತಿನ ಮೇಲೆ ಕಣ್ಣು ಮುಚ್ಚಿಕೊಂಡು ಕುಳಿತಿದ್ದವು. ಪ್ರತಿದಿನ ಅವು ಧಾನ್ಯಗಳನ್ನು ತಿಂದು ಹಾರಿ ಹೋಗುತ್ತಿದ್ದವು. ನಾನು ಪತ್ನಿಗೆ ಕೇಳಿದೆ – ಅವಳು ಮಕ್ಕಳಿಗೆ ಶಾಲೆಗೆ ಕಳುಹಿಸುವ ಅವಸರದಲ್ಲಿ ಧಾನ್ಯ ಹಾಕಲು ಮರೆತಿದ್ದಳು ಎಂದು ಗೊತ್ತಾಯಿತು. ಅದನ್ನು ಕೇಳಿ ನನಗೆ ಕೋಪ ಬಂತು. ಕೂಡಲೇ ನಾನು ಒಂದು ಲೋಟದ ತುಂಬ ಧಾನ್ಯವನ್ನು ತೆಗೆದುಕೊಂಡು ಹೋಗಿ, ಅವುಗಳ ಮುಂದೆ ಎಸೆದೆ. ಮತ್ತೆ ಯಾವುದೋ ಕೆಲಸಕ್ಕಾಗಿ ನಾನು ಹೊರಗೆ ಹೋಗಬೇಕಾಗಿತ್ತು. ಮರಳಿ ಬಂದು ನೋಡಿದರೆ, ಧಾನ್ಯ ಹಾಗೇ ತಾರಸಿಯ ನೆಲದ ಮೇಲೆ ಬಿದ್ದಿದ್ದವು, ಪಾರಿವಾಳಗಳೂ ಹಾಗೆಯೇ ಕಣ್ಣುಮುಚ್ಚಿ ಮೌನವಾಗಿ ಕುಳಿತುಕೊಂಡಿದ್ದವು. ನನಗೆ ನಾನು ಮಾಡಿದ ತಪ್ಪಿನ ಅರಿವಾಯಿತು. ನಾನು ಕೋಪದ ಭರದಲ್ಲಿ ಅವಜ್ಞೆಯಿಂದ ಧಾನ್ಯವನ್ನು ಎಸೆದಿದ್ದೆ. ನಾನು ಬಾಗಿ ಪ್ರೀತಿಯಿಂದ, ಆಹಾರವನ್ನು ಸ್ವೀಕರಿಸು ಎಂದು ಹೇಳುತ್ತ ಅವಕ್ಕೆ ಕೊಟ್ಟಿರಲಿಲ್ಲ. ಈಗ ನಾನು ಮನಃಪೂರ್ವಕವಾಗಿ ಅವಕ್ಕೆ ಧಾನ್ಯವನ್ನು ತಿನ್ನುವಂತೆ ಕೇಳಿಕೊಂಡೆ. ಅಷ್ಟೇ ಅಲ್ಲ, ಅವು ತಿನ್ನದಿದ್ದರೆ ನಾನೂ ಉಪವಾಸ ಮಾಡುತ್ತೇನೆ ಎಂದು ಹೇಳಿದೆ. ಮರುಕ್ಷಣದಲ್ಲಿ ಎಲ್ಲ ಪಾರಿವಾಳಗಳೂ ಹಾರಿ ಬಂದು ಧಾನ್ಯವನ್ನು ತಿಂದವು.

ಯಾರಿಗೆ ಗೊತ್ತು, ಯಾವ ಜೀವಾತ್ಮಗಳು ಈ ಹಕ್ಕಿಗಳ ರೂಪದಲ್ಲಿ ನಮ್ಮ ಬಳಿಸಾರಿ ತಮ್ಮ ಬಾಕಿಯನ್ನು ತೀರಿಸಿಕೊಳ್ಳುತ್ತಿವೆಯೊ! ನಾವು ಅವುಗಳೊಂದಿಗೆ ವಿನಯ, ಆತ್ಮೀಯತೆ ಹಾಗೂ ಸದ್ವರ್ತನೆಗಳಿಂದ ನಡೆದುಕೊಳ್ಳಬೇಕು. ಅವು ನಮ್ಮ ಮನೆಗೇ ಬಂದು, ನಮಗೆ ಪುಣ್ಯವನ್ನು ಸಂಪಾದಿಸಲು ಒಂದು ಅವಕಾಶವನ್ನು ಕೊಡುತ್ತಿವೆ ಎಂದರಿತು ಅವುಗಳಿಗೆ ನಾವು ಕೃತಜ್ಞರಾಗಿರಬೇಕು.

– **ಗೋಪಾಲಕೃಷ್ಣ ಜಿಂದಲ್**, 'ಕಲ್ಯಾಣ' ಜುಲೈ ೨೦೧೪ *(ಕೃಪೆ: 'ಕಲ್ಯಾಣ' ಮಾಸಪತ್ರಿಕೆ; ಸಂಗ್ರಹ: ಮಾತಾ ತ್ಯಾಗಮಯೀ)*

ಪರಿಹಾರ ಕಾರ್ಯದ ಕೆಲವು ನೆನಪುಗಳು

◆ ಒಬ್ಬ ಅನಾಮಿಕ ಸಂನ್ಯಾಸಿ

ರಾಮಕೃಷ್ಣ ಮಹಾಸಂಘದಲ್ಲಿ ನಡೆಯುವ 'ಪರಿಹಾರ ಕಾರ್ಯ'ಗಳ ಹಿಂದಿರುವ ಉದಾತ್ತ ಧ್ಯೇಯ, ತ್ಯಾಗ-ಸೇವೆಯ ಆದರ್ಶವನ್ನು ಪ್ರಾಯೋಗಿಕ ಕಾರ್ಯಕ್ಷೇತ್ರದಲ್ಲಿ ಕಾಣುವ ಲೇಖಕರು ಸಂಘದ ಹಿರಿಯ ಸಂನ್ಯಾಸಿಗಳು.



ಅದು ೧೯೭೩ರ ಫೆಬ್ರವರಿ ತಿಂಗಳು. ಸ್ವಾಮಿ ಅಚಲಾನಂದರು ಕೇಳಿದರು, ''ನನ್ನ ಜೊತೆಯಲ್ಲಿ ಬರಗಾಲ ಪರಿಹಾರ ಕಾರ್ಯಕ್ಕೆ ಬರುತ್ತೀರಾ? ಸ್ವಾಮಿ ಆದಿದೇವಾನಂದರು ನನ್ನ ಜೊತೆ ಕಳಿಸಲು ಯಾರೂ ಇಲ್ಲವೆಂದು ಹೇಳಿದರು.'' ಅವರ ಮಾತು ಕೇಳಿ ತುಂಬಾ ಸಂತೋಷವಾಯಿತು. ಸ್ವಾಮಿ ವಿವೇಕಾನಂದರು ಆದೇಶಿಸಿರುವ 'ಜೀವರಲ್ಲಿ ಶಿವನ ಸೇವೆ' ಮಾಡಲು ಅವಕಾಶ ಸಿಗುತ್ತದೆ ಮತ್ತು ನನ್ನಿಂದ ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದು ನೋಡೋಣ ಎಂಬ ಉತ್ಸಾಹ. ''ಸಂತೋಷವಾಗಿ ಬರುತ್ತೇನೆ'' ಎಂದೆ. ''ಆದರೆ ನೀವು ಬೇಲೂರು ಮಠಕ್ಕೆ ಹೋಗುವುದು?'' (ನಾನು ಎರಡು ವರ್ಷಗಳ ಬ್ರಹ್ಮಚಾರಿ ತರಬೇತಿ ಕೇಂದ್ರಕ್ಕೆ ಹೋಗಬೇಕಾಗಿತ್ತು.) ನಾನೆಂದೆ, ''ಅದಕ್ಕೇನು, ಮುಂದಿನ ವರ್ಷ ಹೋದರಾಯಿತು.'' ''ಹಾಗಾದರೆ ನಾನು ಆದಿದೇವಾನಂದರಿಗೆ ತಿಳಿಸುತ್ತೇನೆ.''

ಸುಮಾರು ಎರಡು ಮೂರು ವರ್ಷ ಸರಿಯಾಗಿ ಮಳೆ ಬಾರದ ಕಾರಣ ಉತ್ತರ ಕರ್ನಾಟಕ ಬರಪೀಡಿತವಾಗಿತ್ತು. ಬಡವರ ಮತ್ತು ದನಕರುಗಳ ಪರಿಸ್ಥಿತಿ ಚಿಂತಾಜನಕವಾಗಿತ್ತು. ಪರಿಹಾರ ಕಾರ್ಯ ಕೈಗೊಳ್ಳಬೇಕೆಂದು ಭಕ್ತರ ಆಗ್ರಹ. ಸ್ವಾಮಿ ಆದಿದೇವಾನಂದರು ಬೇಲೂರು ಮಠಕ್ಕೆ, ಅನುಮತಿ, ಹಣ, ಜನ ಕೇಳಿ ಕಾಗದ ಬರೆದಿದ್ದರು. ಜನ, ಹಣ ಕೊಡಲಾಗುವುದಿಲ್ಲವೆಂದೂ, ಪರಿಹಾರ ಕಾರ್ಯ ಮಾಡಬೇಕೆಂದೂ ಬೇಲೂರು ಮಠದಿಂದ ಕಾಗದ ಬಂತು.

ಸ್ವಾಮಿ ಅಚಲಾನಂದರಿಗೆ ಇಂತಹ ಕೆಲಸಗಳೆಂದರೆ ತುಂಬ ಉತ್ಸಾಹ. ಜೊತೆಗೆ ನನ್ನನ್ನು ಕರೆದಾಯಿತು. ಹಣ! ಆಗ ಬೆಂಗಳೂರು ಆಶ್ರಮದಲ್ಲಿ ಇದಕ್ಕೆಲ್ಲ ಹಣವಿರಲಿಲ್ಲ. ಆಶ್ರಮಕ್ಕೆ ಬರುತ್ತಿದ್ದ ಕೆಲವು ಭಕ್ತರು, ಅದರಲ್ಲೂ ಆಶ್ರಮದ ಹತ್ತಿರದಲ್ಲೇ ಇದ್ದ ಗಂಜಾಂ ಹೌಸ್‌ನ ಕು.ಉಮಾ ಮತ್ತು ಸಂಗಡಿಗರು ಸುಮಾರು ೬೪,೦೦೦ ರೂ. ಸಂಗ್ರಹಿಸಿದರು. ಆ ಕಾಲಕ್ಕೆ ಅದು ಸಾಕಷ್ಟು ದೊಡ್ಡ ಮೊತ್ತ ಎಂದೇ ಹೇಳಬಹುದು.

ಪರಿಹಾರ ಕಾರ್ಯದ ಮೊದಲನೆಯ ಹಂತ – ಎಲ್ಲಿ ಪರಿಹಾರದ ಆವಶ್ಯಕತೆ ಇದೆ, ವಿತರಣೆ ಕೆಲಸ ಎಲ್ಲಿ ನಡೆಯಬೇಕು, ಕಾರ್ಯನಿರ್ವಾಹಕರು ಎಲ್ಲಿರಬೇಕು, ಇತ್ಯಾದಿ ಯೋಜನೆ. ಸ್ವಾಮಿ ಅಚಲಾನಂದರು ಆಶ್ರಮದ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸಿ, ಒಂದು ಯೋಜನೆಯನ್ನು ತಯಾರಿಸಿ, ಅದಕ್ಕೆ ಸ್ವಾಮಿ ಆದಿದೇವಾನಂದರ ಒಪ್ಪಿಗೆಯನ್ನು ಪಡೆದರು. ಶ್ರೀರಾಮಕೃಷ್ಣ ಜಯಂತಿಯ ದಿನ ಸಾಯಂಕಾಲ ನಮ್ಮ ತಂಡ – ಸ್ವಾಮಿ ಅಚಲಾನಂದರು, ನಾನು, ಸ್ವಯಂಸೇವಕರಲ್ಲಿ ಕೆಲವರು ಮತ್ತು ಸ್ಟೀವರ್ಡ್ ಎಂಬ ಕೆನಡಾ ದೇಶವಾಸಿ, ಅಲಸೂರಿನ ಆಶ್ರಮಕ್ಕೆ ಹೋಗಿ, ಮುಂದಿನ ರಾತ್ರಿ ಬಸ್‌ನಲ್ಲಿ ಗುಲ್ಬರ್ಗಾ ತಲುಪಿದೆವು. ಸ್ವಾಮಿ ಅಚಲಾನಂದರ ಹಿಂದಿನ ಪ್ರಭಾವದಿಂದಾಗಿ ಪಿ.ಡಬ್ಲ್ಯು.ಡಿ.ಯ ವಿಶ್ರಾಂತಿಗೃಹದಲ್ಲಿ ಉಳಿದುಕೊಂಡೆವು. ನಾವು ಯಾರು ಹೋದರೂ ಪರಿಹಾರ ಕಾರ್ಯ ಮುಗಿಯುವವರೆಗೂ ಅಲ್ಲೇ ಇರಲು ಜಾಗ ಕೊಡುತ್ತಿದ್ದರು.

ಅಲ್ಲಿ ಅತಿ ಮುಖ್ಯವಾದ ಕೆಲಸ – ಗುಲ್ಬರ್ಗಾದಲ್ಲಿರುವ ಕೆನರಾ ಬ್ಯಾಂಕಿನಲ್ಲಿ, 'ರಾಮಕೃಷ್ಣ ಆಶ್ರಮ, ಬೆಂಗಳೂರು' ಈ ಹೆಸರಿನಲ್ಲಿ ಒಂದು ಜಾಯಿಂಟ್ ಅಕೌಂಟ್ (ಸ್ವಾಮಿ ಅಚಲಾನಂದರ ಮತ್ತು ನನ್ನ ಹೆಸರಿನಲ್ಲಿ) ತೆಗೆದು, ತಂದಿದ್ದ ಹಣವನ್ನೆಲ್ಲ ಅದರಲ್ಲಿ ಜಮಾ ಮಾಡಿ, ರಾತ್ರಿ ರೈಲಿನಲ್ಲಿ ರೇಲ್ ಗಾಣಿಗಾಪುರಕ್ಕೆ ಹೊರಟೆವು. ಅಲ್ಲಿಂದ ದೇವಲ್ ಗಾಣಿಗಾಪುರಕ್ಕೆ ಹೋಗಿ, ಅಲ್ಲಿಯ ಧರ್ಮಶಾಲೆಯಲ್ಲಿ ಇಳಿದುಕೊಂಡೆವು. ಮುಂದಿನ ಸುಮಾರು ಆರು ತಿಂಗಳು ಅದೇ ನಮಗೆ ಬರಗಾಲ ಪರಿಹಾರ ಕೇಂದ್ರದ ವಾಸಸ್ಥಾನ. ಉಗ್ರಾಣ, ಅಡಿಗೆ ಮನೆ, ಮಲಗುವ ಸ್ಥಳ, ಕೆಳಗಡೆ ಎರಡು ದೊಡ್ಡ ಕೊಠಡಿ, ಮೇಲ್ಗಡೆ ಮಹಡಿಯಲ್ಲಿ ಎರಡು ಕೊಠಡಿ ಇದ್ದವು. ಸುಮಾರು ಒಂದು ತಿಂಗಳ ನಂತರ ಸ್ನಾನದ ಮನೆಯ ವ್ಯವಸ್ಥೆ ಮಾಡಿದರು. ಯಾರಾದರೂ ಅಡಿಗೆಯವರಿದ್ದರೆ ಅಡಿಗೆ ಮಾಡುತ್ತಿದ್ದರು. ಇಲ್ಲದಿದ್ದರೆ ನಾವುಗಳೇ ಎಲ್ಲರೂ ಹಂಚಿಕೊಂಡು ಅಡಿಗೆ, ತಿಂಡಿ ಇತ್ಯಾದಿ ಮಾಡುತ್ತಿದ್ದೆವು. ನಂತರ ಧಾನ್ಯ ವಿತರಣೆಗೆ ಹಳ್ಳಿಗಳಿಗೆ ಹೋಗಿ ಬಡವರು, ಮುದುಕರು, ಹೆಂಗಸರು, ನಿರಾಶ್ರಿತರು – ಇವರನ್ನು ವಿಚಾರಿಸಿ, ಅವರಿಗೆ ಕಾರ್ಡ್ ಕೊಟ್ಟು, ನಿಗದಿತ ದಿನದಂದು ವಿತರಣಾಕೇಂದ್ರಕ್ಕೆ ಬಂದು ಧಾನ್ಯ ತೆಗೆದುಕೊಂಡು ಹೋಗಲು ಹೇಳಿ ಬರುತ್ತಿದ್ದೆವು. ಶೇ.೯೦ ಭಾಗ ನಡೆದೇ ಹೋಗುತ್ತಿದ್ದೆವು. ಬಸ್ಸಿನ ವ್ಯವಸ್ಥೆಯಿರುವೆಡೆ ಸಾಧ್ಯವಾದಷ್ಟು ದೂರ ಹೋಗಿ ಅಲ್ಲಿಂದ ನಡೆದುಹೋಗಿ ಕೆಲಸ ಮುಗಿಸುತ್ತಿದ್ದೆವು. ನಮ್ಮಲ್ಲಿ ವಾಹನ ಸೌಕರ್ಯವಿರಲಿಲ್ಲ ಮತ್ತು ನಮ್ಮಲ್ಲಿದ್ದ ಹಣವನ್ನು ಅದಕ್ಕೆಲ್ಲ ಖರ್ಚು ಮಾಡುವಂತಿರಲಿಲ್ಲ.

ಮೊದಲ ಹಂತದಲ್ಲಿ ಗಾಣಗಾಪುರದಿಂದ ಐದು ಕಿ.ಮೀ. ಸುತ್ತಲೂ ಇದ್ದ ಹಳ್ಳಿಗಳಿಗೆ ಧಾನ್ಯ ವಿತರಣೆ ವ್ಯವಸ್ಥೆ ಮಾಡಲಾಯಿತು. ಅವರೆಲ್ಲರೂ ೧೫ ದಿನಗಳಿಗೊಮ್ಮೆ ಬಂದು ಅವರ ಪಾಲಿನ ಧಾನ್ಯ ತೆಗೆದು ಕೊಂಡು ಹೋಗುತ್ತಿದ್ದರು.

ಎರಡನೇ ಹಂತದಲ್ಲಿ ಹತ್ತು ಕಿ.ಮೀ. ದೂರದವರೆಗಿನ ಹಳ್ಳಿಗಳಲ್ಲಿ ವಿಚಾರಿಸಿ, ಕಾರ್ಡ್ ಹಂಚಿ, ಬರಗಾಲ ಪರಿಹಾರ ಕೇಂದ್ರ, ಗಾಣಗಾಪುರಕ್ಕೆ ೧೫ ದಿನಗಳಿಗೊಮ್ಮೆ ಬಂದು ಅವರ ಪಾಲಿನ ಧಾನ್ಯ ತೆಗೆದುಕೊಂಡು ಹೋಗಲು ಹೇಳಿಬರುತ್ತಿದ್ದೆವು. ನಮ್ಮಲ್ಲಿ ವಾಹನ ಸೌಕರ್ಯವಿಲ್ಲದ್ದರಿಂದ ಈ ವ್ಯವಸ್ಥೆ ಮಾಡಬೇಕಾಯಿತು.

ಎರಡನೇ ಹಂತದಲ್ಲಿ ೬ ರಿಂದ ೧೦ ಕಿ.ಮೀ ದೂರ ನಡೆದು ಧಾನ್ಯ ತೆಗೆದುಕೊಂಡು ಹೋಗುತ್ತಿದ್ದರು. ಈಗ ನಮಗೆ ಮತ್ತೊಂದು ಸಮಸ್ಯೆ ಬಂತು. ಜನರು ಶೇ.೯೦ ಭಾಗ ನಡೆದು ಬಂದು, ನಡೆದೇ ಹಿಂತಿರುಗುತ್ತಿದ್ದರು. ಇದು ತುಂಬ ಪ್ರಯಾಸಕರವಾದ್ದರಿಂದ, ಸುಮಾರು ೬೦ ಜನ ಹಿಂದಿನ ರಾತ್ರಿಯೇ ಬಂದು, ಅಲ್ಲೇ ಎಲ್ಲಾದರೂ ಜಗಲಿಯಲ್ಲೋ, ವರಾಂಡದಲ್ಲೋ ಮಲಗಿದ್ದು, ಬೆಳಗ್ಗೆ ಎಂಟು ಗಂಟೆಯ ನಂತರ ಅವರ ಪಾಲಿನ ಧಾನ್ಯ ಹೊತ್ತು, ಖಾಲಿ ಹೊಟ್ಟೆಯಲ್ಲೇ ನಡೆದು ಹೋಗುತ್ತಿದ್ದರು. ಇವರಿಗೆಲ್ಲ ಬೆಳಗ್ಗೆ ೧೦ ಗಂಟೆಗೆ ಊಟದ ವ್ಯವಸ್ಥೆ – ಜೋಳದ ರೊಟ್ಟಿ, ಪಲ್ಯ – ಮಾಡಲಾಯಿತು. ಇದನ್ನು ನೋಡಿ ತುಂಬ ಸಂತೋಷಪಟ್ಟರು. ನಾವು ಕೂಡ ಅಂದು ಮಧ್ಯಾಹ್ನ ಅದೇ ಊಟ ಮಾಡುತ್ತಿದ್ದೆವು – ಜೋಳದ ರೊಟ್ಟಿ, ಪಲ್ಯ.

ನಮ್ಮ ಶಿಬಿರ ಹೀಗೆ ಆರಂಭವಾಗಿ, ಸುಮಾರು ಒಂದೂವರೆ ತಿಂಗಳಲ್ಲಿ ಪರಿಹಾರಕಾರ್ಯ ಬಿರುಸಿನಿಂದ ನಡೆಯಲಾರಂಭಿಸಿತು. ಸ್ವಾಮಿ ಸೋಮನಾಥಾನಂದರು, ಇಬ್ಬರು ಬ್ರಹ್ಮಚಾರಿಗಳನ್ನು ಕಳಿಸಿದರು. ವಿವೇಕಾನಂದ ಬಾಲಕ ಸಂಘ (ಬೆಂಗಳೂರು ರಾಮಕೃಷ್ಣ ಆಶ್ರಮ) ದಲ್ಲಿದ್ದ ಇಬ್ಬರು ಸ್ವಯಂಸೇವಕ ಯುವಕರು ಬಂದು ಸೇರಿದರು. ಹೀಗಾಗಿ ನಮ್ಮ ಶಿಬಿರದಲ್ಲಿ ಸ್ವಾಮಿ ಅಚಲಾನಂದರ ಜೊತೆಗೆ ಮೂವರು ಬ್ರಹ್ಮಚಾರಿಗಳು, ಮೂವರು ಸ್ವಯಂಸೇವಕರು ಮತ್ತು ಏಳು ಜನ. ಕೆನೆಡಿಯನ್ ಮಿತ್ರರು, 'ಗೊಂದಲ ಜಾಸ್ತಿ, ಸಾಧನೆಗೆ ಅಡಚಣೆ' ಯೆಂದು ಹೇಳಿ ಹೊರಟುಹೋದರು.

ಸುಮಾರು ಒಂದೂವರೆ ಎರಡು ತಿಂಗಳ ನಂತರ, ಬರಗಾಲ ಪರಿಹಾರದ ಮತ್ತೊಂದು ಶಾಖೆ ನಾವಿದ್ದ ದೇವಲ್ ಗಾಣಗಾಪುರದಿಂದ ಸುಮಾರು ೧೫ ಕಿ.ಮೀ. ದೂರ ಕರಜಗಿ ಎಂಬಲ್ಲಿ ಆರಂಭವಾಯಿತು. ಇಲ್ಲಿ ಗ್ರಾಮದವರೊಬ್ಬರು ತಮ್ಮ ಮನೆಯಲ್ಲಿ ಒಂದು ಕೊಠಡಿಯನ್ನು ನಮ್ಮ ಧಾನ್ಯದ ಗೋದಾಮಿಗೆ ಹಾಗೂ ವಿತರಣೆ ಗೋಸ್ಕರ ಕೊಟ್ಟಿದ್ದರು. ಈ ಹಳ್ಳಿ ಇದ್ದದ್ದು ಮಹಾರಾಷ್ಟ್ರದ ಅಕ್ಕಲ ಕೋಟೆಯ ಹತ್ತಿರ. ಗಾಣಗಾಪುರಕ್ಕೆ ಬಸ್ಸಿನ ಸೌಕರ್ಯವಿದ್ದುದರಿಂದ ನಾವು ಅಲ್ಲಿ ಇರುತ್ತಿರಲಿಲ್ಲ. ಬೆಳಿಗ್ಗೆ ಸುಮಾರು ೬–೭ ಗಂಟೆಗೆ ಹೊರಟು ಸಂಜೆ ಸುಮಾರು ೭ ಕ್ಕೆ ಹಿಂದಿರುಗುತ್ತಿದ್ದೆವು.

ಎರಡನೇ ಶಿಬಿರಕ್ಕೆ ಸ್ವಾಮಿ ಅಚಲಾನಂದರು ಒಂದು ಯೋಜನೆ ತಯಾರಿಸಿದರು. ಅದರ ಪ್ರಕಾರ ನಾವು ಬ್ರಹ್ಮಚಾರಿಗಳು, ಸ್ವಯಂ ಸೇವಕರೊಡನೆ ಸರ್ವೆ ಕೆಲಸ ಮಾಡಿ, ಧಾನ್ಯ ವಿತರಣೆಗೆ ಕಾರ್ಡ್ ಹಂಚಿ ಬಂದೆವು. ಇಲ್ಲಿ ಕೂಡಾ ೫ ರಿಂದ ೧೦. ಕಿ.ಮೀ.ವರೆಗಿನ ಹಳ್ಳಿಗಳಲ್ಲಿ ಕಾರ್ಡ್ ಕೊಟ್ಟೆವು. ೧೫ ದಿನಕೊಮ್ಮೆ ಧಾನ್ಯ ವಿತರಣೆ ಯಾಗುತ್ತಿತ್ತು.

ಸುಮಾರು ಒಂದೂವರೆ ತಿಂಗಳ ನಂತರ ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ಎರಡು ಕೇಂದ್ರಗಳಲ್ಲಿ ಧಾನ್ಯ ವಿತರಣೆಯ ಕಾರ್ಯ ಬಿರುಸಾಗಿಯೇ ನಡೆಯಿತು. ಸುಮಾರು ಎರಡು ಸಾವಿರ ಜನರಿಗೆ ಪರಿಹಾರ ಕೊಡಲಾಗುತ್ತಿತ್ತು. ಅಷ್ಟು ಸ್ವಲ್ಪ ಹಣದಿಂದ ಈ ಕೆಲಸ ಹೇಗೆ ಸಾಧ್ಯವಾಯಿತೆಂದು ಈಗ ಊಹಿಸಲೂ ಕಷ್ಟವಾಗಬಹುದು. ವಿತರಣೆಗೆ ಬೇಕಾದ ಗೋಧಿಯನ್ನು ಹಣ ಕಟ್ಟಿ ಸರ್ಕಾರಿ ಉಗ್ರಾಣದಿಂದ ಕೊಳ್ಳುತ್ತಿದ್ದೆವು. ಆಗ ೧ ಕಿಲೋಗೆ ೭೫–೮೦ ಪೈಸೆ. ನಾವು ಖರ್ಚು ಮಾಡಿದ ಹಣವನ್ನು ಸರ್ಕಾರ ಹಿಂತಿರುಗಿ ಕೊಡುತ್ತಿತ್ತು. ಇದು ಸ್ವಾಮಿ ಅಚಲಾನಂದರ ವ್ಯವಸ್ಥೆ.

ಇದರಲ್ಲಿ ನಮಗೆ ಇನ್ನೊಂದು ಅನುಭವವಾಯಿತು. ಸರ್ಕಾರಿ ನಿಯಮ ಪಾಲಿಸಿದರೆ ಅವರು ಹಣ ಹಿಂತಿರುಗಿಸುವರು. ಆದರೆ ಅದರಿಂದ ಜನರ ಹೊಟ್ಟೆ ತುಂಬುವುದಿಲ್ಲ. ನಾನು ಮತ್ತು ಸ್ವಾಮಿ ಅಚಲಾನಂದರು ಯೋಚಿಸಿ, ಆಶ್ರಮದ ಕಡೆಯಿಂದ ಒಂದುಕಿಲೋ ಜೋಳವನ್ನು ಅಧಿಕವಾಗಿ ಪ್ರತಿ ಕಾರ್ಡಿಗೂ ಕೊಡುತ್ತಿದ್ದೆವು.

ಪ್ರತಿ ವಿತರಣೆಯ ದಿನ, ಕೆಲಸ ಮಾಡುವ ಮುಂಚೆ ಒಂದು ಸ್ಟೂಲ್ ಮೇಲೆ ಶ್ರೀರಾಮಕೃಷ್ಣರ ಚಿತ್ರಪಟವನ್ನಿಟ್ಟು , ಅಗರಬತ್ತಿ ಹಚ್ಚಿ , ವೇದಪಠಣ ಮಾಡಿ ನಂತರ ಪ್ರಾರಂಭಿಸುತ್ತಿದ್ದೆವು. ನಾರಾಯಣ ಸೇವೆ ಅಷ್ಟು ಸುಲಭವೇನಾಗಿರಲಿಲ್ಲ. ಹಳ್ಳಿಯವರನ್ನು ಶಿಸ್ತಿನಿಂದ ನಿಲ್ಲಿಸಿ, ಒಬ್ಬರಾದಮೇಲೆ ಮತ್ತೊಬ್ಬರು ಆಹಾರವಸ್ತು ತೆಗೆದುಕೊಂಡು ಹೋಗುವಂತೆ ಕಲಿಸುವುದು ಕಷ್ಟವೇ ಆಗುತ್ತಿತ್ತು. ಸಾಲಿನಲ್ಲಿರುವ ಎಲ್ಲರಿಗೂ ಕಾರ್ಡ್ ಇದ್ದರೆ ಧಾನ್ಯ ಸಿಗುವುದೆಂದು ಭರವಸೆಯಾದ ಮೇಲೆ ಕೆಲಸ ಸುಲಭವಾಯಿತು. ಹಣದ ಆಕರ್ಷಣೆ ಮತ್ತು ಮೋಹ ಎಷ್ಟಿರುತ್ತಿದ್ದಿತೆಂದರೆ ತಾವು ಉಪವಾಸವಿದ್ದರೂ ತಮ್ಮ ಕಾರ್ಡನ್ನು ಬೇರೆಯವರಿಗೆ ಕೊಡುತ್ತಿದ್ದರು. ಇದೆಲ್ಲ ನಮಗೆ ಹೇಗೋ ತಿಳಿಯುತ್ತಿತ್ತು. ಅದಕ್ಕೆ ಸೂಕ್ತ ಪರಿಹಾರ ಮಾಡಬೇಕಾಗುತ್ತಿತ್ತು.

ಬರಗಾಲ ಪರಿಹಾರ ಕೇಂದ್ರದಲ್ಲಿ ದಿನಚರಿ: ನಾವೆಲ್ಲ ಸುಮಾರು ನಾಲ್ಕೂವರೆ ಐದು ಗಂಟೆಗೆ ಎದ್ದು, ಪ್ರಾತಃಕೃತ್ಯಗಳನ್ನು ಮುಗಿಸಿ, ಮಲಗುವ ಕೋಣೆಯಲ್ಲಿಟ್ಟಿದ್ದ ಶ್ರೀರಾಮಕೃಷ್ಣ, ಶ್ರೀಮಾತೆ ಮತ್ತು ಸ್ವಾಮೀಜಿಯವರ ಚಿತ್ರಪಟಗಳ ಮುಂದೆ ಅಗರಬತ್ತಿ ಹಚ್ಚಿ, ಸ್ವಾಮಿ ಅಚಲಾನಂದರು ಬರೆದ **'ಶ್ರೀರಾಮಕೃಷ್ಣ ಮಂಗಳಾಶಾಸನ'**, **'ಶ್ರೀಶಾರದಾ ಸುಪ್ರಭಾತ'** ಹಾಡುತ್ತಿದ್ದೆವು. ನಂತರ ಜಪ, ಧ್ಯಾನ ಮುಗಿಸಿ. ೬.೪೫ – ೭ಕ್ಕೆ ಹೋಗಿ ತಿಂಡಿ ಮಾಡುತ್ತಿದ್ದೆವು. ತಿಂಡಿಯ

ನಂತರ ಬೇರೆ ಕೆಲಸ (ವಿತರಣೆ, ಗುಲ್ಬರ್ಗಾಕ್ಕೆ ಹೋಗುವುದು ಇತ್ಯಾದಿ) ಇಲ್ಲದಿದ್ದರೆ ಸ್ವಾಮಿ ಅಚಲಾನಂದರು ೪೫ ರಿಂದ ೬೦ ನಿಮಿಷ ವೇದಾಂತ ಪಾಠವನ್ನು ಮಾಡುತ್ತಿದ್ದರು – ಅವರೇ ಬರೆದ ದಕ್ಷಿಣಾಮೂರ್ತಿ ಸ್ತೋತ್ರದ '**ಮಾನಸೋಲ್ಲಾಸ**'ವನ್ನು ಆಧರಿಸಿ. ಸುಮಾರು ೯.೩೦ಕ್ಕೆ ಇತರ ಕೆಲಸಗಳು, ಅಡಿಗೆ ಮಾಡುವುದು ಇತ್ಯಾದಿ. ೧೨-೧೨.೩೦ ಗಂಟೆಗೆ ಊಟ. ನಂತರ ಸ್ವಲ್ಪ ವಿಶ್ರಾಂತಿ. ಸಮಯವಿದ್ದರೆ ನಾವುಗಳೇ ಏನಾದರೂ ಓದುತ್ತಿದ್ದೆವು. ಜಪ ಕೂಡ ಮಾಡುತ್ತಿದ್ದೆವು. ಸಾಮಾನ್ಯವಾಗಿ ಕತ್ತಲಾಗುವುದಕ್ಕೆ ಮುಂಚೆ ರಾತ್ರಿ ಊಟದ ತಯಾರಿ. ಎಲ್ಲರೂ ಸೇರಿ ಆರಾತ್ರಿಕ ಹಾಡುಗಳನ್ನು ಹಾಡುತ್ತಿದ್ದೆವು. ೮.೩೦-೯.೦೦ ಗಂಟೆಗೆ ಊಟ. ಕೆಲಸದವರು, ಅಡಿಗೆಯವರು ಯಾರೂ ಇಲ್ಲದಿದ್ದರೆ ಬ್ರಹ್ಮಚಾರಿಗಳೇ ಹಂಚಿಕೊಂಡು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದೆವು.

ಸ್ವಾಮಿ ಅಚಲಾನಂದರು ಒಂದು ರೀತಿ ನಡೆದಾಡುವ ವಿಶ್ವಕೋಶ. ನಿಂತುಕೊಡೇ ಏನಾದರೂ ವಿಷಯ ಹೇಳಲು ಶುರು ಮಾಡಿದರೆ ಸುಮಾರು ಒಂದೆರಡು ಗಂಟೆಗಳು ಕಳೆದುಹೋಗುತ್ತಿತ್ತು. ಕೈತುಂಬ ಕೆಲಸವಿದ್ದರೂ ನಾವೆಲ್ಲ ಸಂತೋಷದಿಂದ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದೆವು.

ಬೆಂಗಳೂರಿನ ಬಸವನಗುಡಿಯಿಂದ ಹೊರಡುವ ಮುನ್ನ ಸ್ವಾಮಿ ಅಚಲಾನಂದರು ಒಂದು ಚಿಕ್ಕ ಬೀಗದಕೈ ಕೊಟ್ಟು, ''ಇದು ಆಫೀಸ್ (ಪೆಟ್ಟಿಗೆಗೆ ಹಾಗೆ ಹೇಳಿದರು). ನೀವು ಇದನ್ನು ನೋಡಿಕೊಳ್ಳಿ. ಹಣಕಾಸಿನ ವ್ಯವಹಾರ, ಗುಲ್ಬರ್ಗಕ್ಕೆ ಹೋಗಿ ವಿತರಣೆಗೆ ಧಾನ್ಯ ಕೊಳ್ಳುವುದು, ಲೆಕ್ಕ ಬರೆಯುವುದು ಇತ್ಯಾದಿಗಾಗಿ'' ಎಂದರು.

ಸಣ್ಣಪುಟ್ಟ ಘಟನೆಗಳು: ನಾವಿದ್ದ ಗಾಣಗಾಪುರದಲ್ಲಿ ಸುಮಾರು ೨೫-೩೦ ಕುಷ್ಠರೋಗಿಗಳಿದ್ದರು. ಅವರಿಗೆಲ್ಲ ಕಂಬಳಿ ಕೊಡಬೇಕೆಂದು ನಿರ್ಧರಿಸಿದೆವು. ಅದಕ್ಕೆ ಚಿಕ್ಕದೊಂದು ಸಮಾರಂಭ ಇಟ್ಟುಕೊಂಡೆವು. ಕಂಬಳಿಗಳನ್ನು ಪೋಲೀಸ್ ಕಮಿಷನರ್ ಗರುಡಾಚಾರ್ ಕೈಲಿ ಕೊಡಿಸುವುದೆಂದು ಅವರನ್ನು ಆಮಂತ್ರಿಸಲು ಸ್ವಾಮಿ ಅಚಲಾನಂದರು ಗುಲ್ಬರ್ಗಕ್ಕೆ ಹೋದರು. ಪೂರ್ವಾಶ್ರಮದಲ್ಲಿ ಸ್ವಾಮಿ ಅಚಲಾನಂದರು ಪಿ.ಡಬ್ಲ್ಯು.ಡಿ.ಯಲ್ಲಿ ಕಟ್ಟುನಿಟ್ಟಿನ, ಬಿಗಿಯಾದ, ಲಂಚಮುಟ್ಟದ ಅಧಿಕಾರಿಗಳೆಂದು ಪ್ರಸಿದ್ಧರಾಗಿದ್ದರು. ಒಬ್ಬರು ಜೂನಿಯರ್ ಇಂಜಿನಿಯರ್ ಇದನ್ನೆಲ್ಲ ಕೇಳಿದ್ದರೂ, ಆತನಿಗೆ ಇದು ಪಿ.ಡಬ್ಲ್ಯು.ಡಿ.ಯಲ್ಲಿ ಸಾಧ್ಯವೇ ಎಂದು ಅನ್ನಿಸಿತ್ತು. ಗರುಡಾಚಾರರನ್ನು ಕರೆಯಲು ಸ್ವಾಮಿ ಅಚಲಾನಂದರು ಗುಲ್ಬರ್ಗಕ್ಕೆ ಹೋಗಿದ್ದಾಗ, ಆ ಇಂಜಿನಿಯರ್ ಅವರನ್ನು ನೋಡಿ, ಮುಖ್ಯರಸ್ತೆಯಲ್ಲೇ ಸಾಷ್ಟಾಂಗ ಪ್ರಣಾಮ ಮಾಡಿದರು. ಗರುಡಾಚಾರ್ ಬಂದು ನಮ್ಮ ಶಿಬಿರದಲ್ಲಿ ಏರ್ಪಡಿಸಲಾಗಿದ್ದ ಒಂದು ಸಣ್ಣ ಸಮಾರಂಭದಲ್ಲಿ ಕುಷ್ಠರೋಗಿಗಳಿಗೆ ಕಂಬಳಿ ಹಂಚಿ, ಬರಗಾಲ ಸೇವಾಕೇಂದ್ರವನ್ನು ನೋಡಿ ಸಂತೋಷಪಟ್ಟರು.

ಸೇವೆಯೆಂದರೆ ಹೀಗೆ ಮಾಡಬೇಕು: ಗಾಣಗಾಪುರದಲ್ಲಿ ಒಂದು ಆಶ್ರಮವಿತ್ತು. ದಂಡವತೆ ಆಶ್ರಮ ಎನ್ನುತ್ತಿದ್ದುದು ಜ್ಞಾಪಕ. (ಮಹಾರಾಷ್ಟ್ರದಲ್ಲಿ ಈಗ ಇದು ಒಂದು ಬಿರುದು. ನಡೆಯುವ ಬದಲು ದಂಡವತ್ ಪ್ರಣಾಮ ಮಾಡುತ್ತಾ ದೇವಸ್ಥಾನವನ್ನೋ, ತೀರ್ಥಸ್ಥಾನವನ್ನೋ ಸೇರುವುದು. ಇದಕ್ಕೆ ಕೆಲವೇ ಗಂಟೆಗಳು ಸಾಕಾಗಬಹುದು, ಕೆಲವು ದಿನಗಳೋ, ಕೆಲವು ತಿಂಗಳುಗಳೋ ಬೇಕಾಗಬಹುದು. ಇದು ಒಂದು ವ್ರತ. ಇದಕ್ಕೆ ಶ್ರದ್ಧೆ, ದೈಹಿಕ ಮತ್ತು ಮಾನಸಿಕ ಶಕ್ತಿ ಎರಡೂ ಬೇಕು). ದಂಡವತೆಗಳು ಗೃಹಸ್ಥ ಸಾಧುಗಳು. ಆ ಆಶ್ರಮವನ್ನು ಅವರ ಒಬ್ಬ ಶಿಷ್ಯ, ಮಾಧವರಾವ್ ಎನ್ನುವ ಬ್ರಹ್ಮಚಾರಿ ನೋಡಿಕೊಳ್ಳುತ್ತಿದ್ದರು. ಗುರುಗಳ ಆದೇಶದಂತೆ ಅವರು ಆ ಊರಿನ ಕುಷ್ಠರೋಗಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದರು. ಕುಷ್ಠರೋಗಿಗಳ ಕಾಲನ್ನು ತೊಳೆದು ಅವರು ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ತಟ್ಟೆ ಮುಂದೆ ರಂಗೋಲಿ ಹಾಕಿ ಅವರೆಲ್ಲರಿಗೂ ಹಾಡುತ್ತ ಆರತಿ ಬೆಳಗುತ್ತಿದ್ದರು. ಇದನ್ನು ನೋಡಿ ನಮಗೆಲ್ಲ ತುಂಬಾ ಸಂತೋಷವಾಯಿತು. ಅಚಲಾನಂದರು ಅವರೆಲ್ಲರಿಗೂ ರಾತ್ರಿಯ ಊಟಕೋಸ್ಕರ ಧಾನ್ಯದ ವ್ಯವಸ್ಥೆ ಮಾಡಿದರು. ಮಧ್ಯಾಹ್ನ ಊಟದ ನಂತರ ರಾತ್ರಿ ಊಟ, ರೊಟ್ಟಿ, ಪಲ್ಯ ತೆಗೆದು ಕೊಂಡು ಹೋಗುತ್ತಿದ್ದರು. ನಾವಿರುವವರೆಗೂ ಈ ಸೇವೆ ನಡೆಯಿತು.

ಬಡತನಕ್ಕಿಂತ ಪಾಪವುಂಟೇ ! ಬಡತನ ಮನುಷ್ಯನನ್ನು ಯಾವ ದೆಶೆಗೆ ಎಳೆಯುತ್ತದೆ; ಯಾವ ರೀತಿ ಕೆಲಸ ಮಾಡಿಸುತ್ತದೆ! ಬಡತನದಿಂದಾಗಿ ಹಸಿವು ತಾಳಲಾಗದ ಮನುಷ್ಯ ಎಂಥ ಅಧೋಗತಿಗೆ ಬರುತ್ತಾನೆ !

ಪುರಾಣದಲ್ಲಿ ವಿಶ್ವಾಮಿತ್ರನ ಕಥೆ ಬರುತ್ತದೆ. ಕ್ಷಾಮದ ಭೀಕರ ತಾಂಡವ! ವಿಶ್ವಾಮಿತ್ರನು ಹಸಿವಿನ ಬೇಗೆ ತಾಳಲಾರದೆ ಚಂಡಾಲನ ಮನೆಯಲ್ಲಿ ನಾಯಿ ಮಾಂಸ ಕದ್ದು ತಿಂದನೆಂಬ ವಿಷಯ ಬರುತ್ತದೆ. ಹಸಿವಿನ ಕರಾಳ ಮುಖ ತೋರಿಸಲು ಬರೆದಿರುವ ಉತ್ಪ್ರೇಕ್ಷೆಯಿರಬಹುದು. ಆದರೆ – ಅಂದು ರಾತ್ರಿ, ನಾನು ನೋಡಿದ್ದು...!

ನಾವು ತಂಗಿದ್ದ ಶಿಬಿರದಲ್ಲಿ ಯಾತ್ರಿಗಳು ಆಗಾಗ ಮದುವೆಯನ್ನು ಕೂಡ ಮಾಡುತ್ತಿದ್ದರು. ಅಂದು ರಾತ್ರಿ ಏನೋ ಗದ್ದಲ. ಸುಮಾರು ಮಧ್ಯರಾತ್ರಿ ಇರಬಹುದು. ನಾನು ಶೌಚಾಲಯದ ಕಡೆ ಹೊರಟೆ. ಆದರೆ ನೋಡಿದ್ದೇನು! ಮದುವೆ ಮನೆಯ ಔತಣ ತಿಂದು ಎಲೆ ಬಿಸಾಡಿದ್ದಾರೆ. ಅದರ ಮಧ್ಯದಲ್ಲಿ ಯಾರೋ ಒಬ್ಬಾತ ಎಂಜಲೆಲೆ ಹುಡುಕಿ ಎಲೆಯಲ್ಲಿ ಉಳಿದದ್ದನ್ನು ತಿನ್ನುತ್ತಿದ್ದಾನೆ! ನೋಡಿ, ನನಗೆ ಸಿಡಿಲು ಬಡಿದಂತಾಯಿತು. ಆತನ ಪರಿಚಯ ನನಗೇ ಮೊದಲೇ ಇತ್ತು. ಆದರೆ ಮಾತನಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಬೆಳಿಗ್ಗೆ ಸುಮಾರು ೮ ಗಂಟೆಗೆ ಅವನನ್ನು ನೋಡಿ ಬೈದೆ. ನನಗೂ ಅಳು ಬಂತು. ಅವನೂ ಅತ್ತ. ಅದು ನೆನಪಾದರೆ ಇಂದಿಗೂ ದುಃಖವಾಗುತ್ತದೆ.

ಆತ ನಮ್ಮ ಕ್ಯಾಂಪಿಗೆ ಒಂದೆರಡು ಸಲ ಬಂದಿದ್ದ. ಅವನಿಗೆ ಸುಮಾರು ೩೦-೪೦ ಎಕರೆ ಭೂಮಿ ಇತ್ತು. ಎರಡು ಮೂರು ವರ್ಷ ಮಳೆಯಿಲ್ಲದ್ದರಿಂದ ಸಾಲಗಾರನಾಗಿ, ಸಾಲ ತೀರಿಸುವ ದಾರಿ ಕಾಣದೆ, ಗಾಣಗಾಪುರಕ್ಕೆ ಬಂದಿದ್ದ. ಭಿಕ್ಷೆ ಬೇಡಲು ಸ್ವಾಭಿಮಾನ ಅಡ್ಡಿಯಾಗುತ್ತದೆ. ಕೂಲಿ ಮಾಡಿ ಅಭ್ಯಾಸವಿಲ್ಲ. ಅವನಿಗೆ ಸುಮಾರು ೬೦ ವರ್ಷ ವಯಸ್ಸಾಗಿದ್ದಿರಬೇಕು. ಆದರೆ ಹಸಿವು.. ದಾರಿಕಾಣದೆ ಆ ಕೆಲಸ ಮಾಡಿದ್ದ. ನಂತರ ಅವನಿಗೆ ಏನೋ ಒಂದು ಕೆಲಸ ಕೊಟ್ಟೆವು – ದುಡಿದುಂಬಲು.

ಬೆಳ್ಳುಳ್ಳಿ ಸಾರು: ನಮ್ಮ ಎರಡನೆಯ ವಿತರಣಾ ಕೇಂದ್ರ ಕರಜಗಿಯಲ್ಲಿ ಸರ್ವೆ ಕೆಲಸ ಮಾಡಲು ಒಂದು ದಿನ ಎರಡು ಗುಂಪುಗಳಾಗಿ ಹೊರಟೆವು. ನಾನು ಮತ್ತು ಒಬ್ಬ ಬ್ರಹ್ಮಚಾರಿ ಬೆಳಗ್ಗೆ ಸುಮಾರು ೮ ಗಂಟೆಗೆ ಬಸ್ಸಿನಲ್ಲಿ ಹೊರಟು, ನಂತರ ನಡೆದು ನಮ್ಮ ಯೋಜನಾನುಸಾರ ಕೆಲಸ ಮುಗಿಸಿ, ಮತ್ತೂ ಸಮಯ ಉಳಿದ ಕಾರಣ ಇನ್ನೂ ಒಂದೆರಡು ಹಳ್ಳಿಗಳಿಗೆ ಶೇರ್ ಆಟೋ ಹಿಡಿದು ಹೋಗುವ ಹೊತ್ತಿಗೆ ಸಂಜೆಯಾಗಿತ್ತು. ಅಲ್ಲಿ ಕೆಲಸ ಮುಗಿಸಿ ಹೊರಟಾಗ ರಾತ್ರಿ ೮ ಗಂಟೆಯಾಗಿತ್ತು. ನಮ್ಮ ಶಿಬಿರ–ಕರಜಗಿ ಡಾಕ್ ಬಂಗಲೆಗೆ ಹಿಂತಿರುಗಬೇಕಾಗಿತ್ತು. ಹಳ್ಳಿಯವರು ''ಹೋಗಬೇಡಿ, ಊರು ತುಂಬ ದೂರ (ಸು. ೧೦ ಕಿ.ಮೀ). ಭಯಂಕರ ಕತ್ತಲು, ರಸ್ತೆಯಲ್ಲಿ ಸ್ಮಶಾನ ಬೇರೆ, ದೆವ್ವಗಳಿವೆ'' ಎಂದೆಲ್ಲ ಹೇಳಿದರು. ನಾವಿಬ್ಬರೂ ಮಾತಾಡಿಕೊಂಡು ಹೊರಟು ನಿಂತೆವು. ನಾನು ಹೇಳಿದೆ, ''ನಿಮಗೆ ತೊಂದರೆಯಾಗದಿದ್ದಲ್ಲಿ ಲಾಟೀನ್ ಕೊಟ್ಟು, ಜೊತೆಗೆ ಯಾರನ್ನಾದರೂ ಕಳಿಸಿ. ನಾನು ಹೋಗಲೇಬೇಕು (ಹಣವೆಲ್ಲ ನನ್ನ ಹತ್ತಿರವಿತ್ತು). ಮತ್ತೆ ನಾಳೆಯ ದಿನ ಕೆಲಸ ಮುಗಿಸಬೇಕು'' ಎಂದು. ಆ ಹಳ್ಳಿಯ ರಸ್ತೆಯ ಅಂಧಕಾರ, ನೀರವತೆಯಲ್ಲಿ ನಡೆದು ಬಂದು ಟಿ.ಬಿ. ಸೇರಿದಾಗ ಸುಮಾರು ೧೨ ಗಂಟೆಯಾಗಿತ್ತು. ತುಂಬ ದಣಿವಾಗಿತ್ತು. ಹಸಿವು ಬೇರೆ! ಸಾಮಾನ್ಯವಾಗಿ ಟಿ.ಬಿ.ಯನ್ನು ನೋಡಿಕೊಳ್ಳುತ್ತಿದ್ದವ ಹೋಟೆಲಿನಿಂದ ಊಟ ತಂದಿಟ್ಟಿರುತ್ತಿದ್ದ. ಆ ಜಾಗದಲ್ಲಿ ಹೋಟೆಲ್ ಇಲ್ಲದ್ದರಿಂದ ಅವನೇ ಮಾಡಿದ್ದ. ಅವನಿಗೆ ಬೆಳ್ಳುಳ್ಳಿ ಇಲ್ಲದೆ ಅಡುಗೆ ಮಾಡಲು ಬರುವುದಿಲ್ಲವೆಂದು ಕಾಣುತ್ತದೆ. ಬರೀ ಬೆಳ್ಳುಳ್ಳಿ ವಾಸನೆ. ಬೆಳ್ಳುಳ್ಳಿ ಅಭ್ಯಾಸವಿಲ್ಲದ ನಮಗೆ ಊಟ ಮಾಡಲು ಕುಳಿತರೆ ಗಂಟಲೊಳಕ್ಕೆ ಇಳಿಯುವುದೇ ಇಲ್ಲ. ಶ್ರೀರಾಮಕೃಷ್ಣರ ಹೆಸರು ಹೇಳಿ ಹೇಗೋ ಸ್ವಲ್ಪ ನುಂಗಿ, ದೇವರೇ ಗತಿಯೆಂದು ಮಲಗಿದೆವು.

ಒಂದೆಡೆ ಹಸಿದವರು, ಮತ್ತೊಂದೆಡೆ ಹೊಟ್ಟೆ ತುಂಬಿದವರು: ನಾವು ಕಾರ್ಡ್ ಹಂಚಿದ ಹಳ್ಳಿಗಳಲ್ಲಿ ಅದು ಕೊನೆಯದು. ನಮ್ಮ ಶಿಬಿರದಿಂದ ಸುಮಾರು ೧೦–೧೨ ಕಿ.ಮೀ.ದೂರವಿತ್ತು. ಬಸ್ಸಿನ ಸೌಕರ್ಯವಿದ್ದುದರಿಂದ ನಾನು ಮತ್ತು ಒಬ್ಬ ಬ್ರಹ್ಮಚಾರಿ ಹೊರಟೆವು. ನಮ್ಮ ಪದ್ಧತಿಯಂತೆ ಹಳ್ಳಿಯ ಪಟೇಲ ಅಥವಾ ಯಾರಾದರೂ ಜವಾಬ್ದಾರಿಯ ಹಿರಿಯರನ್ನು ವಿಚಾರಿಸುತ್ತಾ ಹೊರಟೆವು. ಅದು ಸ್ವಲ್ಪ ದೊಡ್ಡ ಹಳ್ಳಿಯೆಂದೇ ಹೇಳಬಹುದು. ಸ್ವಲ್ಪ ದೂರ ಹೋದ ನಂತರ ಊರಿನ ಪಟೇಲ ಮತ್ತು ಅವನ ತಂದೆ ಮಾತಾಡುತ್ತ ಒಂದು ಮರದ ಕೆಳಗೆ ಕುಳಿತಿರುವುದನ್ನು ಜನ ತೋರಿಸಿದರು. ನಾವು ಹತ್ತಿರ ಹೋಗಿ ಪರಿಚಯ ಹೇಳಿ, ಊರ ಬಗ್ಗೆ ಕೇಳಿದೆವು. ಪಟೇಲ ಸ್ವಲ್ಪ ಗಡುಸಾಗಿಯೇ ಹೇಳಿದ, ''ಇಲ್ಲಿ ಬಡವರ್‍ಯಾರೂ ಇಲ್ಲರೀ..'' ಅದನ್ನು ಕೇಳಿ ನನಗೆ ಸಿಟ್ಟು ಬಂತು. ''ಹಾಗೋ, ಇಲ್ಲಿ ಬಡವರಿಲ್ಲವೆ? ನೀವೆಲ್ಲ ಹೊಟ್ಟೆ ತುಂಬಿದವರೆಂದು ಕಾಣುತ್ತೆ. ಅದಕ್ಕೆ ಹೀಗೆ ಮಾತನಾಡುತ್ತೀರಿ'' ಎಂದೆ. ನನ್ನ ಜೊತೆಯಲ್ಲಿದ್ದ ಬ್ರಹ್ಮಚಾರಿಗೆ ಹೇಳಿದೆ, ''ನಡೆಯಿರಿ ಮಹಾರಾಜ್, ೪೫೦–೫೦೦ ಕಿ.ಮೀ. ದೂರದಿಂದ ಬಂದವರಿಗೆ ಕೆಲಸ ತಿಳಿಯದೆ? ನಾವೇ ವಿಚಾರಿಸೋಣ. ಇವರ ಸಹಾಯವೇ ಬೇಡ.'' ಮುದುಕ (ಪಟೇಲ) ಮಗನಿಗೆ ಹೇಳಿದ, ''ಏ ಮಗ, ಅವರು ಹೇಳುವುದು ಸರಿಯಾಗಿದೆ. ಹೋಗು, ಸುಮ್ಮನೆ ಕೂರಬೇಡ.'' (ಆ ಕಡೆಯ ಜನ ಸ್ವಲ್ಪ ಒರಟು ಸ್ವಭಾವದವರು. ನನ್ನ ಮಾತನ್ನು ಕೇಳಿ ಹೊಡೆದು ಬಿಡುತ್ತಿದ್ದರೇನೋ! ಹಾಗಾಗಲಿಲ್ಲ – ಶ್ರೀರಾಮಕೃಷ್ಣರ ಕೃಪೆ). ನಾನು ಹೇಳಿದೆ, ''ಬೇಡ, ನಿಮ್ಮ ಹಂಗೇ ಬೇಡ. ನಾವೇ ಹೋಗಿ ವಿಚಾರಿಸುತ್ತೇವೆ.'' ನಾವಿಬ್ಬರೂ ಅಲ್ಲಿಂದ ಹೊರಟೆವು. ಮುದುಕ ಹಿಂಬಾಲಿಸಿ ಬಂದ. ವಿಚಾರಿಸುತ್ತ, ಕಾರ್ಡು ಕೊಡುತ್ತ ನಾವು ಹೊಲಗೇರಿಗೆ ಬಂದೆವು. ನಾವು ಅಲ್ಲಿ ನೋಡಿದ್ದೇನು? ಹರಕಲು ಸೀರೆಗಳನ್ನುಟ್ಟ ಹೆಂಗಸರು, ಚಿಂದಿಬಟ್ಟೆ, ಬೆತ್ತಲೆ ಮಕ್ಕಳು. ಒಬ್ಬ ಗಂಡಸೂ ಇಲ್ಲ. ಬರಗಾಲವಾದ್ದರಿಂದ ಕೆಲಸ ಹುಡುಕಿಕೊಂಡು ಬೇರೆಲ್ಲಿಗೋ ಹೊರಟು ಹೋಗಿದ್ದರು. ಹಿಂದಿರುಗುವ ಸಂಭವ ಅತಿ ವಿರಳವಾಗಿತ್ತು. ಹೊರಗೆ ಹೋದವರು ಅಲ್ಲಿಯೇ ಬೇರೊಂದು ಮದುವೆಯಾಗಿ ಇದ್ದುಬಿಡುವುದೂ ಉಂಟು. ಇಲ್ಲಿರುವವರು ಹೆಂಗಸರು, ಮಕ್ಕಳು, ವೃದ್ಧರು..! ಭಗವಂತನೇ ಗತಿ! ಕೂಲಿ ಸಿಕ್ಕಿದಾಗ ಊಟ, ಇಲ್ಲದಿದ್ದಾಗ ಉಪವಾಸ. ಸಾಧ್ಯವಾದಷ್ಟು ಕಾರ್ಡುಗಳನ್ನು ಕೊಟ್ಟು ನಾವು ಹಿಂತಿರುಗಿದೆವು. ಬಹುಶಃ ಈ ಹಳ್ಳಿಯಲ್ಲೇ ಅತ್ಯಂತ ಅಧಿಕ ಸಂಖ್ಯೆಯಲ್ಲಿ ಕಾರ್ಡು ಕೊಟ್ಟಿರಬಹುದು.

ಒಂದು ಭಯಂಕರ ರಾತ್ರಿ: ಬರಗಾಲ ವಿತರಣೆಗೆ ಧಾನ್ಯ ಕೊಳ್ಳಲು ಹೋಗುವುದು ನನ್ನ ಕೆಲಸವಾಗಿತ್ತು. ಬಡವರ ಸೇವೆಗೆ ಇರುವ ಹಣವನ್ನು ಸಾವಧಾನವಾಗಿ ಉಪಯೋಗಿಸಬೇಕೆಂದು ಸಾಮಾನ್ಯವಾಗಿ ಗುಲ್ಬರ್ಗಕ್ಕೆ ನಾನೊಬ್ಬನೇ ಹೋಗುತ್ತಿದ್ದೆ. ಬೆಳಿಗ್ಗೆ ಹೋಗಿ, ಕೆಲಸಗಳೆಲ್ಲ ಮುಗಿದರೆ, ಸಾಯಂಕಾಲ ಹಿಂತಿರುಗುತ್ತಿದ್ದೆ. ಒಂದೊಂದು ಸಲ ರಾತ್ರಿ ಯಾತ್ರಿಕರ ನಿವಾಸದಲ್ಲಿದ್ದು ಮರುದಿನ ಬೆಳಿಗ್ಗೆ ಹಿಂತಿರುಗುತ್ತಿದ್ದೆ. ಈ ವಿಚಾರವಾಗಿ ಸ್ವಾಮಿ ಅಚಲಾನಂದರು ಕೂಡ ನಿರ್ದಿಷ್ಟವಾಗಿ ಏನೂ ಹೇಳಿರಲಿಲ್ಲ. ಒಂದು ದಿನ ಎಂದಿನಂತೆ ಸೇವಾ ಕಾರ್ಯಕ್ಕೆ ಧಾನ್ಯ ತರಲು ಗುಲ್ಬರ್ಗಕ್ಕೆ ಹೋದೆ. ಡಿ.ಸಿ. ಯವರನ್ನು ನೋಡಿ, ಗೋಧಿ ದಾಸ್ತಾನು ಇದ್ದದ್ದರಿಂದ ಬ್ಯಾಂಕ್ ಡ್ರಾಫ್ಟ್ ಮಾಡಿಸಿ ಗೋಧಿ ಬಿಡುಗಡೆ ಮಾಡಲು ರಸೀದಿಯನ್ನು ತೆಗೆದು

ಕೊಂಡು ಮಂಡಿಗೆ ಹೋಗಿ ಗೋಧಿ ಮೂಟೆಗಳನ್ನು ತಂದು ಉಗ್ರಾಣದ ಹತ್ತಿರ ಇರಿಸಿದೆ. ಸಾಮಾನ್ಯವಾಗಿ ಕೂಲಿಯವರು ಯಾರಾದರೂ ಅದರ ಹತ್ತಿರ ಇರುತ್ತಿದ್ದರು. ಅದನ್ನು ಸಾಗಿಸಲು ಸರಕಾರದವರು ಒಂದೆರಡು ಬಾರಿ ಲಾರಿಯನ್ನು ಕೊಟ್ಟಿದ್ದರೂ ಇದು ಯಾವಾಗಲೂ ಲಭ್ಯವಿರಲಿಲ್ಲ. ಆದ್ದರಿಂದ ನಾವು ಬಾಡಿಗೆ ಲಾರಿಯನ್ನೇ ತೆಗೆದುಕೊಳ್ಳಬೇಕಾಗುತ್ತಿತ್ತು. ಅಂದು ಲಾರಿಗೋಸ್ಕರ ತುಂಬ ಹುಡುಕಬೇಕಾಯಿತು. ಕೊನೆಗೆ ಒಬ್ಬ ಮುಸಲ್ಮಾನ ಲಾರಿ ಕಂಪನಿಯ ಮಾಲೀಕ ಹೇಳಿದ, ''ನನ್ನಲ್ಲಿ ೪-೫ ಲಾರಿಗಳಿವೆ, ಒಂದಲ್ಲ ಒಂದು ಬಂದೇ ಬರುತ್ತದೆ, ನೀವೇನೂ ಯೋಚಿಸಬೇಡಿ, ನಾನು ಕೊಡುತ್ತೇನೆ.'' ನಂತರ ನಾನು ಹೋಟೆಲ್ ಊಟ ಮಾಡಿ ಲಾರಿಗಾಗಿ ಕಾಯುತ್ತಾ ಕುಳಿತೆ. ಸಾಯಂಕಾಲ ಆರು ಗಂಟೆಯಾದರೂ ಲಾರಿ ಬರಲಿಲ್ಲ. ಸರ್ಕಾರಿ ಉಗ್ರಾಣ ಮುಚ್ಚುವವರಿದ್ದರು. ಲಾರಿ ಯಜಮಾನನನ್ನು ನಂಬಿ ಗೋಧಿ ತೆಗೆಸಿ ಅಲ್ಲೇ ಜೋಳದ ಮೂಟೆಗಳ ಪಕ್ಕದಲ್ಲೇ ಇರಿಸಿದೆ. ಆದರೆ ರಾತ್ರಿ ಹನ್ನೆರಡಾದರೂ ಯಾವ ಲಾರಿಯೂ ಪತ್ತೆಯಿಲ್ಲ. ಇನ್ನು ಸುಮ್ಮನೆ ಕಾಯ್ದು ಕುಳಿತರೆ ಪ್ರಯೋಜನವಿಲ್ಲ ಎಂದು ಭಾವಿಸಿ, ಟಾರ್ಚ್ ಲೈಟ್ ಹಿಡಿದು, ಗುಲ್ಬರ್ಗದ ಬೀದಿಗಳನ್ನೆಲ್ಲ ಸುತ್ತಿದೆ. ಕೊನೆಗೊಬ್ಬ ಲಾರಿಯವನು ಒಂದು ಮೂಟೆಗೆ ೪-೫ ಕೊಟ್ಟರೆ ಬರುವೆನೆಂದ (ಆಗೆಲ್ಲ ಮೂಟೆಗೆ ಇಷ್ಟೆಂದು ಲೆಕ್ಕ. ಸರ್ಕಾರಿ ನಿಗದಿತ ಬೆಲೆ ಒಂದು ಮೂಟೆಗೆ ರೂ.೧). ಆತ ಅರ್ಧಗಂಟೆ ಕಾಯ್ದರೆ, ಊಟ ಮಾಡಿ ಬರುವೆನೆಂದ. ಬೇರೆ ದಾರಿಯಿಲ್ಲ, ಕಾಯಲೇಬೇಕು. ಅವನ ಜೊತೆ ಹೋಗಿ ಅವನ ಮನೆಯ ಹತ್ತಿರವಿದ್ದ ಲಾರಿಯಲ್ಲಿ ಕುಳಿತೆ. ಆ ಜಾಗವಾಗಲೀ, ಮನುಷ್ಯನಾಗಲೀ ಒಂದೂ ತಿಳಿಯದು. ಶ್ರೀರಾಮಕೃಷ್ಣರೇ ಗತಿಯೆಂದು ಹೀಗೆ ಮಾಡಿದೆ. ಡ್ರೈವರ್ ಜೊತೆ ನಾನು ಸರಕು ಇಟ್ಟಿದ್ದ ಜಾಗಕ್ಕೆ ಬಂದೆ. ನಾನು ಬಿಟ್ಟಿದ್ದ ಒಬ್ಬಿಬ್ಬ ಕೂಲಿಗಳ ಜೊತೆ ಮುಸಲ್ಮಾನ ಲಾರಿಯ ಜನಗಳೂ ಕುಳಿತಿದ್ದರು. ನಾವು ಸರಕನ್ನು ಕಾಯದೆ ಬಿಡುವುದಿಲ್ಲ. ನಮ್ಮ ಮಾಲೀಕ ಇರಲು ಹೇಳಿದ್ದಾನೆ ಎಂದರು. ಅವರನ್ನು ಬೈದು ಕಳಿಸಿದೆ, ಜೊತೆಗೆ ಕಾಫಿ ಕುಡಿಯಲು ಸ್ವಲ್ಪ ಹಣ ಕೊಟ್ಟೆ.

ಇದರಿಂದ ನನಗೆ ದೇವರು ಒಂದು ಪಾಠ ಕಲಿಸಿದ – ಸಾಮಾನ್ಯವಾಗಿ ಕೂಲಿಗಳು ಒಳ್ಳೆಯವರಿರುತ್ತಾರೆ. ಪ್ರಾಮಾಣಿಕರು. ಸ್ವಲ್ಪ ಕೂಲಿಗಾಗಿ ಬೇಡುತ್ತಾರೆಯೇ ಹೊರತು ಕಳ್ಳತನ ಮಾಡುವುದಿಲ್ಲ. ಸ್ವಲ್ಪ ಗೋಧಿ ಜೋಳ ಕದ್ದಿದ್ದರೆ ನನಗೇನೂ ತಿಳಿಯುತ್ತಿರಲಿಲ್ಲ. ತಿಳಿದಿದ್ದರೂ ಆ ಪರಿಸ್ಥಿತಿಯಲ್ಲಿ ನಾನು ಮಾಡುವುದು ತಾನೆ ಏನು?! ಸರಕು ಲಾರಿಗೆ ತುಂಬಿಸಿ ಗುಲ್ಬರ್ಗ ಬಿಟ್ಟಾಗ ಸುಮಾರು ಮಧ್ಯರಾತ್ರಿ ೧.೩೦ ಗಂಟೆಯಾಗಿತ್ತು. ಆಗ ಗುಲ್ಬರ್ಗ ಅಂತಹ ದೊಡ್ಡ ಊರೇನಾಗಿರಲಿಲ್ಲ. ಗಾಣಗಾಪುರದ ಕಡೆಗೆ ಹೊರಟಾಗ ಕಗ್ಗತ್ತಲು, ವಸತಿಗಳಿಲ್ಲದ ರಸ್ತೆ. ಆಗ ರಸ್ತೆ ಪಕ್ಕದಲ್ಲಿ ಹಳ್ಳಿಗಳು ವಿರಳ. ನಿರ್ಜನ ಪ್ರದೇಶ. ಸುಮಾರು ಅರ್ಧ ದಾರಿ ಬಂದಾಗ ನನಗೆ ಹೆದರಿಕೆ ಶುರುವಾಯಿತು. ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುತ್ತ ಕುಳಿತಿದ್ದೆ. ಕಾರಣ ಕೆಲವು ದಿನಗಳ ಹಿಂದೆಯೇ ಇಲ್ಲಿಗೆ ಸಮೀಪದಲ್ಲಿ ಯಾರೋ ಸಾಧು ಭಿಕ್ಷೆ ಬೇಡಿ, ದವಸ ಸಂಗ್ರಹಿಸಿ ಬಡವರಿಗೆ ಹಂಚುತ್ತಿದ್ದ. ಒಂದು ರಾತ್ರಿ ದರೋಡೆಕೋರರು ಮುತ್ತಿಗೆ ಹಾಕಿ ಆತ ಪೂಜಿಸುತ್ತಿದ್ದ ವಿಗ್ರಹವನ್ನೂ ಬಿಡದೆ ಲೂಟಿ ಮಾಡಿದ್ದರು. ಅಂತೂ ಅನಾಥರಕ್ಷಕ, ಆಪದ್ಬಾಂಧವ ಶ್ರೀರಾಮಕೃಷ್ಣರ ಕೃಪೆ ನನಗೆ ಏನೂ ಆಗಲಿಲ್ಲ. ನಮ್ಮ ಶಿಬಿರ ತಲುಪಿದಾಗ ಮಧ್ಯರಾತ್ರಿ ೩.೩೦ ಗಂಟೆ. ಹಳ್ಳಿಯವರು ಛತ್ರದ ವರಾಂಡ ಮತ್ತು ಬೇರೆ ಸ್ಥಳಗಳಲ್ಲಿ ಮಲಗಿದ್ದರು. ಅವರನ್ನೆಲ್ಲ ಎಬ್ಬಿಸಿ ಕಾಫಿ ಕೊಡಿಸುವುದಾಗಿ ಹೇಳಿ ಲಾರಿಯಿಂದ ಸರಕನ್ನು ಇಳಿಸಿದ್ದಾಯಿತು. ಸುಮಾರು ೪.೧೫ – ೪.೩೦ಕ್ಕೆ ಮಲಗಿದೆ. ಇನ್ನು ಮೇಲೆ ಸ್ವಾಮಿ ಅಚಲಾನಂದರು ಲಾರಿ ವ್ಯವಸ್ಥೆ ಮಾಡದಿದ್ದರೆ ಹೋಗುವುದಿಲ್ಲವೆಂದು ಮನಸ್ಸಿನಲ್ಲಿ ಬರುತ್ತಿದ್ದಂತೆಯೇ ಉತ್ತರವೂ ಹೊಳೆಯಿತು. ಅವರು ತಾನೇ ಎಲ್ಲಿಂದ ಅಣಿಮಾಡಿಯಾರು? ಈ ಅನುಭವದ ನಂತರ ಜೊತೆಗೆ ಒಬ್ಬಿಬ್ಬರು ಅನುಭವೀ ಸ್ವಯಂಸೇವಕರನ್ನು ಕರೆದುಕೊಂಡು ಹೋಗುತ್ತಿದ್ದೆ. ಇದಾದ ನಂತರ ಶ್ರೀರಾಮಕೃಷ್ಣರ ಕೃಪೆಯಿಂದ 'ಅತನೂರು ಟ್ರಾನ್ಸ್‌ಪೋರ್ಟ್ಸ್' ಮಾಲೀಕರ ಪರಿಚಯವಾಯಿತು. ತುಂಬ ಸಜ್ಜನರು, ಮುಂದೆ ಯಾವ ತೊಂದರೆಯೂ ಆಗಲಿಲ್ಲ.

ಸೇವಾಕಾರ್ಯದಲ್ಲೂ ಏಕಾದಶಿವ್ರತ: ನಮ್ಮ ಶಿಬಿರದಲ್ಲಿ ಒಬ್ಬರು ಸ್ವಯಂಸೇವಕರು ಇದ್ದರೆಂದು ಹಿಂದೆಯೇ ತಿಳಿಸಿದ್ದೆ. ಒಬ್ಬನೇ ಹೋಗುವುದು ಸರಿಯಲ್ಲವೆಂದು ಅವರನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದೆ. ಆತನ ಏಕಾದಶಿ ನಿಷ್ಠೆ ಎಷ್ಟಿತ್ತೆಂದರೆ – ಗುಲ್ಬರ್ಗಾಕ್ಕೆ ಹೋದಾಗಲೂ ಎಷ್ಟು ಹೇಳಿದರೂ ಕಾಫಿ, ಟೀ, ಹಾಲು ಅಷ್ಟೇಕೆ ನೀರನ್ನು ಕೂಡ ತೆಗೆದುಕೊಳ್ಳುತ್ತಿರಲಿಲ್ಲ. ಗುಲ್ಬರ್ಗಾದಲ್ಲಿ ನನ್ನ ಜೊತೆ ಇಡೀ ದಿನ ಸುತ್ತಬೇಕಾಗುತ್ತಿತ್ತು. ಆದರೆ ಸ್ವಲ್ಪವಾದರೂ ಆಯಾಸವಾಗಲಿ, ತೊಂದರೆಯಾಯಿತೆಂಬ ಬೇಜಾರಾಗಲಿ ಇರುತ್ತಿರಲಿಲ್ಲ. ನಂತರ ಯಾವಾಗಲೋ ಅವರಿದ್ದ ರಾಮಕೃಷ್ಣ ಮಹಾಸಂಘದ ಬಾಂಬೆ ಶಾಖೆಗೆ ಒಮ್ಮೆ ಹೋಗಿದ್ದೆ. ೩೭ ವರ್ಷಗಳ ನಂತರ ಭೇಟಿಯಾದರೂ ಅದೇ ರೀತಿ, ಎಂದರೆ ನಿರ್ಜಲ ಏಕಾದಶಿ ಮಾಡುತ್ತಿದ್ದರು. ಅವರ ಸೇವಾಭಾವ ಕೂಡ ಹಾಗೆಯೇ. ಯಾವ ವಿಧವಾದ ಭೇದಭಾವಗಳಿಲ್ಲದೆ ಎಲ್ಲರಿಗೂ ಕೈಲಾದಷ್ಟು ಸಹಾಯ ಸೇವೆ ಮಾಡುತ್ತಲೇ ಇದ್ದರು.

ಸ್ವಾರ್ಥಪರತೆ ಸೇವಾಕಾರ್ಯಕ್ಕೆ ಧಕ್ಕೆ : ಕುಷ್ಠರೋಗಿಗಳಿಗೆ ಊಟದ ವ್ಯವಸ್ಥೆ, ಕಂಬಳಿ ಕೊಡಲಾಗಿತ್ತು. ಅವರು ಇದ್ದದ್ದು ಊರ ಹೊರಗೆ, ಚರಂಡಿ ಪಕ್ಕದ ಸಣ್ಣ ಸಣ್ಣ ಗುಡಿಸಲುಗಳು. ಅದನ್ನು ನೋಡಿ ನಮಗೆಲ್ಲ ಮನಸ್ಸಿಗೆ ನೋವಾಯಿತು. ಅವರುಗಳಿಗೆಲ್ಲ ವಸತಿ ವ್ಯವಸ್ಥೆ ಮಾಡಲು ನಮಗೆಲ್ಲ ತುಂಬ ಕಾತರ. ಜೊತೆಗೆ ಎಲ್ಲರಲ್ಲೂ ಉತ್ಸಾಹವಿತ್ತು. ಆದರೆ ಆ ಸೇವೆ ಮಾಡಲು ಮುಖ್ಯವಾದ ಲಕ್ಷ್ಮೀ ಕಟಾಕ್ಷವಿಲ್ಲವಾಗಿತ್ತು. ಅಲ್ಲಿಗೆ ಯಾರು ಹಣ ಕೊಡುತ್ತಾರೆ? ಬೆಂಗಳೂರು ಅಥವಾ ಹೈದರಾಬಾದಿನವರು ಕೊಡಬೇಕೆ? ನೋಡು

ತ್ತಿದ್ದಂತೆಯೇ ಆಗಸ್ಟ್, ಸೆಪ್ಟೆಂಬರ್ ಬಂತು. ಭಗವಂತನ ಕೃಪೆಯಿಂದ ಚೆನ್ನಾಗಿ ಮಳೆಯಾಯಿತು. ಎಲ್ಲೆಲ್ಲೂ ಬಿತ್ತನೆಯ ಕೆಲಸ ಶುರುವಾಗಿ ಬರಗಾಲದ ಸೇವಾಕಾರ್ಯಗಳು ಕೊನೆಗೊಳ್ಳುತ್ತಿತ್ತು. ನನಗೆ ಮತ್ತು ಸ್ವಾಮಿ ಅಚಲಾನಂದರಿಗೆ ಸೇವಾಕಾರ್ಯ ಇಷ್ಟು ಬೇಗ ನಿಲ್ಲಿಸಲು ಮನಸ್ಸಿರಲಿಲ್ಲ. ಮೊದಲೇ ತಿಳಿಸಿದಂತೆ ಸರ್ಕಾರದಿಂದ ನಾವು ಗೋಧಿ ಕೊಳ್ಳುತ್ತಿದ್ದೆವು. ಸೆಪ್ಟೆಂಬರ್ ತಿಂಗಳಿಗೆ ರೇಷನ್ ಕೊಟ್ಟು ನಮ್ಮ ಬರಗಾಲದ ಸೇವಾಕಾರ್ಯ ಮುಗಿಸುವುದೆಂದು ತೀರ್ಮಾನಿಸಲಾಯಿತು. ಸ್ವಾಮಿ ಅಚಲಾನಂದರು ಲೆಕ್ಕ ಹಾಕಿ ನೋಡಿದರು., ಸರ್ಕಾರ ಕೊಡುತ್ತಿದ್ದ ರಿ-ಇಂಬರ್ಸ್‌ಮೆಂಟಿನಿಂದ ನಮ್ಮಲ್ಲಿ ಸುಮರು ರೂ. ೩೦,೦೦೦ ಉಳಿದಿತ್ತು. ಆ ಕಾಲದಲ್ಲಿ ಅದು ದೊಡ್ಡ ಮೊತ್ತವೇ. ಕುಷ್ಠರೋಗಿಗಳಿಗೆ ವಸತಿ ಕೆಲಸ ಶುರುಮಾಡುವುದು, ನಂತರ ಹಣ ಬರಬಹುದು ಎಂದು ಯೋಚಿಸಿದೆವು, ಸುಮಾರು ಆಗಸ್ಟ್ ತಿಂಗಳಿನಿಂದಲೇ ಈ ಸಂಬಂಧವಾಗಿ ವಿಚಾರಣೆ ಇತ್ಯಾದಿ ನಡೆಯುತ್ತಿತ್ತು. ಸರ್ಕಾರ ಅವರಿಗೆ ವಸತಿಗೋಸ್ಕರ ಸುಮಾರು ೨-೩ ಕಿ.ಮೀ. ದೂರದಲ್ಲಿ ಜಾಗ ಕೊಟ್ಟಿತ್ತು. ಆದರೆ ಅವರು ಊಟ, ಭಿಕ್ಷೆ ಇತ್ಯಾದಿಗಳಿಗೆ ಗಾಣಿಗಾಪುರಕ್ಕೇ ಬರಬೇಕಾದ್ದರಿಂದ ಅದು ಅನಾನುಕೂಲಕರವಾಗಿತ್ತೇ ಹೊರತು ಪ್ರಯೋಜನವಾಗುವಂತಿರಲಿಲ್ಲ. ಅವರಿದ್ದ ಗುಡಿಸಿಲುಗಳ ಹತ್ತಿರದಲ್ಲೇ ಖಾಸಗಿ ಜಾಗವಿತ್ತು. ಸ್ವಾಮಿ ಅಚಲಾನಂದರು ಅದನ್ನು ಕೊಂಡು, ಅದರಲ್ಲಿ ವಸತಿಗೃಹಗಳನ್ನು ಕಟ್ಟುವ ಪ್ರಯತ್ನ ಮಾಡಿದರು. ಸ್ವಾಮಿಗಳು ಕೊಳ್ಳುವರೆಂದು ತಿಳಿದ ಜಮೀನಿನ ಮಾಲೀಕರು ಎರಡರಿಂದ ನಾಲ್ಕು ಪಟ್ಟು ಬೆಲೆ ಜಾಸ್ತಿ ಮಾಡಿದರು. ಸ್ವಾಮಿ ಅಚಲಾನಂದರು ಎಷ್ಟೇ ಪ್ರಯತ್ನಿಸಿದರೂ ಅವರ ಮನಸ್ಸು ಪರಿವರ್ತನೆಯಾಗಲಿಲ್ಲ. ಸ್ವಾಮಿಗಳು ಶ್ರೀರಾಮಕೃಷ್ಣರ ಮೇಲೆ ಭಾರ ಹಾಕಿ ಪ್ರಯತ್ನ ಮುಂದುವರೆಸುತ್ತಿದ್ದರು.

ಬೆಂಗಳೂರು ಆಶ್ರಮದಿಂದ ದೂರವಿದ್ದುದು, ಸುಮಾರು ಆರು ತಿಂಗಳ ಸತತ ಪರಿಶ್ರಮ, ಇವೆಲ್ಲದರಿಂದ ನನಗೆ ಸ್ವಲ್ಪ ವಿಶ್ರಮಿಸುವ ಮನಸ್ಸಾಯಿತು. ಸ್ವಾಮಿ ಅಚಲಾನಂದರಿಗೆ ತಿಳಿಸಿ ೧೦-೧೫ ದಿನಗಳಿಗೋಸ್ಕರ ಬೆಂಗಳೂರು ಆಶ್ರಮಕ್ಕೆ ಬಂದೆ. ಮರುದಿನ ನಮ್ಮ ಬ್ರಹ್ಮಚಾರಿಗಳೊಬ್ಬರು ನನ್ನನ್ನು ಆಶ್ಚರ್ಯದಿಂದ ನೋಡಿ, ನನಗೆ ಜ್ವರವಿರುವ ಶಂಕೆಯಿಂದ ಥರ್ಮೋಮೀಟರ್ ತಂದು ಪರೀಕ್ಷಿಸಿದಾಗ ೧೦೩° ಜ್ವರವಿತ್ತು. ನನಗೆ ಅದರ ಅರಿವೇ ಇರಲಿಲ್ಲ. ಅದು ಪ್ಯಾರಾ ಟೈಫ್ಯಾಡ್ ಜ್ವರ. ನಾನು ಹಿಂತಿರುಗಲು ಸುಮಾರು ಒಂದು ತಿಂಗಳಾಗಬಹುದು ಎಂದು ಅಚಲಾನಂದರಿಗೆ ತಿಳಿಯಿತು. ಕುಷ್ಠರೋಗಿಗಳ ವಸತಿ ವ್ಯವಸ್ಥೆ? ಸ್ವಾರ್ಥಿಗಳ ದುರಾಸೆಯಿಂದ ಜಾಗ ಸಿಗಲಿಲ್ಲ. ಬರಗಾಲ ಪರಿಹಾರ ಕಾರ್ಯ ಮುಗಿದಿತ್ತು. ಸೇವಾಕೇಂದ್ರವನ್ನು ಮುಚ್ಚಿ ಭಾರವಾದ ಮನಸ್ಸಿನಿಂದ ಬೆಂಗಳೂರಿಗೆ ಅಚಲಾನಂದರು ಕೂಡಾ ಹಿಂತಿರುಗಿದರು.

ಶ್ರೀರಾಮಕೃಷ್ಣರ ಕೃಪೆ: ಒಮ್ಮೆ ಬೇಲೂರು ಮಠದಲ್ಲಿ ದುರ್ಗಾಪೂಜೆಯ ಸಮಯದಲ್ಲಿ ಆಗಿನ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಶಿವಾನಂದರು ಅಲ್ಲಿಯದು ನಿಃಸ್ವಾರ್ಥ ದುರ್ಗಾಪೂಜೆ, ತಾಯಿ ದುರ್ಗೆಗೆ ಯಾವುದೇ ವಿಧವಾದ ಕಾಮನೆ ಇಟ್ಟುಕೊಂಡು ಪೂಜೆ ಸಲ್ಲಿಸುವುದಿಲ್ಲವೆಂದು, ಅದು ಕೇವಲ ಲೋಕಕಲ್ಯಾಣಕ್ಕೆಂದು ತಿಳಿಸಿದರು. ಬೆಂಗಳೂರಿನ ೧೯೭೩ರಲ್ಲಿ ನಡೆದ ಬರಗಾಲ ಪರಿಹಾರ ಸೇವೆ ಕೂಡ ಹಾಗೆಯೇ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಸಮಾಚಾರ ಪತ್ರಿಕೆಗಳಿಗೆ ತಿಳಿಸಿದ್ದಾಗಲಿ, ಅವುಗಳಲ್ಲಿ ಬರಗಾಲ ಪರಿಹಾರದ ಬಗ್ಗೆ ಬರೆದಿದ್ದ ವಿಷಯವಾಗಲಿ, ಅವುಗಳ ಬಗ್ಗೆ ನಮಗೆ ಕಾಳಜಿಯೇ ಇರಲಿಲ್ಲ. ವಾರ್ತಾಪತ್ರಿಕೆಯ ವರದಿಗಾರರನ್ನು ಕರೆದದ್ದಾಗಲೀ, ಅವರ ಸಮೀಕ್ಷೆಯಾಗಲೀ ಯಾವುದೂ ತಿಳಿಯದು.

೨೦-೨೫ ವರ್ಷಗಳ ನಂತರ ರಾಮಕೃಷ್ಣರ ಹೆಸರಿನಲ್ಲಿ ಸೇವೆ ನಡೆದ ಜಾಗಗಳನ್ನು ನೋಡುವ ಕುತೂಹಲವುಂಟಾಯಿತು. ೨೦೦೪ರಲ್ಲಿ ಬೆಳಗಾವಿ ಉತ್ಸವಕ್ಕೆ ಹೋಗಿದ್ದಾಗ ಗದಗಿಗೆ ಒಬ್ಬ ಸ್ವಾಮಿಗಳು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಒಂದು ರಾತ್ರಿ ಇದ್ದು ಗದುಗಿನ ವೀರನಾರಾಯಣ, ಕುಮಾರವ್ಯಾಸರ ಜಾಗ ನೋಡಿ ಗುಲ್ಬರ್ಗಕ್ಕೆ ಹೋಗಿ ಅಲ್ಲಿನ ರಾಮಕೃಷ್ಣ ಆಶ್ರಮ (ಖಾಸಗಿ ಕೇಂದ್ರ)ದಲ್ಲಿ ಒಂದು ರಾತ್ರಿ ತಂಗಿದ್ದು ಮರುದಿನ ಬಸ್ಸಿನಲ್ಲಿ ಗಾಣಿಗಾಪುರಕ್ಕೆ ಹೊರಟೆ. ೧೯೭೩ರಲ್ಲಿ ನಾನು ನೋಡಿದಕ್ಕೂ ಈಗ ನೋಡುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸ. ದಾರಿಯ ಇಕ್ಕೆಲಗಳಲ್ಲಿ ಹಸಿರು ತುಂಬಿದ ಹೊಲಗದ್ದೆಗಳಿದ್ದವು. ಈಗ ಒಂದು ದೊಡ್ಡ ನೀರಾವರಿ ನಾಲೆ ಇದೆ. ಸುಮಾರು ಬೆಳಿಗ್ಗೆ ೯ ಗಂಟೆಗೆ ಗಾಣಿಗಾಪುರದ ಬಸ್ ನಿಲ್ದಾಣದಲ್ಲಿಳಿದು, ನಡೆದುಕೊಂಡೇ ದತ್ತಕ್ಷೇತ್ರಕ್ಕೆ ಹೋಗಿ ದರ್ಶನ ಮಾಡಿದೆ. ಅಲ್ಲಿ ಕಂಡ ಕೆಲವರು ಹಳಬರನ್ನು ವಿಚಾರಿಸಿದೆ. ಆಗ ತಿಳಿಯಿತು – ಈಗ ಮಳೆ, ಬೆಳೆಗಳು ಆಗುತ್ತಿವೆ. ಅಂದಿನಿಂದ ಇಂದಿನವರೆಗೂ ಬರಗಾಲ ಮತ್ತೆ ಬಂದಿಲ್ಲ – ಎಂದು. ಹಾಗೆ ನಮ್ಮ ಶಿಬಿರವಿದ್ದ ಛತ್ರ ಕೂಡ ನೋಡಿದೆ. 'ದಂಡವತೆ' ಆಶ್ರಮಕ್ಕೆ ಹೋದೆ. ಅಲ್ಲಿ ಬ್ರಹ್ಮಚಾರಿ ಮಾಧವರಾವ್ ಇರಲಿಲ್ಲ. ಯಾರೋ ಗೃಹಸ್ಥರೊಬ್ಬರಿದ್ದರು. ಯಾತ್ರಿಗಳು ತಂಗಲು ಜಾಗ ದೊರೆಯುವುದೇ ಎಂದು ವಿಚಾರಿಸಿದೆ. ೧೫೦ ರೂ. ಬಾಡಿಗೆ ಕೊಡಲೇಬೇಕಾಗುತ್ತದೆಂದರು. ನಾನು ತಂಗುವುದಿಲ್ಲ, ತುಸು ಜ್ವರ ಬರುವಂತಿದೆ, ಸ್ವಲ್ಪ ವಿಶ್ರಮಿಸಿಕೊಂಡು ಹೋಗುವೆನೆಂದು ಹೇಳಿದರೂ ಅವರು ಕೇಳಲಿಲ್ಲ. ಅವರ ನಿಯಮದಂತೆ ರೂ. ೧೫೦ ತೆತ್ತು ಅಲ್ಲೇ ಮಲಗಿದೆ. ಸುಮಾರು ಮಧ್ಯಾಹ್ನ ೧೨.೩೦ಕ್ಕೆ ಯಾರೋ ಒಬ್ಬರು ಬಂದು ಊಟಮಾಡಲು ಕರೆದರು. ನಾನೂ ಹೋಗಿ ಊಟದ ಶಾಸ್ತ್ರ ಮುಗಿಸಿದೆ. ಹಿಂದೆ ನಡೆಯುತ್ತಿದ್ದ ಸೇವೆ ಈಗ ಇದ್ದಂತಿರಲಿಲ್ಲ. ಈಗ ಕೇವಲ ಹೊಟೇಲಿನಂತೆ ಆಗಿದೆ. ಅಂದಿನ ದಂಡವತೆ ಆಶ್ರಮ ಹೇಗಿತ್ತು, ಇಂದು ಹೇಗಿದೆ! ಸರಿ, ಅಲ್ಲಿಂದ ಹೊರಟೆ. ಎಲ್ಲ ಆ ಮಹಾಮಾಯೆಯ ಆಟ ಎನ್ನಿಸಿತು. ಗುಲ್ಬರ್ಗಾ ಶ್ರೀರಾಮಕೃಷ್ಣ ಆಶ್ರಮ (ಖಾಸಗಿ ಕೇಂದ್ರ) ಸೇರಿದಾಗ ಸುಮಾರು ಸಂಜೆ ೫.೩೦ – ೬ ಗಂಟೆಯಾಗಿತ್ತು.

ಸ್ವಾಮಿ ಪ್ರೇಮಾನಂದರು

ಸ್ವಾಮಿ ಅಶೋಕಾನಂದ

ಅನುವಾದ: ಡಾ. ಇ. ವಸಂತಕುಮಾರ್



ನನ್ನ ಕಾಲೇಜು ವಿದ್ಯಾಭ್ಯಾಸದ ಕೊನೆಯ ಎರಡು ವರ್ಷಗಳಿಗೆ ಬಂಗಾಲದ ಸಣ್ಣ ಒಂದು ಪಟ್ಟಣಕ್ಕೆ ಹೋಗಲು ನಾನು ತೀರ್ಮಾನಿಸಿದ್ದೆ, ಏಕೆಂದರೆ ಅಲ್ಲಿದ್ದ ಪ್ರಿನ್ಸಿಪಾಲರು ಜಗದ್ವಿಖ್ಯಾತ ಪಂಡಿತರಾಗಿದ್ದರು. ಈ ತೀರ್ಮಾನ ಕೈಗೊಳ್ಳುವ ಸಮಯದಲ್ಲಿ ನಾನು ಬೇಲೂರು ಮಠಕ್ಕೆ ಹೋದೆ. ಸ್ವಾಮಿ ಪ್ರೇಮಾನಂದರು, ''ನೀನು ಎಲ್ಲಿ ಹೋಗಿದ್ದೆ? ನೀನು ಯಾವ ಕಾಲೇಜಿಗೆ ಸೇರಿಕೊಳ್ಳುವೆ ಎಂದು ಯೋಚಿಸುತ್ತಿದ್ದೆ.'' ಎಂದು ಹೇಳಿದರು. ನಾನು ನನ್ನ ಯೋಜನೆಯ ಬಗ್ಗೆ ತಿಳಿಸಿದೆ. ಅವರು, ''ಬೇಡ, ಹಾಗೆ ಮಾಡಬೇಡ. ನೀನು ಹಳ್ಳಿಗನಾಗಬೇಡ. ದೊಡ್ಡ ನಗರದಲ್ಲಿ ವಾಸಿಸು, ನಗರವಾಸಿಗಳ ರೀತಿನೀತಿಗಳನ್ನು ಕಲಿ'' ಎಂದರು. ನಂತರ, ಹೇಗೆ ಅವರ ತಾಯಿ ಅವರನ್ನು ಕಲ್ಕತ್ತೆಯ ಪ್ರೌಢಶಾಲೆಗೆ ಕಳುಹಿಸಿದರು ಮತ್ತು ಅವರ ಹಳ್ಳಿಗೆ ಹಿಂತಿರುಗಲು ಹೇಗೆ ನಿರಾಕರಿಸಿದರು ಎಂಬುದನ್ನು ಹೇಳಿದರು. ''ಒಂದು ಮಧ್ಯಾಹ್ನ ನಮ್ಮ ತಾಯಿಯನ್ನು ನೋಡಲು ಹೋದೆ. ಅವಳಿಗೆ ನನ್ನ ಮೇಲೆ ಪ್ರೀತಿ ಇದ್ದರೂ ಅಸಹನೆಯಿಂದ, 'ನೀನೇಕೆ ಇಲ್ಲಿಗೆ ಬಂದೆ?' ಎಂದು ಆಕ್ಷೇಪಿಸಿದಳು.'' ಏಕೆ ಹೋದೆನೆಂದು ಅವರಿಗೆ ವಿವರಿಸಲಾಗಲಿಲ್ಲ. ಬಾಲಕ ತನ್ನ ತಾಯಿಯನ್ನು ಕಾಣಲು ಹೋದೆನೆಂದು ಹೇಗೆ ವಿವರಿಸಿಯಾನು? 'ಹಿಂತಿರುಗಿ ಹೋಗು. ಕಲ್ಕತ್ತೆಗೆ ಹಿಂತಿರುಗು. ಇಲ್ಲಿದ್ದರೆ ಹಳ್ಳಿಯವರ ನಡೆನುಡಿಯನ್ನು ಕಲಿತುಕೊಳ್ಳುವೆ' ಎಂದಳಂತೆ.

ವಿಚಿತ್ರವೆಂದರೆ, ಭಾರತ ಲಕ್ಷೋಪಲಕ್ಷ ಹಳ್ಳಿಗಳಿಂದ ಕೂಡಿದ್ದರೂ ಭಾರತೀಯ ನಾಗರಿಕತೆ ಪ್ರಾಚೀನ ಕಾಲದಿಂದಲೂ ನಗರ ಸಂಸ್ಕೃತಿಯನ್ನು ಎತ್ತಿ ಹಿಡಿದಿದೆ. ಎರಡು ಪದಗಳಿವೆ: ಒಂದು ಗ್ರಾಮ್ಯ, ಇನ್ನೊಂದು ನಾಗರಿಕ. 'ಗ್ರಾಮ್ಯ'ವೆಂದರೆ, ಹಳ್ಳಿಗೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಸೇರಿದುದು. ಅಸಭ್ಯ ಎಂಬ ಅರ್ಥವೂ ಆ ಪದಕ್ಕಿದೆ. 'ನಾಗರಿಕ' ಎಂದರೆ, ನಗರಕ್ಕೆ ಸೇರಿದುದು; ಸುಸಂಸ್ಕೃತ ಎಂಬ ಅರ್ಥವೂ ಇದೆ. ನಿಮ್ಮಲ್ಲಿಯೂ ಕೂಡ ಅದೇ ಅರ್ಥವಿದೆ. ಅಂತೂ, ಸ್ವಾಮಿಗಳು, ನಾನು ಸಣ್ಣ ಪಟ್ಟಣದಲ್ಲಿ ಕಾಲೇಜಿಗೆ ಹೋಗುವುದನ್ನು ಬಹಳ ವಿರೋಧಿಸಿದರು.

ನಂತರ ಅವರು, ಸ್ವಾಮಿ ವಿವೇಕಾನಂದರು ಯಾವ ವಿಷಯಗಳನ್ನು ವ್ಯಾಸಂಗ ಮಾಡುವುದಕ್ಕೆ ಇಷ್ಟಪಡುತ್ತಿದ್ದರು ಎಂಬುದನ್ನು ನನಗೆ ಹೇಳಿದರು. ಅವೇ ತತ್ತ್ವಶಾಸ್ತ್ರ ಮತ್ತು ಇತಿಹಾಸ. ಈ ವಿಷಯಗಳನ್ನು ಅಧ್ಯಯನ ಮಾಡುವಂತೆ ನನಗೆ ಹೇಳಿದರು. ನಾನು, ಭಾರತದಲ್ಲೇ ಅತ್ಯಂತ ಶ್ರೇಷ್ಠ ಕಾಲೇಜು ಎನಿಸಿದ ಪ್ರೆಸಿಡೆನ್ಸಿ ಕಾಲೇಜಿಗೆ ಹೋಗಬೇಕೆಂದು ಅವರು ಇಚ್ಛಿಸಿದರು. ಆದರೆ ಅದು ಅತ್ಯಂತ ದುಬಾರಿಯಾದ ಕಾಲೇಜೂ ಆಗಿದ್ದುದರಿಂದ ನನಗೆ ಅದು ನಿಲುಕದುದಾಗಿತ್ತು. ಆದ್ದರಿಂದ ನಾನು ಕಲ್ಕತ್ತೆಯಲ್ಲಿದ್ದ ಮತ್ತೊಂದು ಕಾಲೇಜು, ಸಿಟಿ ಕಾಲೇಜಿಗೆ ಹೋದೆ. ಸ್ವಲ್ಪ ಕಾಲದ ನಂತರ, ನನಗೆ ಸರ್ಕಾರದ ವಿದ್ಯಾರ್ಥಿವೇತನ ಸಿಕ್ಕಿರುವುದಾಗಿ ತಿಳಿದುಬಂದಿತು. ಸ್ವಲ್ಪ ಧೈರ್ಯ ಮಾಡಿದ್ದರೆ ಅಥವಾ ಸ್ವಾಮಿಗಳು ಹೇಳಿದಂತೆ ಮಾಡಿದ್ದರೆ, ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೇ ವ್ಯಾಸಂಗ ಮಾಡಬಹುದಾಗಿತ್ತು. ನನ್ನ ಬುದ್ಧಿವಂತಿಕೆಯಿಂದಾಗಿ, ಸ್ವಾಮಿಗಳ ಸಲಹೆಯನ್ನು ಅನುಸರಿಸುವುದರಲ್ಲಿ ವಿಫಲನಾದೆ. ಅವರು ಹೇಳಿದಂತೆ ನಾನು ವ್ಯಾಸಂಗ ಮಾಡಲೂ ಇಲ್ಲ. ಪ್ರೌಢಶಾಲೆಯಲ್ಲಿ ಓದುವಾಗಲೇ ನನ್ನ ಮನಸ್ಸು ಆಧ್ಯಾತ್ಮಿಕ ಚಿಂತನೆಗಳ ಕಡೆ ತಿರುಗಿದ್ದರಿಂದ, ಶಾಲಾ ವ್ಯಾಸಂಗದಲ್ಲಿ ನನ್ನ ಆಸಕ್ತಿ ಇಂಗಿಹೋಯಿತು. ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಎರಡು ವರ್ಷ ವ್ಯಾಸಂಗದಲ್ಲಿ ಉದಾಸೀನವಾದರೆ, ಮುಂದಿನ ಎರಡು ವರ್ಷ ಅದನ್ನು ಇನ್ನಷ್ಟು ಕಡೆಗಣಿಸಿದೆ.

ಅದೇನೇ ಆದರೂ, ಕೊನೆಯ ಎರಡು ವರ್ಷಗಳಲ್ಲಿ ಕಾಲೇಜಿಗಂತೂ ಹೋಗುತ್ತಿದ್ದೆ. ಆ ಕಾಲದಲ್ಲಿ ಸ್ವಾಮಿ ಪ್ರೇಮಾನಂದರನ್ನು

ನೋಡಲು ಬೇಲೂರು ಮಠಕ್ಕೆ ಹೋಗುತ್ತಿದ್ದೆ. ಆ ಸಮಯದಲ್ಲಿ ಕೆಲವು ಆಧ್ಯಾತ್ಮಿಕ ಸಾಧನೆಗಳ ಫಲವಾಗಿ ತಡೆಯಲಾರದಷ್ಟು ತಲೆ ನೋವು ಬರುತ್ತಿತ್ತು. ಅದು ಎಡೆಬಿಡದೆ ಸುಮಾರು ಮೂರು ವರ್ಷ ಗಳ ಕಾಲ ಇತ್ತು. ಆ ಕಾಲದಲ್ಲಿ ಧ್ಯಾನ, ಅಧ್ಯಯನ ಅಥವಾ ಮತ್ತಾವುದನ್ನೂ ಮಾಡಲು ಆಗುತ್ತಿರಲಿಲ್ಲ. ನನ್ನ ಜೀವನವೇ ಬರಿ ದಾದಂತೆ ಕಾಣುತ್ತಿತ್ತು. ಆ ಕರಾಳ ದಿನಗಳಲ್ಲಿ ಸ್ವಾಮಿ ಪ್ರೇಮಾ ನಂದರು ನನಗೆ ಭರವಸೆ ಕೊಡುತ್ತಿದ್ದರು. ಎಲ್ಲ ಸರಿ ಹೋಗುವುದು ಎಂದು ಅವರು ಹೇಳುತ್ತಿದ್ದರು. ಆ ಮಾತುಗಳನ್ನು ನಂಬುವುದು ನನಗೆ ಸಾಧ್ಯವಾಗುತ್ತಿರಲಿಲ್ಲ. ಅವರು ನನ್ನನ್ನು ಕೇವಲ ಪ್ರೋತ್ಸಾಹಿಸು ತ್ತಿರುವರು ಎನ್ನಿಸುತ್ತಿತ್ತು. ಆದರೆ ಎಲ್ಲವೂ ಸರಿ ಹೋಯಿತು. ಅಂತಹ ಮಹಾತ್ಮರು ಏನನ್ನಾದರೂ ಹೇಳಿದರೆ ಅದು ಸತ್ಯವಾಗಲೇಬೇಕು.

ಆ ಸಮಯದಲ್ಲಿ ನಾನು ಅವರಿಗೆ ಪತ್ರ ಬರೆಯಬೇಕಾಗಿ ಬಂತು. ನನಗೆ ಆಗಿದ್ದ ಆಧ್ಯಾತ್ಮಿಕ ಅನುಭವದ ಸತ್ಯತೆಯ ಬಗ್ಗೆ ಅವ ರನ್ನು ಕೇಳಬೇಕಾಗಿತ್ತು. ನನಗೆ ನೇರ ಹೇಳಲು ಸಂಕೋಚವಾದು ದರಿಂದ ನನ್ನ ಪ್ರಶ್ನೆಯನ್ನು ಸ್ಪಷ್ಟವಾಗಿ ಬರೆದು ತಿಳಿಸಬೇಕಾಯಿತು. ಅವರು ಒಂದು ದೀರ್ಘ ಪತ್ರದ ಮೂಲಕ ವಿವರಿಸಿದರು. ದುರದೃಷ್ಟ ವಶಾತ್ ಆ ಪತ್ರ ಈಗ ನನ್ನ ಬಳಿ ಇಲ್ಲ. ಆ ವೇಳೆಗೆ ನನ್ನ ವೈರಾಗ್ಯ ಸ್ಥಿರವಾಗಿತ್ತು; ನನ್ನಲ್ಲಿದ್ದುದನ್ನೆಲ್ಲಾ, ಸ್ವಾಮಿ ಪ್ರೇಮಾನಂದರು ನನಗೆ ಬರೆದಿದ್ದ ಪತ್ರಗಳನ್ನೂ ಕೂಡ – ಬಿಸಾಡುವಷ್ಟು ಮೂರ್ಖನಾಗಿದ್ದೆ. ಈಗ ನಾನು ಅದಕ್ಕಾಗಿ ಪಶ್ಚಾತ್ತಾಪಪಡುತ್ತೇನೆ. ಆದರೆ ಈ ಒಂದು ಪತ್ರದ ಬಗ್ಗೆ ನನಗೆ ನೆನಪಿದೆ. ಅವರು ನನ್ನ ಅನುಭವ ನಿಜವೆಂದು ಖಾತ್ರಿಪಡಿಸಿ ನನ್ನ ಪ್ರಶ್ನೆಗೆ ಉತ್ತರವಿತ್ತಿದ್ದರು. ಅನೇಕ ರೀತಿಯಿಂದ ನನ್ನ ಅನುಭವವನ್ನು ದೃಢಪಡಿಸಿದ್ದರು. 'ನೀನು ಸ್ವಾಮೀಜಿಯವರ ಕಾರ್ಯವನ್ನು ಮಾಡಲು ಜನ್ಮವೆತ್ತಿರುವೆ' ಎಂದು ತಿಳಿಸಿದ್ದರು. ಅದನ್ನು ಅಕ್ಷರಶಃ ಒಪ್ಪಲು ಆ ಸಮಯದಲ್ಲಿ ನಾನು ಸಿದ್ಧನಿರಲಿಲ್ಲ. ಆ ಮಾತುಗಳೂ ಕೂಡ ಉತ್ತೇಜನಕ್ಕಾಗಿ ಹೇಳಿದವೆಂದು ನಾನು ಭಾವಿ ಸಿದೆ. ಆದರೆ ಹೌದು, ಈಗ ನನ್ನ ಜೀವಿತದ ಉದ್ದೇಶ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಕೆಲಸವನ್ನು ಮಾಡುವುದಾಗಿದೆ. ಅವರು ಏನನ್ನು ಹೇಳಿದರೋ ಅದು ಸತ್ಯವಾಯಿತು; ನನ್ನ ಊಹೆಗೂ ಮೀರಿ ಅವರು ನನ್ನ ಭವಿಷ್ಯವನ್ನು ಕಂಡಿದ್ದರು.

ಅವರು ಯಾವಾಗಲೂ ನನ್ನ ಸಹಾಯಕ್ಕೆ ನಿಲ್ಲುತ್ತಿದ್ದರು. ನನಗೆ ಭರವಸೆ ಬೇಕಾದಾಗ ಭರವಸೆ ನೀಡುತ್ತಿದ್ದರು. ಕಲ್ಕತ್ತೆಯಲ್ಲಿ ಕಾಲೇ ಜಿಗೆ ಹೋಗುವುದಕ್ಕೆ ಸ್ವಲ್ಪ ಕಾಲಕ್ಕೆ ಮುನ್ನ ನಾನು ಅವರನ್ನು ಭೇಟಿಯಾಗಿದ್ದಾಗ ನನ್ನ ಆಧ್ಯಾತ್ಮಿಕ ಜೀವನದ ಭವಿಷ್ಯದ ಬಗ್ಗೆ ಇದ್ದ ಸಮಸ್ಯೆಯೊಂದನ್ನು ಬಗೆಹರಿಸಿದರು. ಆ ಸಮಸ್ಯೆಯಿಂದ ನನಗೆ ಬಹಳ ತೊಂದರೆಯಾಗಿತ್ತು. ನಾನು ಅವರಿಗೆ ಎಷ್ಟು ಋಣಿ ಯಾಗಿರುವೆನೆಂಬುದರ ಬಗ್ಗೆ ನಿಮಗೆ ತಿಳಿಸಲೋಸುಗ ಆ ಸಂದರ್ಭ ವನ್ನು ನಿಮಗೆ ವಿವರಿಸುತ್ತೇನೆ. ಅವರನ್ನು ನೋಡಲು ಬೇಲೂರು ಮಠಕ್ಕೆ ಹೋದೆ. ಆದರೆ ಅವರು ಅಲ್ಲಿ ಕಾಣಲಿಲ್ಲ. ಅವರಿಗಾಗಿ ಕಾಯುವಂತೆ ನನಗೆ ಒಂದು ಸಂದೇಶವನ್ನು ಬಿಟ್ಟು ಹೋಗಿದ್ದರು. ಮಳೆಗಾಲ ಪ್ರಾರಂಭವಾಗಿತ್ತು; ನನಗೆ ಜ್ವರ ಬರಲಾರಂಭಿಸಿತ್ತು. ಮಠದ ಸಂನ್ಯಾಸಿಗಳಿಗೆ ತೊಂದರೆಯಾಗಬಾರದೆಂದು ನಾನು ನಮ್ಮ ಊರಿಗೆ ಹಿಂತಿರುಗಿದೆ. ಎರಡು ಮೂರು ವಾರಗಳ ನಂತರ ಕಲ್ಕತ್ತೆಗೆ ಹಿಂತಿರುಗಿದೆ. ಪ್ರಯಾಣ ದೀರ್ಘವಾಗಿತ್ತು – ರೈಲು, ನಂತರ ದೋಣಿ, ಮತ್ತೆ ರೈಲು. ಪ್ರವಾಹದಿಂದ ಪ್ರಯಾಣ ತಡವಾಯಿತು. ಜತೆಗೆ ಈ ಭಯಂಕರ ತಲೆನೋವು. ಮಾರ್ಗಮಧ್ಯೆ, ಮಧ್ಯರಾತ್ರಿ ಯಲ್ಲಿ ಆ ತಲೆನೋವಿನಲ್ಲಿಯೇ ನಾನು ಅವರಿಗೆ, 'ಈಗ ಇದು ನನ್ನ ಸಮಸ್ಯೆ; ನೀವು ಇದಕ್ಕೆ ಏನಾದರೂ ಪರಿಹಾರ ನೀಡಿ' ಎಂದು ಪ್ರಾರ್ಥಿಸಿದೆ. ನಾನು ಕಲ್ಕತ್ತೆ ತಲುಪಿದ ಮೇಲೆ ನನಗೆ ತಿಳಿಯಿತು, ಅವರಿಗೆ ಕಾಲರಾ ಬಂದು ಆಗತಾನೆ ಚೇತರಿಸಿಕೊಳ್ಳುತ್ತಿದ್ದರು ಎಂದು. ಆಗತಾನೆ ಅವರಿಗೆ ಅನಾನಸು ಹಣ್ಣು ತಿನ್ನಬೇಕೆನಿಸಿತ್ತು ಎಂದು ನನ್ನ ಮಿತ್ರರು ತಿಳಿಸಿದರು. ಕಾಕತಾಳೀಯವೆಂಬಂತೆ, ನಾನು ಮನೆಯಿಂದ ಹೊರಟ ದಿನ ನಮ್ಮ ಮನೆಯ ತೋಟದ ಗಿಡ ವೊಂದರಲ್ಲಿ ಎರಡು ಮಾಗಿದ ದೊಡ್ಡ ಅನಾನಸು ಹಣ್ಣುಗಳಿದ್ದವು. ಆಶ್ಚರ್ಯವೆಂದರೆ, ಹಕ್ಕಿಗಳು ಅವನ್ನು ಮುಟ್ಟಿರಲಿಲ್ಲ. ನಾನು ಈ ಹಣ್ಣುಗಳನ್ನು ಶ್ರೀರಾಮಕೃಷ್ಣರಿಗೆ ನಿವೇದಿಸಲು ಬೇಲೂರು ಮಠಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಯೋಚಿಸಿದ್ದೆ. ನಮ್ಮ ಮನೆ ಯವರಿಗೆ ಇಚ್ಛೆಯಿಲ್ಲದಿದ್ದರೂ ನಾನು ಅವನ್ನು ಕಿತ್ತುಕೊಂಡು ಬಂದಿದ್ದೆ. ಕಲ್ಕತ್ತೆ ತಲುಪಿದ ಬೆಳಗ್ಗೆ ಮಠಕ್ಕೆ ಹೋದೆ. ಸ್ವಾಮಿ ಪ್ರೇಮಾ ನಂದರು ಮೇಲೆ ವರಾಂಡದಲ್ಲಿದ್ದರು. ಒಂದು ದೊಡ್ಡ ಬೆಂಚಿನ ಮೇಲೆ ಕುಳಿತಿದ್ದರು. ಅವರು ನನಗೆ ಕಾಯುತ್ತಿದ್ದಂತೆ ಕಂಡುಬಂತು. ನನ್ನನ್ನು ನೋಡಿದ ಕೂಡಲೆ ಅವರು ಜೋರಾಗಿ ಏನನ್ನೋ ಹೇಳಿ ದರು. ಆದರೆ ನಾನು ನಿಲ್ಲುವಂತಿರಲಿಲ್ಲ. ಆ ಅನಾನಸ್ ಹಣ್ಣು ಗಳನ್ನು ನೈವೇದ್ಯಕ್ಕಾಗಿ ತಂದಿದ್ದುದರಿಂದ ಅವನ್ನು ಎಲ್ಲಿಯೂ ಇಡು ವಂತಿರಲಿಲ್ಲ. ಆದ್ದರಿಂದ ನೈವೇದ್ಯವನ್ನು ತಯಾರಿಸುವ ಕೋಣೆಗೆ ಸರಸರನೆ ಹೋಗಿ, ಕೂಡಲೆ ಹಿಂತಿರುಗಿ ಬಂದೆ.

ಅವರು ಭಾವಾವಸ್ಥೆಯಲ್ಲಿದ್ದರು. ನಾನು ಹಿಂದೆ ವಿವರಿಸಿದಂತೆ ಅವರ ಮುಖ ಬೆಂಕಿಯಂತೆ ಕೆಂಪಾಗಿತ್ತು, ಕಣ್ಣಿನ ರೆಪ್ಪೆಗಳು ಬಡಿ ಯುತ್ತಿದ್ದುವು. ನಾನು ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದೆ. ತಕ್ಷಣ ಏನೋ ನನ್ನನ್ನು ಪ್ರವೇಶಿಸಿದಂತಾಯಿತು. ನಾನು ಮಾತ ನಾಡುವುದಕ್ಕೆ ಮೊದಲೇ ಅವರು ಒಂದು ಪುಟ್ಟ ವಾಕ್ಯವನ್ನು ಹೇಳಿ ದರು. ಅದು ನನ್ನ ಸಮಸ್ಯೆಯನ್ನು ಒಮ್ಮೆಗೆ ಪರಿಹರಿಸಿತು. ತಾಪ ದಿಂದ ಬೆಂದ ಹಾಗಿದ್ದ ನನ್ನ ಮೇಲೆ ಅವರು ಒಂದು ತೊಟ್ಟಿ ನೀರನ್ನು ಸುರಿದಂತಿತ್ತು. ನನ್ನ ದೇಹ, ಮನಸ್ಸು ಎಲ್ಲವೂ ತಣ್ಣಗಾಯಿತು. ಅವರ ಮಹತ್ಕೃಪೆ ಹಾಗಿತ್ತು. ನನ್ನ ಸಮಸ್ಯೆ, ಸಮಸ್ಯೆಯೇ ಅಲ್ಲ ವೆಂದೂ, ನಾನು ಅದನ್ನು ಹಿಗ್ಗಿಸಿ ಸಮಸ್ಯೆಯಂತೆ ಕಾಣುತ್ತಿರುವೆ ನೆಂದೂ ಅವರು ವಿವರಿಸಿದರು. ಕೇವಲ ಐದು ಪದಗಳಿಂದ ಕೂಡಿದ ಅವರ ಮೊದಲ ವಾಕ್ಯ ಸಾಕಾಗಿತ್ತು. ಆಧ್ಯಾತ್ಮಿಕ ತೃಷೆಯನ್ನು ಒಬ್ಬರು

ಮತ್ತೊಬ್ಬರಲ್ಲಿ ನಿಜವಾಗಿಯೂ ದಾಟಿಸಬಹುದೆಂದು ನನ್ನ ಅನುಭವದಿಂದಲೇ ಅಂದು ನಾನು ತಿಳಿದೆ. ನಾನು ಅವರ ಪಾದಗಳನ್ನು ಮುಟ್ಟಿದಾಗ, ನಿಸ್ಸಂದೇಹವಾಗಿ ಅವರಿಂದ ಏನನ್ನೋ ಪಡೆದೆ, ಮತ್ತು ಮೂರು ದಿನಗಳ ಕಾಲ ಭಾವಭರಿತ ಸ್ಥಿತಿಯಲ್ಲಿ ಇದ್ದೆ. ದೇವರ ಬಗ್ಗೆ ಮಾತನಾಡುವುದು ಮತ್ತು ಹಾಡುವುದು, ಇಷ್ಟನ್ನೇ ಮಾಡಬೇಕೆನಿಸುತ್ತಿತ್ತು. ಅದೊಂದು ಅದ್ಭುತ ಸ್ಥಿತಿ. ಆದರೆ ಮೂರು ದಿನಗಳ ನಂತರ, ಮೊಸರನ್ನು ಕೊಂಡುಕೊಳ್ಳಲು ಅಂಗಡಿಗೆ ಹೋದೆ. ಕಲ್ಕತ್ತೆ ಸಿಹಿಮೊಸರಿಗೆ ಪ್ರಸಿದ್ಧಿ. ಅದನ್ನು ಸ್ವಲ್ಪ ಕೊಂಡು ಕೊಂಡು ತಿಂದೆ. ಆಗ ನನ್ನ ಮನಸ್ಸು ಕೂಡಲೆ ಕೆಳಗೆ ಬಂದಿತು. ಅದೂ ಕೂಡ ಒಂದು ಅನುಭವ. ಅವರಿವರು ಕೊಟ್ಟ ಆಹಾರವನ್ನು ಸೇವಿಸಬಾರದೆಂದು ಹಿಂದೂಗಳಲ್ಲಿ ನಂಬಿಕೆಯಿದೆ (ಖಂಡಿತ ನೀವು ಇದನ್ನು ಕುರುಡು ನಂಬಿಕೆಯೆಂದೇ ಹೇಳುವಿರಿ). ಅದರಲ್ಲಿ ಸತ್ಯಾಂಶವಿದೆ, ಕಡೇಪಕ್ಷ ಆಧ್ಯಾತ್ಮಿಕ ಬೆಳವಣಿಗೆಯ ವಿಷಯದಲ್ಲಿ. ಆಧ್ಯಾತ್ಮಿಕ ಭಾವಗಳು ನಾಟಬೇಕಾದರೆ, ನಮ್ಮ ಮನಸ್ಸೆಂಬ ಸಾಧನ ಅತ್ಯಂತ ಸೂಕ್ಷ್ಮವಾಗಿರಬೇಕು. ಶುದ್ಧಮನಸ್ಕರಲ್ಲದ ವ್ಯಕ್ತಿಗಳಿಂದ ಬಂದ ಆಹಾರವನ್ನು ತಿಂದರೆ, ಮನಸ್ಸಿನ ಸೂಕ್ಷ್ಮತೆ ನಾಶವಾಗುವುದು, ಮತ್ತೆ ಅವನ್ನು ನಾವು ಅನುಭವಿಸಲಾರೆವು. ನಾನು ನಿಮಗೆ ಕೆಲವೊಮ್ಮೆ ಹೇಳಿದ್ದೇನೆ, ನೀವು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಬೇಕಾದರೆ, ಅಲ್ಲಿ ಇಲ್ಲಿ ತಿನ್ನಬಾರದು. ಯಾರು ನಿಮ್ಮ ಆಹಾರವನ್ನು ತಯಾರಿಸುವವರೆಂಬ ವಿಷಯದಲ್ಲಿ ನೀವು ಎಚ್ಚರದಿಂದಿರಬೇಕು. ಇದರ ಬಗ್ಗೆ ಮನಸ್ಸನ್ನು ಗೋಜಲು ಮಾಡಿಕೊಳ್ಳಬೇಡಿ, ಇಲ್ಲಿ ಇತರರಿಗಿಂತ ನೀವು ಪವಿತ್ರರೆಂದು ಭಾವಿಸುವ ಸಂಭವವೂ ಇದೆ. ಆದರೆ ಸತ್ಯ ಅದಲ್ಲ, ನಿಮ್ಮ ಕೈಯಿಂದ ಆಹಾರವನ್ನು ಸ್ವೀಕರಿಸದವರು ಇರುವರೆಂಬುದನ್ನು ನೆನಪಿಡಿ; ಅದು ನಿಮ್ಮ ಅಹಂಕಾರವನ್ನು ತಗ್ಗಿಸುವುದು.

ನಾನು ಹಿಂದೆ ಹೇಳಿದಂತೆ, ಕಲ್ಕತ್ತೆಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾಮಿ ಪ್ರೇಮಾನಂದರನ್ನು ಅನೇಕ ಬಾರಿ ಭೇಟಿ ಮಾಡಿದೆ. ಅವರು ಯಾವಾಗಲೂ ನನಗೆ ಪ್ರೋತ್ಸಾಹ ನೀಡುತ್ತಿದ್ದರು. ಅತ್ಯಂತ ದುಃಖಕರವಾದ ಸಂಗತಿಯೆಂದರೆ, ನಾನು ಸಂಘವನ್ನು ಸೇರುವುದಕ್ಕೆ ಮೊದಲೇ ಅವರು ಕಾಲವಾದರು. ನಾನು ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದಾಗ ಅವರು ಬೇಲೂರು ಮಠವನ್ನು ಬಿಟ್ಟಿದ್ದರು. ಆದರೆ ಆಗ ನನಗೆ ಆ ವಿಷಯ ಗೊತ್ತಿರಲಿಲ್ಲ, ನಾನು ಮುಂದೇನು ಮಾಡಲಿ ಎಂದು ಅವರಿಗೆ ಪತ್ರ ಬರೆದೆ. ಅವರು ಪ್ರವಾಸ ಮಾಡುತ್ತಿರುವುದಾಗಿಯೂ ಯಾವಾಗ ಹಿಂತಿರುಗುವರೋ ತಿಳಿಯದೆಂದೂ, ಆ ಸಮಯದಲ್ಲಿ ಬೇಲೂರು ಮಠದಲ್ಲಿದ್ದ ಸ್ವಾಮಿ ತುರೀಯಾನಂದರೊಡನೆ ನಾನು ಮಾತನಾಡಬೇಕೆಂದೂ ಪ್ರೇಮಾನಂದರು ನನಗೆ ಪತ್ರದ ಮೂಲಕ ತಿಳಿಸಿದರು. ನನ್ನನ್ನು ಬಲ್ಲವರಾಗಿದ್ದ ಮತ್ತು ನನ್ನ ಆಧ್ಯಾತ್ಮಿಕ ಹಿನ್ನೆಲೆಯನ್ನು ತಿಳಿದಿದ್ದ ಸ್ವಾಮಿ ಪ್ರೇಮಾನಂದರ ಬುದ್ಧಿವಾದ ಮಾತ್ರವೇ ನನಗೆ ಬೇಕಾಗಿತ್ತು. ಆದರೆ ಅವರೊಡನೆ ಮಾತನಾಡುವ ಅವಕಾಶ ಮುಂದೆ ನನಗೆ ದೊರೆಯಲೇ ಇಲ್ಲ. ಏಕೆಂದರೆ, ಸ್ವಲ್ಪ ಕಾಲದ ನಂತರ ಅವರು ಕಾಲವಾದರು.

ಇದುವರೆಗಿನ ವಿವರಣೆಯಿಂದ, ನಾನು ಅವರಿಗೆ ವಿಶೇಷವಾಗಿ ಋಣಿಯಾಗಿರುವುದಾಗಿ ಏಕೆ ಭಾವಿಸುತ್ತೇನೆಂದು ನಿಮಗೆ ಅರ್ಥವಾಗಿರಬಹುದು. ನಾನು ಅವರಿಂದ ಪಡೆದ ಕೃಪಾಶೀರ್ವಾದಗಳಲ್ಲದೆ ನನ್ನ ಭವಿತವ್ಯವನ್ನೂ ಅವರು ರೂಪಿಸಿದರು.ಅವರೊಂದಿಗೆ ನಿಕಟ ಸಂಬಂಧವನ್ನು ಪಡೆಯಲು ಮತ್ತು ಅವರಂತಹ ಪರಿಪೂರ್ಣ ಚೇತನವನ್ನು ತಿಳಿಯಲು ನನಗವರು ಅವಕಾಶ ಕೊಟ್ಟರು. ಅದಕ್ಕಾಗಿ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ. ಆಧ್ಯಾತ್ಮಿಕ ವ್ಯಕ್ತಿಗಳ ಸಂಪರ್ಕವನ್ನು ಪಡೆಯುವುದು, ಅದರಲ್ಲಿಯೂ ಜ್ಞಾನಪ್ರಕಾಶವುಳ್ಳವರ ಒಡನಾಟಕ್ಕಿಂತ ಹೆಚ್ಚು ಪ್ರೇರಕವಾದುದು, ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ಮತ್ತೊಂದಿಲ್ಲ. ಯಾರ ಜೀವನ ಮತ್ತು ಚೇತನ, ಆಧ್ಯಾತ್ಮಿಕ ಸತ್ಯ ಅಥವಾ ಆಧ್ಯಾತ್ಮಿಕತೆಯ ನಿಜಸ್ವರೂಪದ ಅಚ್ಚಿನಲ್ಲಿ ರೂಪಿತವಾಗಿರುವುದೋ, ಅಂಥವರ ಸಂಗ ದೊರೆತಲ್ಲದೆ ನಮಗೆ ಆಧ್ಯಾತ್ಮಿಕತೆಯ ಸ್ವರೂಪ ಅರ್ಥವಾಗುವುದಿಲ್ಲ. ದೇವರ ಹೊರತು ಮತ್ತೇನೂ ಇರದವರು ಅನೇಕರಿದ್ದಾರೆ. ಅವರಿಗೆ ದೇಹವಿರುವಂತೆ ಕಾಣುತ್ತದೆ, ಆದರೆ ಅವರ ದೇಹವೇ ಭಗವಂತನ ಚೈತನ್ಯದಿಂದ ತುಂಬಿರುವುದು. ಇದು ಉತ್ಪ್ರೇಕ್ಷೆಯಂತೆ ಕಾಣಬಹುದು, ಆದರೆ ವಸ್ತುಸ್ಥಿತಿ ಹಾಗಲ್ಲ. ಶ್ರೀರಾಮಕೃಷ್ಣರ ಶಿಷ್ಯರಲ್ಲಿ ನಾವು ಕಂಡ ಹಿರಿಮೆಯನ್ನು ಪದಗಳು ವಿವರಿಸಲಾರವು. ನೀವು ಅಂಥವರನ್ನು ನೋಡಿದಲ್ಲದೆ ಧರ್ಮದಲ್ಲಿ ವಿವರಿಸಿರುವ ವಿಷಯಗಳನ್ನು ಅರ್ಥಮಾಡಿಕೊಳ್ಳಲಾರಿರಿ. ದೇವರನ್ನು ನೀವು ಅಂತಃಕರಣಪೂರ್ವಕವಾಗಿ ಪ್ರೀತಿಸಬೇಕೆಂದು ಹೇಳುತ್ತಾರೆ. ಆದರೆ ಅದರ ಅರ್ಥ ನಿಮಗೆ ಹೇಗೆ ತಿಳಿಯುವುದು? ನೀವು ಕಲಿಯ ಬೇಕಾದುದು ಏನು ಎಂಬುದು ನಿಮಗೆ ಗೊತ್ತಾದ ಹೊರತು ನೀವು ಅದನ್ನು ಹೇಗೆ ಕಲಿಯುವಿರಿ? ದೇವರಲ್ಲದೆ ಮತ್ತೇನೂ ಬೇಡವಾದಂಥ ವ್ಯಕ್ತಿಗಳಲ್ಲಿ ನೀವು ಅದನ್ನು ನೋಡಬಹುದು. ಆಧ್ಯಾತ್ಮಿಕ ಜೀವನದ ವೈಭವ ಅವರ ಜೀವನದಲ್ಲಿ ಒಡೆದು ಮೂಡಿರುತ್ತದೆ. ನಾನು ಕಂಡ ಎಲ್ಲ ಮಹಾಚೇತನಗಳನ್ನು ಕುರಿತು ಚಿಂತಿಸಿದಾಗ ಈ ವೈಭವವು ಎದ್ದು ಕಾಣುವಂತೆ ಅತ್ಯಂತ ಚೆನ್ನಾಗಿ ವ್ಯಕ್ತವಾಗಿರುವುದು ಸ್ವಾಮಿ ಪ್ರೇಮಾನಂದರ ಜೀವನದಲ್ಲಿ. ಅವರ ಜೀವನ ಸಂಪೂರ್ಣ ಅಹಂಕಾರಶೂನ್ಯವಾದುದು, ಆದರೂ ಅದೊಂದು ತೇಜೋಮಯ, ಶಕ್ತಿಪೂರ್ಣ ಜೀವನ.

ಪ್ರಾರಂಭದಲ್ಲಿ ಹೇಳಿದಂತೆ ನಾನು ವಿಶೇಷವಾಗಿ ಅವರಿಗೆ ಋಣಿಯಾಗಿದ್ದೇನೆ. ಆದರೂ ಈ ಮಾತು ಪವಿತ್ರತೆಗೆ ಭಂಗ ತರುವಂತಿದೆ. ಅವರೊಡನೆ ನನ್ನ ಸಂಬಂಧ ನಿರಂತರವಾದುದು. ಯಾವುದು ಅನಂತವೋ ಅದನ್ನು ಕೃತಜ್ಞತೆ ಅಥವಾ ದಾಕ್ಷಿಣ್ಯ ಎಂಬ ಮಾತುಗಳಿಂದ ವಿವರಿಸಲಾಗದು. ಸಾಮಾನ್ಯವಾದ ಸಂಬಂಧದಲ್ಲಿ

ಕೂಡ, ಕೃತಜ್ಞತೆ ಮುಂತಾದ ಮಾತುಗಳು ವ್ಯಕ್ತಿಗಳ ಮಧ್ಯೆ ಅಂತರ ವಿರುವುದನ್ನು ಸೂಚಿಸುತ್ತವೆ. ಧನ್ಯವಾದ ಎಂದು ಹೇಳಿದರೆ, ಆ ಸಂಬಂಧದ ಮೂಲಕ ಪಡೆದುದಕ್ಕೆ ಬೆಲೆ ಕೊಟ್ಟಂತಾಯಿತು ಎಂದು ನೀವು ಭಾವಿಸುತ್ತೀರಿ. ಹಾಗಲ್ಲ, ಯಾರು ಸ್ವಾಮಿ ಪ್ರೇಮಾನಂದರನ್ನು ಬಲ್ಲರೊ, ಅವರಿಂದ ಆಶೀರ್ವಾದವನ್ನು ಪಡೆದರೊ ಅವರು ಎಂದಿಗೂ ಅವರನ್ನು ಈ ರೀತಿ ನೋಡಲಾರರು. ಇರಲಿ, ಅವರ ಜೀವನದ ಕಥೆಯನ್ನು ನಾನೀಗ ಮುಗಿಸುತ್ತೇನೆ.

–೬–

ನಾನು ಹಿಂದೆ ನಿಮಗೆ ಹೇಳಿದಂತೆ, ಸ್ವಾಮಿ ಪ್ರೇಮಾನಂದರು ೧೯೧೬ರಲ್ಲಿ ಬೇಲೂರು ಮಠವನ್ನು ಬಿಟ್ಟು ಕಲ್ಕತ್ತೆಯಲ್ಲಿದ್ದ ಬಲ ರಾಮ ಬೋಸರ ಮನೆಗೆ ಹೋದರು. ಬೇಲೂರು ಮಠದ ಮೇಲ್ವಿ ಚಾರಣೆಯನ್ನು ಅವರು ನೋಡಿಕೊಳ್ಳಬೇಕಾಗಿರಲಿಲ್ಲ; ಆದ್ದರಿಂದ ಹಲವೆಡೆ ಪ್ರವಚನ ಮಾಡಲು ಅವರಿಗೆ ಬೇಕಾದಷ್ಟು ಅವಕಾಶ ವಿತ್ತು. ಅವರ ಜೀವಿತದ ಕೊನೆಯ ವರ್ಷಗಳಲ್ಲಿ ಅವರು ಮುಖ್ಯ ವಾಗಿ ಪೂರ್ವ ಬಂಗಾಲಕ್ಕೆ ಹೋದರು. ಸ್ವಾಮಿ ವಿವೇಕಾನಂದರು ಅಲ್ಲಿಗೆ ಒಮ್ಮೆ ಮಾತ್ರ ಹೋಗಿದ್ದರು. ಅವರು ೧೯೦೧ರಲ್ಲಿ ಢಾಕಾ ದಲ್ಲಿ ಉಪನ್ಯಾಸ ಮಾಡಿ ಹಿಂತಿರುಗಿದ ಮೇಲೆ ಸ್ವಾಮಿ ಪ್ರೇಮಾ ನಂದರಿಗೆ, ''ಪೂರ್ವ ಬಂಗಾಲವನ್ನು ನಾನು ನಿನಗೆ ಬಿಟ್ಟಿದ್ದೇನೆ'' ಎಂದಿದ್ದರು. ಅದು ಪ್ರವಾದಿಯ ಮಾತು. ಸ್ವಾಮಿ ಪ್ರೇಮಾ ನಂದರು ಅಲ್ಲಿಗೆ ಅನೇಕ ವೇಳೆ ಹೋದರು. ಕೆಲವು ವೇಳೆ ಸ್ವಾಮಿ ಬ್ರಹ್ಮಾನಂದರ ಜೊತೆಗೆ, ಕೆಲವು ವೇಳೆ ಅವರೊಬ್ಬರೇ. ಅವರು ಅಲ್ಲಿ ಅಸಾಧಾರಣವಾಗಿ ಯಶಸ್ವಿಯಾಗಿದ್ದರು. ಅವರ ಭೇಟಿಗಳು ಪ್ರಸಿದ್ಧವಾದ ಸಂಗತಿಗಳು.

ಅವರು ಎಲ್ಲಿಗೆ ಹೋದರೂ ಸಾವಿರಾರು ಜನರು ಅವರತ್ತ ಆಕರ್ಷಿತರಾಗುತ್ತಿದ್ದರು: ವಯಸ್ಸಾದವರು, ಯುವಕರು, ಹಿಂದೂ ಗಳು, ಮುಸಲ್ಮಾನರು, ಆಸ್ತಿಕರು, ನಾಸ್ತಿಕರು – ಎಲ್ಲರೂ ಅವರೆಡೆಗೆ ಸೆಳೆಯಲ್ಪಡುತ್ತಿದ್ದರು. ಅವರು ಒಂದು ಸ್ಥಳದಿಂದ ಹೊರಡುವಾಗ, ಕೆಲವು ದಿನಗಳ ಕಾಲ ಮಾತ್ರ ಅವರು ಅಲ್ಲಿದ್ದರೂ, ಜನರು ದುಃಖ ದಿಂದ ಗೋಳಿಡುತ್ತಾ ಅವರ ಹಿಂದೆ ಓಡುತ್ತಿದ್ದರು. ಅವರು ಕುದುರೆ ಗಾಡಿಯಲ್ಲಿ ಹೋಗುತ್ತಿರುವಾಗಲೂ ಜನರು ಅವರ ಹಿಂದೆ ಓಡುತ್ತಾ ಕಾತರತೆಯಿಂದ ಹಿಂಬಾಲಿಸುತ್ತಿದ್ದರು. ಅನೇಕ ಮೈಲಿಗಳ ವರೆಗೆ ಹಾಗೆ ಓಡುತ್ತ, ಯಾರಾದರೂ ಸಮೀಪದವರು ಕಾಲವಾದರೆ ಅಳುವವರ ಹಾಗೆ ಕಣ್ಣೀರು ಕರೆಯುತ್ತ ಅವರ ಹಿಂದೆ ಹೋಗು ತ್ತಿದ್ದರು. ಇವು ಚೈತನ್ಯದ ನಿಜವಾದ ಪವಾಡಗಳು. ಆ ಜನರ ಹೃದಯದಲ್ಲಿ ಅವರು ಪ್ರೀತಿಯನ್ನು ಹೊರಚಿಮ್ಮಿಸುತ್ತಿದ್ದರು; ಅದನ್ನು ತಾವೇ ಕೊಂಡುಕೊಂಡಿರುವಂತೆ, ಜನರ ಹೃದಯ ಮಿಡಿಯುವಂತೆ ಮಾಡುತ್ತಿದ್ದರು. ಅಲ್ಲಿ ಹಿಂದೂ ಮುಸಲ್ಮಾನರೆಂಬ ಭೇದವಿರುತ್ತಿರಲಿಲ್ಲ.

ಒಂದು ಸ್ಥಳದಲ್ಲಿ ಅವರು, ಇತರ ಸಾಧುಗಳು ಮತ್ತು ಭಕ್ತರು ಶ್ರೀರಾಮಕೃಷ್ಣರ ಉತ್ಸವ ಮಾಡಲು ತೀರ್ಮಾನಿಸಿದರು. ಸ್ವಯಂ ಸೇವಕರು ಅಲ್ಲಿ ಇಲ್ಲಿ ಹಿಂದೂಗಳಿಂದ ಕಾಣಿಕೆ ಸಂಗ್ರಹಿಸಿದರು. ಅವರು ಮುಸಲ್ಮಾನರ ಬಳಿಗೆ ಹೋಗಲಿಲ್ಲ. ನಿಮಗೆ ತಿಳಿದಂತೆ ಮುಸಲ್ಮಾನರು ತಮ್ಮ ಧರ್ಮದ ಬಗ್ಗೆ ಕಟ್ಟುನಿಟ್ಟಾಗಿರುವರು. ಅವರು ಹಿಂದೂ ಧರ್ಮವನ್ನು ನಂಬುವುದಿಲ್ಲ. ಆದರೆ ಅವರು ಸ್ವಾಮಿ ಪ್ರೇಮಾನಂದರನ್ನು ನೋಡಿದ್ದರು; ಕೆಲವರು ಅವರೊಡನೆ ಮಾತನಾಡಿದ್ದರು. ಸ್ವಾಮಿಗಳ ಬಗ್ಗೆ ಮುಸಲ್ಮಾನರಲ್ಲಿ ಸುದ್ದಿ ಹಬ್ಬಿತ್ತು. ''ಅವರು ಹಿಂದೂ ಸಂತರಾಗಿರಬಹುದು, ಆದರೆ ಅವರು ನಮಗೆ ಪೀರ್ ಕೂಡ'' ಎಂದು ಅವರು ಹೇಳಿದರು. ಪೀರ್ ಎಂದರೆ ಮುಸ ಲ್ಮಾನ್ ಸಂತರು. ಮುಸಲ್ಮಾನರೆಲ್ಲ ಸೇರಿ ಸ್ವಾಮಿ ಪ್ರೇಮಾನಂದರ ಬಳಿಗೆ ಹೋಗಿ, ''ಉತ್ಸವಕ್ಕೆ ನಮ್ಮ ಕಾಣಿಕೆಯನ್ನು ಕೇಳದಿರುವಂತಹ ತಪ್ಪನ್ನು ನಾವೇನು ಮಾಡಿದ್ದೇವೆ? ನಮ್ಮನ್ನೇಕೆ ಬಿಟ್ಟಿದ್ದೀರಿ?'' ಎಂದು ಕೇಳಿದರು. ಅವರೆಲ್ಲ ಬೇಸರಪಟ್ಟುಕೊಂಡಿದ್ದರು. ಆದ ಕಾರಣ, ಸ್ವಾಮಿ ಪ್ರೇಮಾನಂದರು ಸ್ವಯಂಸೇವಕರನ್ನು ಮುಸಲ್ಮಾನರ ಬಳಿಗೆ ಕಾಣಿಕೆ ತೆಗೆದುಕೊಳ್ಳಲು ಕಳುಹಿಸಿದರು. ಅವರು ಸಂತೋಷದಿಂದ ಕಾಣಿಕೆ ಕೊಟ್ಟರು. ಇಂತಹ ಘಟನೆಗಳು ಅನೇಕ ಸ್ಥಳಗಳಲ್ಲಿ ನಡೆದವು. ಹಿಂದೂಧರ್ಮ ಮತ್ತು ಇಸ್ಲಾಂಧರ್ಮ ಒಂದೇ ಎಂದು ಅವರು ಬೋಧಿಸಬೇಕಾಗಿರಲಿಲ್ಲ; ಅವರು ಹೆಚ್ಚಿನದಾಗಿ ಏನನ್ನೂ ಮಾಡ ಬೇಕಾಗಿರಲಿಲ್ಲ. ಕೇವಲ ಪ್ರೀತಿಯಿಂದ ಅವರೆಲ್ಲ ಒಂದೇ ಎಂದು ಭಾವಿಸುವಂತೆ ಮಾಡಿದರು.

ಒಂದು ಹಳ್ಳಿಯ ಪ್ರೌಢಶಾಲೆಯಲ್ಲಿ ಒಬ್ಬ ಮುಸಲ್ಮಾನ್ ಅಧ್ಯಾಪಕರಿದ್ದರು. ಅವರು ಸ್ವಾಮಿ ಪ್ರೇಮಾನಂದರನ್ನು ನೋಡಲು ಬಂದರು. ಸ್ವಾಮಿಗಳು ಅವರಿಗೆ ಎಲ್ಲ ಧರ್ಮಗಳೂ ಒಂದೇ; ಮತ್ತು ಶ್ರೀರಾಮಕೃಷ್ಣರು ಹೇಗೆ ಅದನ್ನು ಸಾಧಿಸಿ ತೋರಿಸಿದರು ಎಂದು ಹೇಳಲು ಪ್ರಾರಂಭಿಸಿದರು. ಆಗ ಕೆಲವು ತಿಂಡಿಗಳನ್ನು ತರಲಾ ಯಿತು. ಆ ಉಪಾಧ್ಯಾಯರು, ''ಸ್ವಾಮಿ, ಎಲ್ಲರೂ ಒಂದೇ ಎಂದು ಹೇಳುವಿರಿ, ನೀವು ಒಂದೇ ತಟ್ಟೆಯಲ್ಲಿ ನನ್ನೊಡನೆ ತಿನ್ನುವಿರಾ?'' ಎಂದು ಕೇಳಿದರು. ಆಗ ಸ್ವಾಮಿಗಳು, ''ಖಂಡಿತವಾಗಿಯೂ ತಿನ್ನುತ್ತೇನೆ'' ಎಂದು ಹೇಳಿದರು. ಅವರು ಅಂಥವರಾಗಿದ್ದರು.

ಕೆಲವು ವರ್ಷಗಳ ಹಿಂದೆ ಅವರು ಶ್ರೀರಾಮಕೃಷ್ಣರಿಂದಲೇ ಧರ್ಮದ ವಿಶ್ವವ್ಯಾಪಿತ್ವದ ಬಗ್ಗೆ ಮರೆಯಲಾಗದ ಪಾಠವನ್ನು ಕಲಿತಿ ದ್ದರು. ಅದು ೧೯೦೬ರಲ್ಲಿ, ಶ್ರೀರಾಮಕೃಷ್ಣರು ಕಾಲವಾದ ಅನೇಕ ವರ್ಷಗಳ ಬಳಿಕ ನಡೆಯಿತು. ಸ್ವಾಮಿಗಳು ಪವಿತ್ರ ನಗರಿಯಾದ ಪುರಿಯಲ್ಲಿದ್ದರು. ಜಗನ್ನಾಥ ದೇವಾಲಯದ ಮುಂದೆ ಕ್ರೈಸ್ತ ಪ್ರಚಾ ರಕನೊಬ್ಬ ಯಾತ್ರಿಕರ ಗುಂಪನ್ನುದ್ದೇಶಿಸಿ, ಅವರ ಧರ್ಮ ಎಷ್ಟು ದೋಷಪೂರಿತವಾಗಿದೆ ಎಂದು ಹೇಳುತ್ತಿದ್ದನು. ಅಂಥ ಪವಿತ್ರ ಸ್ಥಳದಲ್ಲಿ ಹಿಂದೂಧರ್ಮದ ಅವಹೇಳನ ಸ್ವಾಮಿಗಳಿಗೆ ಸಹಿಸ ಲಾಗಲಿಲ್ಲ. 'ಹರಿ ಬೋಲ್, ಹರಿ ಬೋಲ್' ಎಂದು ಅವರು ದೇವರ

ಹೆಸರನ್ನು ಜೋರಾಗಿ ಉಚ್ಚರಿಸಲು ಪ್ರಾರಂಭಿಸಿದರು. ಜನರ ಗುಂಪು ತಕ್ಷಣ ಅದನ್ನು ಮರುಧ್ವನಿಗೊಳಿಸಿತು. ಪ್ರಚಾರಕನ ಧ್ವನಿ ಅದರಲ್ಲಿ ಮುಳುಗಿಹೋಯಿತು. ಆ ರಾತ್ರಿ ಶ್ರೀರಾಮಕೃಷ್ಣರು ಸ್ವಾಮಿಗಳಿಗೆ ಕನಸಿನಲ್ಲಿ ಕಾಣಿಸಿಕೊಂಡು ಜೋರಾಗಿ, ''ನೀನೇಕೆ ಗುಂಪನ್ನು ಚದುರಿಸಿದೆ? ಆ ವ್ಯಕ್ತಿಯೂ ನನ್ನನ್ನೇ ಬೋಧಿಸುತ್ತಿದ್ದನು. ನಾಳೆ ನೀನು ಅವನನ್ನು ಪತ್ತೆಹಚ್ಚಿ ಅವನ ಕ್ಷಮಾಪಣೆ ಬೇಡು'' ಎಂದು ಕೇಳಿದರು. ಮರುದಿನ ಸ್ವಾಮಿಗಳು ಆ ಪ್ರಚಾರಕನನ್ನು ಹುಡುಕಿಕೊಂಡು ಹೋಗಿ ಅವನ ಕ್ಷಮಾಪಣೆ ಕೇಳಿದರು.

ಸ್ವಾಮಿ ಪ್ರೇಮಾನಂದರು, ನಿಮ್ಮ(ಪಾಶ್ಚಾತ್ಯ) ಸಂಪ್ರದಾಯ ಹೇಳುವಂತೆ, ಪೂರ್ವಬಂಗಾಲದ 'ಪೋಷಕ ಸಂತ'ರಾದರು. ಆದರೆ, ಈಗ ಅಲ್ಲಿನ ಪರಿಸ್ಥಿತಿ ಸಂಪೂರ್ಣವಾಗಿ ಬೇರೆಯಾಗಿದೆ. ಅದು ಭಾರತದಿಂದ ಪ್ರತ್ಯೇಕವಾಗಿ ಪೂರ್ವ ಪಾಕಿಸ್ತಾನವಾದ ಮೇಲೆ ಲಕ್ಷೋಪಲಕ್ಷ ಹಿಂದೂಗಳು ಆ ಪ್ರದೇಶವನ್ನು ತೊರೆದರು. ಆದರೆ ಅಂದಿನ ಕಾಲದಲ್ಲಿ ಶ್ರೀರಾಮಕೃಷ್ಣರ ಭಕ್ತರು ಸಹಸ್ರಗಟ್ಟಲೆ ಸಂಖ್ಯೆಯಲ್ಲಿದ್ದರು. ಸ್ವಾಮಿಗಳ ಪ್ರಭಾವ ಎಷ್ಟು ಪ್ರಬಲವಾಗಿತ್ತೆಂದರೆ, ಇಂದಿಗೂ ಕೂಡ ನಮ್ಮ ಸಂಘದ ಸಂನ್ಯಾಸಿಗಳಲ್ಲಿ ಬಹುಭಾಗ ಅಲ್ಲಿಂದ ಬಂದವರಿದ್ದಾರೆ.

ಅವರು ಕೊನೆಯ ಬಾರಿ ಪೂರ್ವ ಬಂಗಾಲಕ್ಕೆ ಹೋದಾಗ ಒಂದು ತಪ್ಪು ಮಾಡಿದರು. ಅದನ್ನು ಅವರು ಮಾಡಬಾರದಾಗಿತ್ತು. ಅದು ಅವರ ಮರಣಕ್ಕೆ ಕಾರಣವಾಯಿತು. ಈ ಕುರಿತು ಎರಡು ಅಭಿಪ್ರಾಯಗಳಿವೆ. ಅವರು ಪ್ರೇಮಮಯರಾಗಿದ್ದರು. ಯಾರಾದರಾಗಲಿ, ಅವರೊಡನೆ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. ಅವರ ಕೊನೆಯ ಭೇಟಿಯಲ್ಲಿ ಯಾರೊಡನೆ ಅವರು ಊಟ ಮಾಡಿದರೋ ಅವರ ನಡತೆ ಚೆನ್ನಾಗಿರಲಿಲ್ಲ. ನೀವು ಅತ್ಯಂತ ಶುದ್ಧರಾಗಿದ್ದರೆ, ನಿಮಗೆ ಅಶುದ್ಧವಾದುದರ ಸಂಪರ್ಕವುಂಟಾದಾಗ, ನಿಮಗೆ ರೋಗ ಬಂದೇ ಬರುವುದು, ಕೆಲವು ವೇಳೆ ಮರಣವೂ ಸಂಭವಿಸುವುದು. 'ಹಲವರ ಪಾಪದಿಂದ ಕ್ರಿಸ್ತ ಶಿಲುಬೆಯ ಮೇಲೆ ಸತ್ತ' ಎಂಬ ಕ್ರೈಸ್ತರ ವಾದ ನಿಜವಲ್ಲವೆಂದು ಭಾವಿಸಬೇಡಿ. ಧರ್ಮಶಾಸ್ತ್ರದ ವಿವರಣೆಯನ್ನು ನೀವು ಒಪ್ಪದಿರಬಹುದು, ಆದರೆ ಅದರ ಸಾರ ನಿಜ. ಯೇಸುಕ್ರಿಸ್ತ, ಪ್ರಪಂಚದಲ್ಲಿ ಜೀವಿಸಿದ್ದ ಅತ್ಯಂತ ಪರಿಶುದ್ಧ ಜೀವಿ ಎಂದು ಸ್ವಾಮೀಜಿ ಹೇಳುತ್ತಿದ್ದರು. ಅವನು ಇತರರ ಪಾಪಗಳನ್ನು ಸ್ವೀಕರಿಸಿ ಅದರಿಂದ ಬಾಧಿತನಾಗದೆ ಇರಲು ಸಾಧ್ಯವೆಂದು ನೀವು ಭಾವಿಸುವಿರಾ? ಇಲ್ಲ. ಅವನು ಆ ಪಾಪಗಳನ್ನೆಲ್ಲ ಸ್ವೀಕರಿಸಿದ. ಅದರ ಫಲವಾಗಿ ತನ್ನ ದೇಹವನ್ನು ತೊರೆದ. ಅದು ಅವನು ತೆರಬೇಕಾದ ದಂಡವಾಗಿತ್ತು.

ಶುದ್ಧವಾದ ದೇಹ ಅಶುದ್ಧವಾದುದನ್ನು ಸ್ವೀಕರಿಸಿದರೆ ಅದು ಹೆಚ್ಚುಕಾಲ ಬದುಕುವುದಿಲ್ಲ, ಅದು ನರಳಿ, ನರಳಿ ಶಿಥಿಲವಾಗಿ ಬಿದ್ದುಹೋಗುವುದು. ಸ್ವಾಮಿ ಪ್ರೇಮಾನಂದರಂತಹ ಮಹಾ ಚೈತನ್ಯಗಳಿಗೆ ರಕ್ಷಣೆ ಬೇಕಾಗುವುದು. ಅವರು ದೈಹಿಕ ಜೀವನದಿಂದ ಬೇರೆಯಾಗಿರುವರು. ಆದ್ದರಿಂದ ಅವರು ತಮ್ಮ ದೇಹಕ್ಕೆ ಸಂಬಂಧಪಟ್ಟುದನ್ನು ನೋಡಿಕೊಳ್ಳಲಾರರು. ಆದರೂ ಅವರು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಸ್ವಾಮಿ ಪ್ರೇಮಾನಂದರು ಬೇಲೂರು ಮಠದಲ್ಲಿ ಇದ್ದಾಗ ಕೆಲವು ಹಿರಿಯ ಸಂನ್ಯಾಸಿಗಳು ಅವರನ್ನು ನೋಡಿಕೊಳ್ಳುತ್ತಿದ್ದರು. ಆದರೆ ಪೂರ್ವ ಬಂಗಾಲದಲ್ಲಿ ಅವರೇ ಯಜಮಾನರಾಗಿದ್ದರು. ಅವರು ಯಾರ ಮಾತನ್ನು ಕೇಳುವರು? ಸ್ವಾಮಿ ಬ್ರಹ್ಮಾನಂದರು ಕೆಲವು ವೇಳೆ ಅವರೊಡನಿದ್ದಾಗ ಅವರನ್ನು ಆಕ್ಷೇಪಿಸುತ್ತಿದ್ದರು. ಆದರೆ ಯಾರೂ ಇಲ್ಲದಿರುವಾಗ ಅವರು ತಮಗೆ ಇಚ್ಛೆ ಬಂದಂತೆ ಮಾಡಿದರು. ಅವರು ಅಶುದ್ಧವಾದ ಆ ವ್ಯಕ್ತಿಯೊಡನೆ ಊಟ ಮಾಡಿದರು. ಅದೊಂದು ಕೆಲಸವನ್ನು ಅವರು ಮಾಡಬಾರದಾಗಿತ್ತು.

ಇನ್ನೊಂದು ವಿಷಯ. ಪೂರ್ವ ಬಂಗಾಲದ ಭಯಂಕರ ರೋಗ ಹರಡುವ ಕಳೆ, ಹಯಸಿಂತ್. ಅದರಲ್ಲಿ ಸುಂದರವಾದ ಎಳೆ ನೀಲಿ ಬಣ್ಣದ ಹೂವಿದೆ. ಒಬ್ಬ ಆಂಗ್ಲ ಮಹಿಳೆ ಈ ಗಿಡವನ್ನು ಬಂಗಾಲ ದೇಶಕ್ಕೆ ತಂದಳಂತೆ. ಅದು ಮಿತಿ ಮೀರಿ ಹಬ್ಬಿತು. ಅದು ಎಷ್ಟರ ಮಟ್ಟಿಗೆ ಹರಡಿತೆಂದರೆ, ಕೆರೆ, ಕೊಳ, ವಿಶಾಲವಾದ ನದಿಗಳು ಆ ಕಳೆಯಿಂದ ದಟ್ಟವಾಗಿ ಆವೃತವಾದುವು. ಕೆಲವು ವೇಳೆ ವಿಶಾಲವಾದ ನದಿಗಳಲ್ಲಿ ಹಲವು ಮೈಲಿಗಳಷ್ಟು ನೀರು ಮುಚ್ಚಿಹೋಗಿ, ದೊಡ್ಡ ದೋಣಿಗಳು ಮುಂದೆ ಹೋಗಲಾಗದೆ, ಗಾಳಿ ಆ ಸಸ್ಯ ರಾಶಿಯನ್ನು ತಳ್ಳಿ ತೆರವು ಮಾಡುವವರೆಗೆ ಅನೇಕ ದಿನಗಳ ಕಾಲ ಅವು ನಿಲ್ಲಬೇಕಾಗುತ್ತಿತ್ತು. ಇದೊಂದು ದೊಡ್ಡ ಉಪದ್ರವವಾಯಿತು. ಸ್ವಾಮಿ ಪ್ರೇಮಾನಂದರು ಅಲ್ಲಿಗೆ ಕೊನೆಯ ಬಾರಿ ಹೋದಾಗ ಕೆರೆಗಳೆಲ್ಲಾ ಆ ತೇಲುವ ಗಿಡಗಳ ಬಲೆಯಿಂದ ಆವೃತವಾಗಿದ್ದುದರ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದರು. ''ನಾವೆಲ್ಲರೂ ಹೋಗಿ ಆ ಕಳೆಯನ್ನು ತೆಗೆಯಬಾರದೇಕೆ? ಬನ್ನಿ, ಹೋಗೋಣ'' ಎಂದರು. ಅವರೇ ಆ ತಣ್ಣನೆಯ ನೀರಿಗೆ ಇಳಿದು, ಆ ಗಿಡಗಳನ್ನು ಕಿತ್ತು ದಡಕ್ಕೆ ಎಸೆಯಲು ಪ್ರಾರಂಭಿಸಿದರು. ದಡಕ್ಕೆ ಎಸೆದ ಆ ಗಿಡಗಳು ಒಣಗಿ ಸಾಯುತ್ತವೆ.

ಅಂತಹ ಮಹಾತ್ಮರು ಆ ಬಗೆಯ ದೈಹಿಕ ಶ್ರಮಕ್ಕೆ ಹೇಳಿದವರಲ್ಲ; ಆದರೆ, ನಾನು ನಿಮಗೆ ತಿಳಿಸಿದಂತೆ, ಅವರು ಎಷ್ಟೇ ಕಷ್ಟವಾದರೂ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಭಾಗಶಃ ಈ ಕೆಲಸದಿಂದ ಮತ್ತು ಭಾಗಶಃ ಅಶುದ್ಧವಾದುದನ್ನು ಸೇವಿಸಿದುದರಿಂದ ಕಾಲಾ-ಅಜಾರ್ ಎಂಬ ನಿಂತ ನೀರಿನಿಂದ ಬರುವ ಭಯಂಕರ ಜ್ವರಕ್ಕೆ ತುತ್ತಾದರು. ಆ ಕಾಲದಲ್ಲಿ ಅದಕ್ಕೆ ಔಷಧಿ ಇರಲಿಲ್ಲ. ಅದಕ್ಕೆ ತುತ್ತಾದವರು ಬದುಕುತ್ತಿರಲಿಲ್ಲ. ಸ್ವಾಮಿ ಪ್ರೇಮಾನಂದರು ಕಲ್ಕತ್ತೆಯಲ್ಲಿ ದೀರ್ಘ ಕಾಲದ ಔಷಧೋಪಚಾರಗಳಿಂದ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡ ಬಳಿಕ, ವಿಶ್ರಾಂತಿಗಾಗಿ ಪರ್ವತ ಪ್ರದೇಶಕ್ಕೆ ಹೋದರು. ಆದರೆ ಆ ಸಮಯದಲ್ಲಿ ಪ್ರಪಂಚಾದ್ಯಂತ ಹರಡಿದ್ದ

ಇನ್‌ಫ್ಲುಎನ್‌ಜಾ ಪಿಡುಗಿನಿಂದ ಲಕ್ಷೋಪಲಕ್ಷ ಜನ ಸತ್ತರು. ಸ್ವಾಮಿ ಪ್ರೇಮಾನಂದರು ಪರ್ವತ ಪ್ರದೇಶದಲ್ಲಿ ಇದ್ದಾಗ ಅಂತಹ ಫ್ಲೂ ಜ್ವರಕ್ಕೆ ತುತ್ತಾದರು. ಸ್ವಾಮಿ ಶಿವಾನಂದರು ಬೇಲೂರು ಮಠದಿಂದ ಅಲ್ಲಿಗೆ ಹೋಗಿ ಅವರನ್ನು ಬಲರಾಮ ಬೋಸರ ಮನೆಗೆ ಕರೆ ತಂದರು. ಎಲ್ಲಾ ಆರೈಕೆಗಳನ್ನೂ ಅವರಿಗೆ ಮಾಡಲಾಯಿತು. ಆದರೆ, ನಾಲ್ಕು ದಿನಗಳಲ್ಲಿ ಅವರು ಕಾಲವಾದರು.

ಸ್ವಾಮಿ ಬ್ರಹ್ಮಾನಂದರು ಆಗ ಬಲರಾಮ ಬೋಸರ ಮನೆಯಲ್ಲಿ ಹತಾಶರಾಗಿ ಇದ್ದರು. ಮತ್ತೆ ಮತ್ತೆ ಪ್ರೇಮಾನಂದರ ಕೊಠಡಿಗೆ ಹೋಗುತ್ತಿದ್ದರು. ಅವರು ಒಮ್ಮೆ ಪ್ರೇಮಾನಂದರಿಗೆ ಹೇಳಿದರು, ''ತಮ್ಮಾ, ನಮ್ಮ ಗುರುಮಹಾರಾಜರು ನಿನಗೆ ನೆನಪಾಗುತ್ತಿದ್ದಾರೆಯೆ? ಪ್ರೇಮಾನಂದರು ಶಾಂತವಾದ, ಸಂತೋಷದ ಮಂದಹಾಸ ಬೀರಿದರು. ಕಾಲವಾಗಲು ಎರಡು ಮೂರು ದಿನಗಳಷ್ಟೇ ಇರುವಾಗ ತಮಗೆ ಸೇವೆ ಮಾಡುತ್ತಿದ್ದ ಸಂನ್ಯಾಸಿಯನ್ನು ಕರೆದು, ''ನೋಡು, ನಾನು ನಿನ್ನನ್ನು ಒಂದು ವಿಷಯ ಕೇಳಬೇಕೆಂದಿದ್ದೇನೆ.'' ''ಹೇಳಿ, ಸ್ವಾಮೀಜಿ.'' ''ನೀನು ಭಕ್ತರ ಸೇವೆ ಮಾಡಬಲ್ಲೆಯಾ?'' ''ಹೌದು, ಸ್ವಾಮೀಜಿ.'' ''ಅದನ್ನು ಯಾವಾಗಲೂ ಮಾಡು.'' ''ಆಗಲಿ ಸ್ವಾಮೀಜಿ, ಅದನ್ನು ಮಾಡುತ್ತೇನೆಂದು ನಿಮಗೆ ಮಾತು ಕೊಡುತ್ತೇನೆ.'' ಅದೇ ಅವರ ಕೊನೆಯ ಆಸೆ, ಕೊಟ್ಟ ಕೊನೆಯ ಆಸೆ.

ಸ್ವಲ್ಪ ಕಾಲದ ನಂತರ ಅವರು ಸ್ವಾಮಿ ಶಾರದಾನಂದರಿಗೆ ಹೇಳಿದರು, ''ನನಗೆ ಅಚ್ಚ ಹಳದಿ ವಸ್ತ್ರವನ್ನು ಉಡಲು ಮತ್ತು ಮಲ್ಲಿಗೆಯಂತೆ ಬಿಳುಪಾದ ಅನ್ನವನ್ನು ತಿನ್ನಲು ಬಹಳ ಆಸೆ ಎಂದು ನಿನಗೆ ಗೊತ್ತಿದೆ.'' ಸ್ವಾಮಿ ಶಾರದಾನಂದರಿಗೆ ಅರ್ಥವಾಯಿತು. ಅದು ಶ್ರೀರಾಧೆಯ ಸಾಂಕೇತಿಕ ವಿವರಣೆ. ಸ್ವಾಮಿ ಪ್ರೇಮಾನಂದರು ರಾಧೆಯ ಅಂಶವೆಂದು ಶ್ರೀರಾಮಕೃಷ್ಣರು ಹೇಳಿದ್ದರು. ಇನ್ನು ಹೆಚ್ಚು ಕಾಲ ಪ್ರೇಮಾನಂದರು ಬದುಕುವುದಿಲ್ಲವೆಂದು ಸ್ವಾಮಿ ಶಾರದಾನಂದರಿಗೆ ತಿಳಿಯಿತು. ೧೯೧೮, ಜುಲೈ ೩೦ರಂದು ಸ್ವಾಮಿ ಪ್ರೇಮಾನಂದರು ಕಾಲವಾದರು. ಅವರು ಭುವಿಯ ಮೇಲೆ ಐವತ್ತೇಳು ವರ್ಷಗಳ ಕಾಲ ಬದುಕಿದ್ದರು.

ಅಂದು ಮಧ್ಯಾಹ್ನ ಪ್ರೇಮಾನಂದರ ಮರಣವಾರ್ತೆಯನ್ನು ಕೇಳಿದ ಶ್ರೀಮಾತೆಯವರು ದೀರ್ಘಕಾಲ ಬಹಳವಾಗಿ ಅತ್ತರು. ''ಬಾಬುರಾಮ ನನ್ನ ಹೃದಯಕ್ಕೆ ಅಷ್ಟೊಂದು ಪ್ರೀತಿಪಾತ್ರನಾದವ! ಬೇಲೂರು ಮಠದ ಎಲ್ಲಾ ಶಕ್ತಿ, ಭಕ್ತಿ ಮತ್ತು ಬುದ್ಧಿ ನನ್ನ ಬಾಬುರಾಮನಲ್ಲಿ ಮೂರ್ತರೂಪವಾಗಿ, ಗಂಗಾ ನದಿಯ ದಡದಲ್ಲಿ ನಡೆದಾಡುತ್ತಿತ್ತು'' ಎಂದು ಹೇಳಿದರು. ಹೌದು, ಸ್ವಾಮಿ ಪ್ರೇಮಾನಂದರ ಮರಣದಲ್ಲಿ ಶ್ರೀರಾಮಕೃಷ್ಣರು ತಮ್ಮ ಪ್ರೀತಿ ಮತ್ತು ಭಕ್ತಿಯ ಅಂಶವನ್ನು ಹಿಂದಕ್ಕೆ ಸೆಳೆದುಕೊಂಡರು ಎಂದು ಶ್ರೀರಾಮಕೃಷ್ಣರ ಎಲ್ಲ ಶಿಷ್ಯರೂ ಹೇಳಿದರು.

ನಾನು ಈಗಲೂ ಅವರ ನಗುಮುಖವನ್ನು ನೋಡುತ್ತೇನೆ, ಅವರ ಧ್ವನಿಯನ್ನು ಕೇಳುತ್ತೇನೆ. ಅವರು ಶಿಷ್ಯರನ್ನು ಬಿಟ್ಟುಹೋಗದಿದ್ದರೂ, ಅವರಿಗೆ ಅನೇಕ ಮಂದಿ ಶಿಷ್ಯರಿದ್ದಾರೆ. ಅವರಲ್ಲಿ ಅಂತಹ ವಿಶೇಷವೇನೂ ಇರದಿದ್ದರೂ, ಅವರು ಇಡೀ ನಾಟಕದ ಸಾರವಾಗಿದ್ದರು. ಪ್ರೇಮದ, ಸಂತೋಷದ ದಿವ್ಯಕಾಂತಿಯನ್ನು ಹೊರಸೂಸುವ ಅಸಾಧಾರಣ ಮನಮೋಹಕ ಆಕಾರ ಅವರಿಗಿತ್ತು; ಆದರೂ ನಿಮ್ಮನ್ನು ದಿಗ್ಭ್ರಮೆಗೊಳಿಸುವ ಯಾವ ಅಂಶವೂ ಅವರಲ್ಲಿ ಇರಲಿಲ್ಲ. ನೀವು ಹೋಗಿ ಅವರನ್ನು ನಿಮ್ಮ ಸ್ವಂತದವರೆಂಬಂತೆ–ತಂದೆ, ತಾಯಿ, ಸಖ ಎಂಬಂತೆ ಆಲಂಗಿಸಬಹುದು ಎಂಬ ಭಾವ ನಿಮಗುಂಟಾಗುವುದು. ಸತ್ಯವಲ್ಲದ ಏನನ್ನೂ ಅವರು ಯಾರಿಗೂ ಹೇಳಲಿಲ್ಲ. ಅವರಿಗೇ ಮಕ್ಕಳಿಲ್ಲ, ಆದರೆ ಇತರರ ಅನೇಕ ಮಕ್ಕಳನ್ನು ಪ್ರೀತಿ ವಿಶ್ವಾಸಗಳಿಂದ ಬೆಳೆಸಿ, ಅವರನ್ನು ಮಹಾಪುರುಷರಾಗುವಂತೆ, ಶ್ರೇಷ್ಠ ಮಹಿಳೆಯರನ್ನಾಗಿ ಮಾಡುವಂತೆ ಅವರು ಇದ್ದರು; ಸಂಘದಲ್ಲಿ ಅವರ ಸ್ಥಾನ ಅದು. ಅವರ ಜೀವನ, ಅವರ ಕನಸು ಇವೆಲ್ಲಾ ಈಗ ನೆನಪುಗಳಷ್ಟೆ. ಆದರೆ ಯಾರು ಅವರನ್ನು ನೋಡಿದ್ದರೋ ಅವರಿಗೆ ಅವರು ಬೋಧಿಸಿದ ಜೀವನದಲ್ಲಿ ನಡೆದು ತೋರಿಸಿದ ಆದರ್ಶಗಳು ಸತ್ಯವಾಗಿವೆ. ಸೇವೆ, ಸೇವೆ, ಸೇವೆ – ತಮಗಾಗಿ ಏನನ್ನೂ ಬಯಸದಿರುವುದು, ತಮ್ಮದಾಗಿ ಏನೂ ಇಲ್ಲದಿರುವುದು, ಎಲ್ಲರನ್ನೂ ಪ್ರೀತಿಸುವುದು – ಈ ಆದರ್ಶಗಳು ನಮ್ಮ ಜೀವನದ ಹಾಸು ಹೊಕ್ಕಾಗಿವೆ. ಸ್ವಾಮಿ ಪ್ರೇಮಾನಂದರು ರಾಮಕೃಷ್ಣ ಸಂಘವನ್ನು ಕಟ್ಟುವುದಕ್ಕೆ ಏನೇನು ಕೊಡುಗೆಯನ್ನು ನೀಡಿದರೋ, ಅದು ಈಗ ಕಾಣದಿದ್ದರೂ ಮುಂದಿನ ವರ್ಷಗಳಲ್ಲಿ ಹಲವು ಪೀಳಿಗೆಯ ಸಂನ್ಯಾಸಿಗಳಿಗೆ, ಭಕ್ತರಿಗೆ ಭಗವಂತನ ನೈಜ ಸೇವಕರಾಗುವಂತೆ ನಿರಂತರ ಸ್ಫೂರ್ತಿ ನೀಡುವುದು; ಏಕೆಂದರೆ, ಅವರು ನಿಜವಾಗಿಯೂ ಭಗವಂತನ ನೈಜ, ಮಹಾನ್ ಸೇವಕರಾಗಿದ್ದರು. *(ಮುಗಿಯಿತು)*

ತ್ಯಾಗ – ವಿವೇಕ

''ಅನ್ನ ಬೆಂದಿದೆಯೇ ಎಂದು ನೋಡಲು ಒಂದು ಅಗುಳನ್ನು ಒತ್ತಿ ನೋಡಿದರೆ ಸಾಕು. ಹೀಗೆಯೇ ಸಂಸಾರ ನಿತ್ಯವೋ ಅನಿತ್ಯವೋ ಎಂದು ತಿಳಿಯಲು ಸಂಸಾರದ ಎರಡು ಮೂರು ವಸ್ತುಗಳನ್ನು ಪರೀಕ್ಷಿಸಿ ನೋಡಿದರೆ ಸಾಕು. ಮನುಷ್ಯ ಹುಟ್ಟುತ್ತಾನೆ, ಕೆಲವು ದಿನ ಬದುಕಿರುತ್ತಾನೆ. ಅನಂತರ ಸತ್ತು ಹೋಗುತ್ತಾನೆ. ನಾಮರೂಪಗಳಿರುವ ವಸ್ತುಗಳೆಲ್ಲದರ ಅವಸ್ಥೆಯೂ ಇದೇ. ಪೃಥ್ವಿ, ಸೂರ್ಯ, ಚಂದ್ರ ಇವೆಲ್ಲ ನಾಮರೂಪಗಳಿಂದ ಕೂಡಿವೆ. ಆದ್ದರಿಂದ ಅವುಗಳೂ ಹಾಗೆಯೇ. ಹೀಗೆ ಸಂಸಾರ ಅನಿತ್ಯ, ಅಸತ್ ಎಂದು ತಿಳಿದ ಮೇಲೆ ಅದನ್ನು ಮತ್ತೆ ಪ್ರೀತಿಸಲಾಗುವುದಿಲ್ಲ. ಮನಸ್ಸು ಅದನ್ನು ತ್ಯಜಿಸಿ, ವಾಸನೆಯಿಂದ ಮುಕ್ತವಾಗುವುದು. ಆಗ ಜಗತ್ಕಾರಣನಾದ ಭಗವಂತನ ದರ್ಶನವಾಗುತ್ತದೆ.''

–ಶ್ರೀರಾಮಕೃಷ್ಣ

ಸ್ವಾಮಿ ನಿತ್ಯಸ್ಥಾನಂದ

ಭಕ್ತನ ಲಕ್ಷಣ



ಭಾಗ – ೫

ಗತವ್ಯಥಃ : ಭಕ್ತನಿಗೆ ವ್ಯಥೆಯಿಲ್ಲ. ವ್ಯಥೆಗೆ ಮುಖ್ಯವಾಗಿ ಎರಡು ಕಾರಣಗಳಿವೆ – ಅನಿಷ್ಟಪ್ರಾಪ್ತಿ ಮತ್ತು ಇಷ್ಟ ಅಪ್ರಾಪ್ತಿ. ಭಕ್ತನಿಗೆ ಅನಿಷ್ಟವಾದುದು ಯಾವುದೂ ಇಲ್ಲ, ಹಾಗೂ ಇಷ್ಟವಾದುದು ಭಗವಂತನ ಪ್ರಾಪ್ತಿಯಾಗಿದೆ. ಸಾಪೇಕ್ಷಿಕ ದೃಷ್ಟಿಯಿಂದ ಇಷ್ಟಾನಿಷ್ಟಗಳೆರಡೂ ಈ ಅನಿತ್ಯ ಪ್ರಪಂಚಕ್ಕೆ ಸಂಬಂಧಿಸಿದುವು. ನಮಗೆ ಕೆಲವೊಂದು ಮತ್ತು ಕೆಲವರು ಇಷ್ಟ, ಹಾಗೂ ಕೆಲವೊಂದು ಮತ್ತು ಕೆಲವರು ಅನಿಷ್ಟ. ಕೆಲವೊಮ್ಮೆ ನಾವಿಷ್ಟಪಟ್ಟಿದ್ದು ದೊರೆಯುತ್ತದೆ, ಕೆಲವೊಮ್ಮೆ ದೊರೆಯುವುದಿಲ್ಲ. ಇದು ಕ್ರಮವಾಗಿ ಸುಖ ಮತ್ತು ದುಃಖವನ್ನು ನೀಡುತ್ತದೆ. ಹೀಗೆಯೇ ಅನಿಷ್ಟದ ವಿಷಯದಲ್ಲಿಯೂ ಕೂಡ. ಎಲ್ಲಿಯವರೆಗೆ ಪ್ರಪಂಚವನ್ನೇ ನೆಚ್ಚಿಕೊಂಡಿರುತ್ತೇವೊ ಅಲ್ಲಿಯವರೆಗೂ ಈ ಸುಖದುಃಖಗಳ ಮಿಶ್ರ ಅನುಭವ ತಪ್ಪಿದ್ದಲ್ಲ. ಆದರೆ ಭಗವಂತನನ್ನೇ ನೆಚ್ಚಿಕೊಂಡಿರುವವರಿಗೆ ಸುಖದುಃಖಗಳಿದ್ದರೂ ವ್ಯಥೆ ಇರುವುದಿಲ್ಲ.

ಇತ್ತೀಚೆಗೆ ನಾವು ಹೊಸಬಗೆಯ ವ್ಯಥೆಗಳ ಬಗ್ಗೆ ಬಹಳಷ್ಟು ಕೇಳುತ್ತೇವೆ. ಒತ್ತಡ, ಬಿಗಿತ, ದುಗುಡತೆ (stress, tension, depression etc.) ಮುಂತಾದ ಸಮಸ್ಯೆಗಳು ಇತ್ತೀಚೆಗೆ ಹೆಚ್ಚು ಪ್ರಚಲಿತವಾಗಿರುವಂತೆ ಕಂಡುಬರುತ್ತದೆ – ಬದಲಾದ ಸಾಮಾಜಿಕ ಪರಿಸ್ಥಿತಿಯಿಂದಾಗಿಯೂ, ಕುಟುಂಬದ ವಲಯದಲ್ಲಿ ದೊರೆಯುತ್ತಿದ್ದ ನಿಕಟ ಮಾನವೀಯ ಸಂಬಂಧಗಳ ಕೊರತೆಯಿಂದಾಗಿಯೂ, ಅತ್ಯಂತ ಸಂಕೀರ್ಣ ಸಾಮಾಜಿಕ ಪರಿಸ್ಥಿತಿಯಿಂದಾಗಿಯೂ, ಉನ್ನತ ಆದರ್ಶಗಳ ಕೊರತೆಯಿಂದಾಗಿ ಜೀವನವೇ ಅರ್ಥಹೀನವೆನಿಸುವ ಸನ್ನಿವೇಶದಿಂದಾಗಿಯೂ, ಎಲ್ಲ ಕ್ಷೇತ್ರಗಳಲ್ಲಿಯೂ ಸ್ಪರ್ಧಾತ್ಮಕ ಮನೋಭಾವ ಹೆಚ್ಚುತ್ತಿರುವುದರಿಂದಾಗಿಯೂ (ಇನ್ನೂ ಅನೇಕ ಕಾರಣಗಳನ್ನು ಸೇರಿಸಬಹುದು) ಈ ಬಗೆಯ ರೋಗಗಳು ತುಂಬ ಹೆಚ್ಚುತ್ತಿರುವುದಾಗಿ ಕಂಡು ಬರುತ್ತಿದೆ. ಯಾರು ಭಗವದಾದರ್ಶವನ್ನು ಇಟ್ಟುಕೊಂಡು ಅದಕ್ಕನುಗುಣವಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾರೋ ಅವರು ಇಂತಹ ಸಮಸ್ಯೆಗಳಿಗೆ ಒಳಗಾಗುವುದಿಲ್ಲ. ಒಟ್ಟು ಸಮಾಜದಲ್ಲಿ ಸಾಧ್ಯವಾದಷ್ಟು ನೈತಿಕ ಮತ್ತು ಆಧ್ಯಾತ್ಮಿಕ ವಾತಾವರಣವನ್ನು ಕಲ್ಪಿಸುವ ಸಾಮೂಹಿಕ ಪ್ರಯತ್ನವೂ ನಡೆಯಬೇಕು.

ಇತ್ತೀಚಿನ ದಿನಗಳಲ್ಲಿ ತುಂಬ ವ್ಯಾಪಕವಾಗಿ ಕಂಡುಬರುವ ವ್ಯಥೆ ಯಾವುದೆಂದರೆ ದುಗುಡತೆ (depression). ಇದು ಎಲ್ಲ ವಿಷಯದಲ್ಲಿಯೂ ನಿರುತ್ಸಾಹವನ್ನು ಉಂಟುಮಾಡುತ್ತದೆ, ಜೀವನವೇ ಬೇಸರವೆನಿಸುತ್ತದೆ. ಇದು ತೀವ್ರವಾದರೆ ವ್ಯಕ್ತಿಯು ಆತ್ಮಹತ್ಯೆಯ ಪ್ರಯತ್ನ ಮಾಡುತ್ತಾನೆ. ಜೀವನ ಅರ್ಥಹೀನವಾದಾಗ ಹೀಗಾಗುತ್ತದೆ ಎಂದು ಮನಃಶ್ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ವಸ್ತುವು ಅರ್ಥಪೂರ್ಣವಾಗುವುದು ಅದು ಪೂರ್ಣದೊಡನೆ ಕೂಡಿಕೊಂಡಿದ್ದಾಗ. ನಮ್ಮ ವ್ಯಕ್ತಿತ್ವವನ್ನು ಒಂದು ಪೂರ್ಣ ವ್ಯವಸ್ಥೆಯೆಂದು ಸ್ವೀಕರಿಸಿದರೆ ಅದರ ಅಂಗೋಪಾಂಗಗಳು ಅರ್ಥಪೂರ್ಣವಾಗುವುದು ಆ ವ್ಯವಸ್ಥೆಯೊಡನೆ ಸೇರಿಕೊಂಡಿದ್ದಾಗಲೇ; ಅದಕ್ಕಿಂತ ಪ್ರತ್ಯೇಕವಾಗಿ ಅವುಗಳಿಗೆ ಯಾವ ಅರ್ಥವೂ ಇಲ್ಲ. ಹಾಗೆಯೇ ಮನುಷ್ಯಜೀವನವೂ ಅರ್ಥಪೂರ್ಣವಾಗುವುದು ಒಂದು ವ್ಯವಸ್ಥೆಯೊಡನೆ– ಕುಟುಂಬ, ಸಮಾಜ, ಮಾನವಕೋಟಿ ಮುಂತಾದವು – ಸಂಬಂಧಿಸಿದ್ದಾಗ. ವ್ಯಕ್ತಿಯು ಯಾವುದರೊಡನೆಯೂ ತನ್ನನ್ನು ಸಂಬಂಧಿಸಿಕೊಳ್ಳಲು ಅಸಮರ್ಥನಾದಾಗ ಜೀವನದ ಅರ್ಥಹೀನತೆಯನ್ನು ಅನುಭವಿಸುತ್ತಾನೆ. ಜೀವನವೇ ಅರ್ಥಹೀನವಾದಾಗ ಅದಕ್ಕೆ ಸಂಬಂಧಿಸಿದ ಎಲ್ಲವೂ – ವೃತ್ತಿ, ವಿವಿಧ ಅನುಭವಗಳು ಇತ್ಯಾದಿ – ಅರ್ಥಹೀನವೆನಿಸುತ್ತದೆ. ಆದರೆ ಈ ಜೀವನದಲ್ಲಿ ಯಾವ ಸಂಬಂಧವೂ ಶಾಶ್ವತವಲ್ಲ, ಯಥಾರ್ಥವಾದುದಲ್ಲ, ಆದ್ದರಿಂದ ನೆಚ್ಚಿಕೊಳ್ಳಬಹುದಾದುದಲ್ಲ. ಭಗವತ್ಸಂಬಂಧವೊಂದೇ ಶಾಶ್ವತವಾದುದು, ಅದೊಂದೇ ಯಥಾರ್ಥ ಸಂಬಂಧ. ಉಳಿದ ಸಂಬಂಧಗಳೆಲ್ಲ ಭೌತಿಕ ಮತ್ತು ಮಾನಸಿಕವಾದುವು. ಭೌತಿಕ ಮತ್ತು ಮಾನಸಿಕವಾದವುಗಳೆಲ್ಲವೂ ಪರಿವರ್ತನೆಗೆ ಒಳಪಡುವುದಾದ್ದರಿಂದ ಹಾಗೂ ಅನೇಕ ನಿಮಿತ್ತ ಗಳನ್ನು ಅವಲಂಬಿಸಿರುವುದರಿಂದ ಈ ಸಂಬಂಧಗಳಾವುದನ್ನೂ ನೆಚ್ಚಿಕೊಳ್ಳುವಂತಿಲ್ಲ. ಭಗವತ್ಸಂಬಂಧವು ಆಧ್ಯಾತ್ಮಿಕವಾದುದು – ಇದು ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧ. ನಾವು ಕೇವಲ ಭೌತಿಕ ಮತ್ತು ಮಾನಸಿಕ ವಲಯದಲ್ಲಿ ಮಾತ್ರ ಉಳಿಯದೆ, ನಮ್ಮನ್ನು ಆಧ್ಯಾತ್ಮಿಕವಾಗಿ ಗುರುತಿಸಿಕೊಂಡಾಗ ಈ ಸಂಬಂಧವು ಏರ್ಪಡುತ್ತದೆ. ನಮ್ಮಲ್ಲಿ ಆಧ್ಯಾತ್ಮಿಕ ಅಂಶವಾದ ದಿವ್ಯತೆಯು ಹೆಚ್ಚು ಹೆಚ್ಚು ಅಭಿವ್ಯಕ್ತವಾದಷ್ಟೂ ಈ ಸಂಬಂಧವು ಹೆಚ್ಚು ದೃಢವಾಗುತ್ತದೆ – ಇದು ಕುಂಡದಲ್ಲಿ ಇರುವ ಗಿಡವನ್ನು ನೆಲದಲ್ಲಿ ನೆಟ್ಟಂತೆ. ಆ ಗಿಡವು ವಿಶಾಲ ವೃಕ್ಷವಾಗಿ ಬೆಳೆದು ಅನೇಕರಿಗೆ ಆಶ್ರಯವನ್ನು ನೀಡುತ್ತದೆ. ಹಾಗೆಯೇ ನಾವು ದೇಹಾತ್ಮಭಾವದ ಕುಂಡದಿಂದ ಹೊರಬಂದು ವಿಶ್ವಾತ್ಮಭಾವದಲ್ಲಿ ನೆಲೆಯೂರಬೇಕು. ಆಗ ದುಗು ಡತೆಯು ದೂರವಾಗುತ್ತದೆ.

ಮಾರ್ಟಿನ್ ಇ.ಪಿ. ಸೆಲಿಗ್ಮನ್ ಎಂಬ ಮನಶ್ಶಾಸ್ತ್ರಜ್ಞರ ಪ್ರಕಾರ ನಿರಾಶಾವಾದ ಮತ್ತು ಅಸಹಾಯಕತೆ ದುಗುಡತೆಗೆ ಕಾರಣ. ಸಮಾಜದ ಬಗ್ಗೆ, ವಿವಿಧ ಪರಿಸ್ಥಿತಿಯ ಬಗ್ಗೆ ಮತ್ತು ತನ್ನ ಶಕ್ತಿಯ

ಬಗ್ಗೆಯೂ ನಿರಾಶಾ ಮನೋಭಾವ ಉಂಟಾದರೆ, 'ಏನಾದರೂ ಹೀಗೆಯೇ ಇದನ್ನು ಸರಿಪಡಿಸಲಾಗುವುದೇ ಇಲ್ಲ' ಎಂಬ ನಿಸ್ಸಹಾಯಕ ಸ್ಥಿತಿ ಉಂಟಾದರೆ ಅದು ದುಗುಡತೆಗೆ ಕಾರಣವಾಗುತ್ತದೆ. ಅನೇಕ ಹತಾಶೆಗಳುಂಟಾದರೆ, ಎಲ್ಲ ಕಡೆಗಳಿಂದಲೂ ಸೋಲುಂಟಾದರೆ ಸ್ವಾಭಾವಿಕವಾಗಿಯೇ ವ್ಯಕ್ತಿಯು ದುಗುಡತೆಗೆ ಒಳಗಾಗುತ್ತಾನೆ. ಇಂತಹ ಪರಿಸ್ಥಿತಿ ಉಂಟಾಗದಿರಬೇಕಾದರೆ ನಾವು ಎರಡು ಗುಣಗಳನ್ನು ಬೆಳಸಿಕೊಳ್ಳಬೇಕು : ನಿರ್ಲಿಪ್ತತೆ ಮತ್ತು ಶರಣಾಗತಿ. ಒಂದು ವಿಷಯ ವಿರಾಗದಿಂದಲೂ ಮತ್ತೊಂದು ಭಗವದನುರಾಗದಿಂದಲೂ ಉಂಟಾಗುತ್ತದೆ.

ಸರ್ವಾರಂಭಪರಿತ್ಯಾಗೀ : ಭಕ್ತನು ತಾನಾಗಿಯೇ ತನಗಾಗಿ ಏನನ್ನೂ ಪ್ರಾರಂಭಿಸುವುದಿಲ್ಲ. ಈ ಜೀವನದಲ್ಲಿ ತಾನು ಏನನ್ನಾದರೂ ಸಾಧಿಸಬೇಕು, ತನ್ನ ಹೆಜ್ಜೆಯ ಗುರುತನ್ನು ಬಿಟ್ಟು ಹೋಗಬೇಕು – ಈ ರೀತಿಯ ಮಹತ್ವಾಕಾಂಕ್ಷೆಗಳು ಅವನಲ್ಲಿರುವುದಿಲ್ಲ. ಏಕೆಂದರೆ ಅವನು ತನ್ನ ಜೀವನವನ್ನು ಭಗವಂತನಿಗೆ ಅರ್ಪಿಸಿಕೊಂಡಿರುತ್ತಾನೆ, ಅವನಿಗೆ ತನ್ನತನವಿರುವುದಿಲ್ಲ, ಕರ್ತೃತ್ವಬುದ್ಧಿ ಇರುವುದಿಲ್ಲ. ಎಲ್ಲವನ್ನೂ ಭಗವದಿಚ್ಛೆಗೇ ಬಿಟ್ಟಿರುತ್ತಾನೆ. ಭಗವಂತನು ಅವನನ್ನು ಯಾವುದರಲ್ಲಿ ಬೇಕಾದರೂ ತೊಡಗಿಸಬಹುದು, ಯಾವುದೇ ರೀತಿಯ ಪ್ರೇರಣೆಯನ್ನು ಬೇಕಾದರೂ ನೀಡಬಹುದು. ಅವನನ್ನು ಲೋಕಸಂಗ್ರಹದಲ್ಲಿ ಬೇಕಾದರೂ ತೊಡಗಿಸಬಹುದು, ಅಥವಾ ಲೋಕದಿಂದ ಮರೆಯಾಗಿಯೂ ಇರಿಸಬಹುದು. ಶ್ರೀರಾಮಕೃಷ್ಣರು ಹೇಳುವಂತೆ ಅವನು ಬೆಕ್ಕಿನ ಮರಿಯಂತಿರುತ್ತಾನೆ. ತಾಯಿಬೆಕ್ಕು ತನ್ನ ಮರಿಯನ್ನು ಕೆಲವೊಮ್ಮೆ ಹಾಸಿಗೆಯ ಮೇಲೆ, ಕೆಲವೊಮ್ಮೆ ಒಲೆಯ ಪಕ್ಕದಲ್ಲಿ, ಇನ್ನೆಲ್ಲಾದರೂ ಇರಿಸಬಹುದು. ಎಲ್ಲಿರಿಸಿದರೂ ಅದು ತನ್ನ ಪಾಡಿಗೆ ತಾನಿರುತ್ತದೆ.

ಭಕ್ತನು ಯಾವ ಸಂಸ್ಥೆಯನ್ನೂ ಆರಂಭಿಸುವುದಿಲ್ಲ, ಅವನೇ ಒಂದು ಸಂಸ್ಥೆಯಾಗಿರುತ್ತಾನೆ. ಅವನ ಹೆಸರಿನಲ್ಲಿ ಇತರರು ಸಂಸ್ಥೆಗಳನ್ನು ಪ್ರಾರಂಭಿಸುತ್ತಾರೆ. ಅವನೇ ಯಾವ ಕೆಲಸವನ್ನೂ ಮಾಡುವುದಿಲ್ಲ. ಆದರೆ ಅವನ ಹೆಸರಿನಲ್ಲಿ ಅನೇಕ ಕೆಲಸಗಳು ನಡೆಯುತ್ತವೆ. ಅವನು ಪ್ರಾರ್ಥನೆ ಮಾಡಬೇಕಾಗಿಲ್ಲ, ಅವನ ಉಸಿರಾಟವೇ ಪ್ರಾರ್ಥನೆಯಾಗುತ್ತದೆ. ಅವನು ಉಪದೇಶಮಾಡಬೇಕಾಗಿಲ್ಲ, ಅವನ ಮೌನವೇ ಉಪದೇಶವಾಗುತ್ತದೆ. ಅವನು ಅನೇಕ ಕೆಲಸಗಳಲ್ಲಿ ತೊಡಗಿದ್ದರೂ ಅವಾವುವೂ ಅವನದಾಗಿರುವುದಿಲ್ಲ. ಎಲ್ಲ ಕೆಲಸಗಳೂ ನಡೆಯುವುದು ದೇಹೇಂದ್ರಿಯಮನಸ್ಸುಗಳ ಮೂಲಕ. ಭಕ್ತನಿಗೆ ಅವುಗಳೊಡನೆ ತಾದಾತ್ಮ್ಯವಿಲ್ಲದೆ ಇರುವುದರಿಂದ ಅವನಿಗೆ ಯಾವ ಕೆಲಸವೂ ಇಲ್ಲ, ಆದ್ದರಿಂದ ಯಾವ ಆರಂಭವೂ ಇಲ್ಲ.

ಸಾಮಾನ್ಯ ವ್ಯಕ್ತಿಗಳ ಜೀವನವು ಅನೇಕ ಆರಂಭಗಳಿಂದ ಕೂಡಿರುತ್ತದೆ. ಹುಟ್ಟುವುದರಿಂದ ಆರಂಭವಾಗುತ್ತದೆ. ಅನಂತರ ತೆವಳುವ ಆರಂಭ, ಮುಂದೆ ನಡೆಯುವ ಆರಂಭ. ಮತ್ತೆ ಉಣ್ಣುವುದು, ಮಾತನಾಡುವುದು ಆರಂಭವಾಗುತ್ತದೆ. ಕೆಲವು ವರ್ಷಗಳ ನಂತರ ವಿದ್ಯಾರಂಭವಾಗುತ್ತದೆ. ಕೌಮಾರಾವಸ್ಥೆಯನ್ನು ಮುಟ್ಟುವ ಹೊತ್ತಿಗೆ ಭೌತಿಕ ಪ್ರವೃತ್ತಿಗಳೆಲ್ಲವೂ ಆರಂಭವಾಗುತ್ತವೆ. ಅನಂತರ ಕೆಲಸದ ಆರಂಭ, ಮುಂದೆ ಸಂಸಾರದ ಆರಂಭ, ಅದರೊಂದಿಗೆ ಸುಖದುಃಖಗಳ ಆರಂಭ. ಹೀಗೇ ಮುಂದುವರಿದು ಮುದಿತನ ಪ್ರಾರಂಭವಾಗುತ್ತದೆ, ಹಲ್ಲು ಉದುರಲು ಪ್ರಾರಂಭವಾಗುತ್ತದೆ (ಮೊದಲೇ ಯಾರೂ ಉದುರಿಸದಿದ್ದರೆ!). ದೇಹದ ವಿವಿಧ ಅಂಗಾಂಗಗಳೆಲ್ಲ ಮುಷ್ಕರ ಹೂಡಲು ಪ್ರಾರಂಭಿಸುತ್ತವೆ. ಅನಂತರ ಸಾವಿನೊಂದಿಗೆ ಮುಂದಿನ ಜನ್ಮದ ಪ್ರಾರಂಭ. ಭಕ್ತನಲ್ಲಿ ಈ ಎಲ್ಲ ಆರಂಭಗಳೂ ಕೊನೆಗೊಂಡಿರುತ್ತವೆ, ಅವನು ಆರಂಭಶೂನ್ಯ, ಆರಂಭಶೂರನಲ್ಲ. ಇಂಥವನ ಸ್ಥಿತಿಯನ್ನು ಶಂಕರಾಚಾರ್ಯರು ಈ ರೀತಿ ವರ್ಣಿಸುತ್ತಾರೆ:

ಅಹಿನಿರ್ಲ್ವಯನೀಂ ವಾಯಂ ಮುಕ್ತ್ವಾ ದೇಹಂ ತು ತಿಷ್ಠತಿ ।
ಇತಸ್ತತಶ್ಚಾಲ್ಯಮಾನೋ ಯತ್ಕಿಂಚಿತ್ ಪ್ರಾಣವಾಯುನಾ ॥

(ವಿವೇಕಚೂಡಾಮಣಿ, ೫೪೯)

'ನಿಜವಾಗಿಯೂ ಅವನು ಪೊರೆ ಕಳಚಿದ ಹಾವಿನಂತೆ ದೇಹಮುಕ್ತನಾಗಿರುತ್ತಾನೆ. ಪೊರೆಯು ಗಾಳಿಯಿಂದ ಅತ್ತಿತ್ತ ಚಲಿಸುವಂತೆ, ಅವನ ದೇಹವೂ ಪ್ರಾಣವಾಯುವಿನಿಂದ ಕ್ರಿಯಾಶೀಲವಾಗಿರುತ್ತದೆ.'

ಶುಭಾಶುಭಪರಿತ್ಯಾಗೀ : ಭಕ್ತನು ಶುಭ ಮತ್ತು ಅಶುಭಗಳನ್ನು ತ್ಯಾಗ ಮಾಡಿರುತ್ತಾನೆ, ಅಂದರೆ ಶುಭಾಶುಭ ಭೇದವನ್ನು ತ್ಯಾಗ ಮಾಡಿರುತ್ತಾನೆ. ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ಕೆಲವು ಶುಭ ಮತ್ತೆ ಕೆಲವು ಅಶುಭ. ಪಾರಮಾರ್ಥಿಕ ದೃಷ್ಟಿಯಿಂದ ಎಲ್ಲವೂ ಭಗವನ್ಮಯವಾದುದರಿಂದ ಎಲ್ಲವೂ ಶುಭವೇ. ನಾವು ಪೂರ್ಣ ದೃಷ್ಟಿಯನ್ನು ಬೆಳಸಿಕೊಳ್ಳಬೇಕು. ಆಗ ಎಲ್ಲವೂ ಅರ್ಥಪೂರ್ಣವಾಗುವುದರಿಂದ ಶುಭಾಶುಭ ಭೇದ ಕಂಡುಬರುವುದಿಲ್ಲ. ನಾವೊಂದು ವರ್ಣಚಿತ್ರವನ್ನು ನೋಡಿದಾಗ ಅದರ ಮುಖ್ಯಾರ್ಥವನ್ನು ಗ್ರಹಿಸಲು ಅಸಮರ್ಥರಾದರೆ, ಅದರ ಅನೇಕ ಗೆರೆಗಳು, ಕೆಲವು ಬಣ್ಣದ ಭಾಗಗಳು ಅನವಶ್ಯಕ ಎನಿಸಬಹುದು. ಆದರೆ ಚಿತ್ರದ ಪೂರ್ಣ ಅರ್ಥ ನಮಗೆ ತಿಳಿದಾಗ ಎಲ್ಲವೂ ಅರ್ಥಪೂರ್ಣವಾಗುತ್ತದೆ. ಟಿಚ್ ನ್ಹಾಟ್ ಹನ್ ಎಂಬ ಬೌದ್ಧ ಸಂನ್ಯಾಸಿಗಳೊಬ್ಬರು ಹೇಳುತ್ತಾರೆ: ನಾವು ಅಸಹ್ಯವೆಂದು ಪರಿಗಣಿಸುವ ಗೊಬ್ಬರವು ನಾಳೆ ಸುಂದರ ಕುಸುಮವಾಗುತ್ತದೆ, ಹಾಗೆಯೇ ಆ ಕುಸುಮ ಮುಂದೆ ಗೊಬ್ಬರವಾಗುತ್ತದೆ. ಆಂಗ್ಲಭಾಷೆಯ ಒಂದು ಹೇಳಿಕೆ : ಶುದ್ಧ ಸಾಕ್ಷಾತ್ಕಾರಕ್ಕೆ ನಾಂದಿಯಾಗದಂತಹ ಕೊಳಕು ವಿಷಯ ಯಾವುದೂ ಇಲ್ಲ.

ಧ್ಯಾನದ ವೇಳೆ ಅನೇಕ ಶುಭಾಶುಭ ಆಲೋಚನೆಗಳು ಮನಸ್ಸಿನಲ್ಲೇಳುತ್ತವೆ. ಕೆಟ್ಟ ಆಲೋಚನೆಗಳು ಬಂದಾಗ ಮನಸ್ಸಿಗೆ ತುಂಬ ಅಸಮಾಧಾನವಾಗುತ್ತದೆ, ಅತಿಯಾಗಿ ನೊಂದುಕೊಳ್ಳುತ್ತೇವೆ. ಇಲ್ಲಿಯೂ ನಾವು ಉದಾಸೀನ ಭಾವವನ್ನು ತಾಳಬೇಕು. ಒಳಿತು ಕೆಡುಕುಗಳೆಂದು ನಿರ್ಣಯ ಮಾಡದೆ, ಅವು ಕೇವಲ ಆಲೋಚನೆಗಳೆಂದಷ್ಟೇ ಗುರುತಿಸಬೇಕು. ಅನೇಕ ಚಿತ್ತವೃತ್ತಿಗಳಿರುತ್ತವೆ, ಅವುಗಳ

ವಿಷಯ ವೈವಿಧ್ಯಮಯವಾಗಿರುತ್ತವೆ – ಒಳಿತು ಕೆಡುಕುಗಳೆರಡೂ ಇರುತ್ತವೆ. ನಾವು ಪರದೆಯ ಮೇಲೆ ವಿವಿಧ ದೃಶ್ಯಗಳನ್ನು ನೋಡುವಂತೆ ಅವುಗಳನ್ನು ಸಾಕ್ಷೀಭಾವದಿಂದ ನೋಡಬೇಕು. ಆಗ ನಮ್ಮ ಮೇಲೆ ಅವುಗಳ ಪರಿಣಾಮ ಕಡಿಮೆಯಾಗುತ್ತದೆ. ನಾವು ಕೆಟ್ಟ ಆಲೋಚನೆಗಳನ್ನು ದ್ವೇಷಿಸಿದರೂ ಅವುಗಳಿಗೆ ಪ್ರಾಮುಖ್ಯವನ್ನು ನೀಡಿದಂತಾಗುತ್ತದೆ. ಮನೆಗೆ ಬಂದ ಅತಿಥಿಗಳಿಗೆ ಪ್ರಾಮುಖ್ಯವನ್ನು ನೀಡಿದರೆ ಅವರು ಮನೆಯಲ್ಲಿಯೇ ಉಳಿದುಕೊಂಡುಬಿಡುತ್ತಾರೆ. ಗುಣದೋಷಗಳಾವುವು ಎಂಬುದನ್ನು ಶ್ರೀಕೃಷ್ಣನು ಉದ್ಧವಗೀತೆಯಲ್ಲಿ ಹೇಳಿದ್ದಾನೆ :

ಗುಣದೋಷದೃಶಿರ್ದೋಷಃ ಗುಣಸ್ತೂಭಯವರ್ಜಿತಃ ।

'ಗುಣದೋಷಗಳನ್ನು ನೋಡುವುದೇ ದೋಷ ಮತ್ತು ಹಾಗೆ ಮಾಡದೆ ಎಲ್ಲವನ್ನೂ ಸಮಾನವಾಗಿ ನೋಡುವುದೇ ಗುಣ.'

ಭಕ್ತನು ಎಲ್ಲ ವಿಷಯದಲ್ಲಿಯೂ ಸಮನಾಗಿರುತ್ತಾನೆ: ಅವನು ಶತ್ರುಮಿತ್ರರಿಬ್ಬರನ್ನೂ ಸಮಾನವಾಗಿ ಕಾಣುತ್ತಾನೆ. ನಿಜವಾಗಿಯೂ ಅವನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ. ಗಾಂಧೀಜಿಯವರನ್ನು ಒಬ್ಬರು ಕೇಳುತ್ತಾರೆ: ''ಕ್ರಿಸ್ತನು ಹೇಳುತ್ತಾನೆ ಶತ್ರುಗಳನ್ನೂ ತನ್ನಂತೆಯೇ ಪ್ರೀತಿಸಬೇಕೆಂದು. ನಿಮ್ಮ ಅಭಿಪ್ರಾಯವೇನು?'' ಗಾಂಧೀಜಿ ಮುಗುಳ್ನಕ್ಕು ಹೇಳಿದರು: ''ನಾನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ.'' ಶತ್ರುತ್ವ ಅನೇಕ ರೂಪಗಳಲ್ಲಿ ಇರುತ್ತದೆ. ಅದು ವ್ಯಕ್ತಿಗತವಾಗಿರಬಹುದು – ನಮಗಾಗದ ಕೆಲವು ವ್ಯಕ್ತಿಗಳಿರಬಹುದು. ಕೆಲವು ಉದ್ಯೋಗ ನಮಗಾಗದೇ ಇರಬಹುದು – ಇದು ಔದ್ಯೋಗಿಕ ಶತ್ರುತ್ವ. ಜಾತೀಯ ಶತ್ರುತ್ವವೂ ಇರುತ್ತದೆ – ಕೆಲವು ಜಾತಿಯವರನ್ನು ನಾವು ದ್ವೇಷಿಸಬಹುದು. ಹೀಗೆ ಜನಾಂಗ, ರಾಷ್ಟ್ರ, ರಾಜಕೀಯ, ಭಾಷೆ, ಸಂಸ್ಕೃತಿ, ವೈಚಾರಿಕತೆ – ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಶತ್ರುತ್ವವಿರುತ್ತದೆ. ಆದರೆ ಭಕ್ತನಲ್ಲಿ ಯಾವುದೇ ಬಗೆಯ ಶತ್ರುತ್ವ ಇರಲು ಸಾಧ್ಯವಿಲ್ಲ. ಶತ್ರುತ್ವ ಮತ್ತು ಭಗವದ್ಭಕ್ತಿ – ಕತ್ತಲೆ ಬೆಳಕುಗಳಂತೆ – ಒಟ್ಟಿಗೆ ಇರಲಾರವು.

ಭಕ್ತನು ಮಾನಾಪಮಾನಗಳನ್ನು ಸಮನಾಗಿ ಕಾಣುತ್ತಾನೆ. ಶ್ರೀಮಾತೆ ಶಾರದಾದೇವಿಯವರನ್ನು ಭಕ್ತರು ದೇವಿಯಂತೆ ಪೂಜಿಸುತ್ತಿದ್ದರು. ಹಾಗೆಯೇ ಅವರ ನಿಕಟ ಸಂಬಂಧಿಕರು ಅವರನ್ನು ಅವಮಾನಿಸುತ್ತಿದ್ದರು, ಪೀಡಿಸುತ್ತಿದ್ದರು. ಅವರು ಮಾತ್ರ ಯಾವಾಗಲೂ ಶಾಂತಮೂರ್ತಿಯಾಗಿಯೇ ಇರುತ್ತಿದ್ದರು.

ಸಾಧುಭಿಃ ಪೂಜ್ಯಮಾನೇಽಸ್ಮಿನ್ ಪೀಡ್ಯಮಾನೇಽಪಿ ದುರ್ಜನೈಃ ।
ಸಮಭಾವೋ ಭವೇದ್ಯಸ್ಯ ಸ ಜೀವನ್ಮುಕ್ತಲಕ್ಷಣಃ ॥

(ವಿವೇಕಚೂಡಾಮಣಿ, ೪೪೦)

''ಸಾಧುಗಳಿಂದ ಪೂಜಿಸಲ್ಪಟ್ಟಾಗಲೂ ದುರ್ಜನರಿಂದ ಪೀಡಿಸಲ್ಪಟ್ಟಾಗಲೂ ಯಾರು ಸಮಭಾವದಲ್ಲಿ ಇರುತ್ತಾರೋ ಅದು ಜೀವನ್ಮುಕ್ತನ ಲಕ್ಷಣ.''

ಇದೇ ರೀತಿ ಭಕ್ತನು ಶೀತ–ಉಷ್ಣ, ಸುಖ–ದುಃಖ ಮುಂತಾದ ದ್ವಂದ್ವಗಳ ವಿಷಯದಲ್ಲಿಯೂ ವಿಚಲಿತನಾಗದೆ ಸಮನಾಗಿರುತ್ತಾನೆ.

ಸಂಗವರ್ಜಿತಃ : ಭಕ್ತನು ಯಾವ ವಿಷಯಕ್ಕೂ ಅಂಟಿಕೊಳ್ಳುವುದಿಲ್ಲ, ಯಾವ ವಿಷಯವೂ ಅವನಿಗೆ ಅಂಟಿಕೊಳ್ಳುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ ಅವನು ಕೆಸರಿನ ಮೀನಿನಂತಿರುತ್ತಾನೆ. ಆ ಮೀನಿಗೆ ಕೆಸರು ಅಂಟುವುದಿಲ್ಲ. ಆಕಾಶದಲ್ಲಿ ಹಾರುವ ಹಕ್ಕಿ ಯಾವ ಹೆಜ್ಜೆಯ ಗುರುತನ್ನೂ ಬಿಡುವುದಿಲ್ಲ. ಅದರಂತೆಯೇ ಭಕ್ತನ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ಹಾರಾಡುತ್ತಿದ್ದರೂ ಯಾವ ಸಂಸ್ಕಾರವನ್ನೂ ಉಂಟುಮಾಡುವುದಿಲ್ಲ. ಮಹಾತ್ಮರ ಮನಸ್ಸು ಕನ್ನಡಿಯಂತೆ ಎಂದು ಹೇಳುತ್ತಾರೆ. ಕನ್ನಡಿಯು ಯಾವುದನ್ನೂ ತಿರಸ್ಕರಿಸುವುದಿಲ್ಲ, ಎಲ್ಲವನ್ನೂ ಸ್ವೀಕರಿಸುತ್ತದೆ, ಆದರೆ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ. ಅವನು ಎಲ್ಲರನ್ನೂ ಪ್ರೀತಿಸುತ್ತಾನೆ, ಅದರ ಹಿಂದೆ ವ್ಯಾಮೋಹವಿರುವುದಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ಅವನು ಯಾವುದೇ ವಿಷಯದಲ್ಲಿ ತುಂಬ ಆಸಕ್ತನೂ ಆಗಬಲ್ಲ, ಅದೇ ಸಂದರ್ಭದಲ್ಲಿ ನಿರಾಸಕ್ತನೂ ಆಗಬಲ್ಲ; ಆಸಕ್ತಿ ಮತ್ತು ಅನಾಸಕ್ತಿ – ಎರಡೂ ಶಕ್ತಿಗಳು ಅವನಲ್ಲಿ ಸಮನಾಗಿರುತ್ತವೆ. ಅವನು ನಿರ್ಲಿಪ್ತ ಮನೋಭಾವದಿಂದ ಎಲ್ಲವನ್ನೂ ನೋಡುತ್ತಾನೆ, ಕೇಳುತ್ತಾನೆ, ಎಲ್ಲರೊಡನೆಯೂ ಬೆರೆಯುತ್ತಾನೆ, ಎಲ್ಲರನ್ನೂ ಪ್ರೀತಿಸುತ್ತಾನೆ.

ಮೂರು ಬಗೆಯ ಸಂಗವನ್ನು ನಾವು ಗುರುತಿಸಬಹುದು. ಮೊದಲನೆಯದಾಗಿ ವಿಷಯಸಂಗ. ಇಂದ್ರಿಯ ವಿಷಯ, ಹಣ, ಕೀರ್ತಿ, ಸ್ಥಾನ, ಮಾನ ಮುಂತಾದ ವಿಷಯಗಳಲ್ಲಿ ತೀವ್ರ ಆಸಕ್ತಿಯನ್ನು ವಿಷಯಸಂಗ ಎಂದು ಕರೆಯಬಹುದು. ಎರಡನೆಯದಾಗಿ ಅಭಿಪ್ರಾಯಸಂಗ ಅಥವಾ ಮತಸಂಗ. ಅನೇಕರಲ್ಲಿ ವಿಷಯಸಂಗ ಇಲ್ಲದಿದ್ದರೂ ತಮ್ಮ ಅಭಿಪ್ರಾಯಗಳಿಗೆ ತುಂಬ ಅಂಟಿಕೊಂಡಿರುತ್ತಾರೆ. ತಮ್ಮ ಅಭಿಪ್ರಾಯವೇ ಸರಿ, ತಮ್ಮ ನಿರ್ಣಯವೇ ಸರಿ ಎಂದು ಆಗ್ರಹಪೂರ್ವಕವಾಗಿ ಅವುಗಳಿಗೆ ಅಂಟಿಕೊಂಡಿರುತ್ತಾರೆ, ಏನೇ ಆದರೂ ಬಿಟ್ಟುಕೊಡುವುದಿಲ್ಲ. ಧಾರ್ಮಿಕ ಮತಾಭಿಮಾನವೂ ಇದೇ ವರ್ಗಕ್ಕೆ ಸೇರುತ್ತದೆ. ಮೂರನೆಯದು ಸಾಧನೆಯ ಸಂಗ. ಪ್ರಾರಂಭದಲ್ಲಿ ಪೂಜೆ, ಸ್ತೋತ್ರ, ನಾಮಜಪ, ಸಂಕೀರ್ತನೆ ಮುಂತಾದ ಬಾಹ್ಯ ಕ್ರಿಯೆಗಳಿಗೆ ಸಂಬಂಧಿಸಿದ ಸಾಧನೆಗಳೊಂದಿಗೆ ನಾವು ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸುತ್ತೇವೆ. ಇವು ಧ್ಯಾನ, ನಿರಂತರ ಭಗವತ್ ಚಿಂತನೆ, ಭಗವದ್ ಭಾವದಲ್ಲಿ ತಲ್ಲೀನತೆ ಮುಂತಾದ ಸಾಧನೆಯ ಉನ್ನತ ಸ್ತರಕ್ಕೆ ಹಾದಿ ಮಾಡಿಕೊಡುತ್ತವೆ. ಮನಸ್ಸು ಉನ್ನತ ಸ್ಥಿತಿಯನ್ನು ಮುಟ್ಟಿದಾಗಲೂ ಈ ಬಾಹ್ಯ ಸಾಧನೆಗಳಿಗೆ ಅಂಟಿಕೊಂಡಿದ್ದರೆ ಉನ್ನತ ಸ್ತರಕ್ಕೆ ಏರಲಾಗುವುದಿಲ್ಲ. ಅನೇಕರು ಸಾಧನೆಯ ಕೆಳಗಿನ ಹಂತದಲ್ಲಿಯೇ ಸಿಕ್ಕಿಹಾಕಿಕೊಂಡುಬಿಡುತ್ತಾರೆ, ಅನೇಕ ವರ್ಷಗಳ ಅಭ್ಯಾಸದಿಂದ ಅವುಗಳನ್ನು ಬಿಡಲು ಮನಸ್ಸಾಗುವುದಿಲ್ಲ. ಶ್ರೀರಾಮಕೃಷ್ಣರು ಇನ್ನೂ ಮುಂದೆಹೋಗು ಎಂಬ ಕತೆಯನ್ನು ಹೇಳುತ್ತಿದ್ದರು. ಒಬ್ಬ ಕಟ್ಟಿಗೆ ಮಾರುವವನು ಪ್ರತಿ

ದಿನ ಕಾಡಿಗೆ ಹೋಗಿ ಕಟ್ಟಿಗೆ ಸಂಗ್ರಹಿಸುತ್ತಿದ್ದನು. ಒಂದು ದಿನ ಒಬ್ಬ ಬ್ರಹ್ಮಚಾರಿ ಇವನನ್ನು ನೋಡಿ, ''ಇನ್ನೂ ಮುಂದೆ ಹೋಗು'' ಎಂದು ಆದೇಶಿಸಿದನು. ಅವನು ಮರುದಿನ ಮುಂದೆ ಹೋದಾಗ ಗಂಧದ ವನ ಸಿಕ್ಕಿತು. ಅದನ್ನು ಕತ್ತರಿಸಿ, ಮಾರಿ ಆತ ತುಂಬ ಹಣ ಸಂಪಾದಿಸಿದನು. ಇನ್ನೂ ಮುಂದೆ ಹೋಗು ಎಂಬ ಆದೇಶ ಆತ ನನ್ನು ಅಲ್ಲಿಯೇ ಉಳಿಯಲು ಬಿಡಲಿಲ್ಲ. ಅವನು ಇನ್ನೂ ಮುಂದು ವರಿದಾಗ ಬೆಳ್ಳಿಯ ಗಣಿ, ಚಿನ್ನದ ಗಣಿ, ವಜ್ರದ ಗಣಿಗಳು ಕ್ರಮ ವಾಗಿ ಸಿಕ್ಕಿದವು. ಹೀಗೆ ಅವನು ಪ್ರಪಂಚದಲ್ಲಿಯೇ ದೊಡ್ಡ ಶ್ರೀಮಂತನಾದನು. ಆದ್ದರಿಂದಲೇ ಶ್ರೀರಾಮಕೃಷ್ಣರು, ಸಮುದ್ರದ ಆಳಕ್ಕೆ ಮುಳುಗಬೇಕು, ಮುತ್ತುರತ್ನಗಳು ದೊರೆಯುತ್ತವೆ; ಕೇವಲ ನೀರಿನ ಮೇಲೆ ತೇಲುತ್ತಿದ್ದರೆ ಪ್ರಯೋಜನವಿಲ್ಲ ಎಂದು ಹೇಳು ತ್ತಿದ್ದರು. ಕೇವಲ ಸಾಧನೆಗೇ ಅಂಟಿಕೊಂಡು ಬಿಟ್ಟರೆ ಸಾಧ್ಯವು ದೊರೆಯುವುದಿಲ್ಲ.

ಮೌನೀ: ಭಕ್ತನು ಮೌನಿಯಾಗಿರುತ್ತಾನೆ. ಅವನು ಇತರರಿಗಿಂತ ಭಗ ವಂತನೊಡನೆ ಹೆಚ್ಚು ಮಾತನಾಡುತ್ತಾನೆ– ಅದು ನಿಶ್ಶಬ್ದ ಸಂಭಾಷಣೆ. ಶಂಕರಾಚಾರ್ಯರು 'ವಿವೇಕಚೂಡಾಮಣಿ'ಯಲ್ಲಿ ಹೇಳುತ್ತಾರೆ :

ಯೋಗಸ್ಯ ಪ್ರಥಮದ್ವಾರಂ ವಾಙ್‌ನಿರೋಧಃ ।

'ಯೋಗದ ಮೊದಲ ಬಾಗಿಲೇ ಮಾತಿನ ನಿಗ್ರಹ.' The True Spouse of Jesus Christ ಎಂಬ ಗ್ರಂಥದಲ್ಲಿ ಮೌನದ ಬಗ್ಗೆ ಈ ಹೇಳಿಕೆಗಳು ಬರುತ್ತವೆ:

''ಪ್ರಾರ್ಥನೆಯ ಭಾವವನ್ನು ಪಡೆಯುವುದಕ್ಕೆ ಮತ್ತು ಭಗ ವಂತನೊಡನೆ ನಿರಂತರ ಮಾತನಾಡುವುದಕ್ಕೆ ಮೌನ ಉತ್ತಮ ಸಾಧನೆ. ಮೌನದಿಂದ ಭಕ್ತಿ ಸುರಕ್ಷಿತವಾಗುತ್ತದೆ. ಮೌನದಲ್ಲಿ ಒಳ್ಳೆಯ ಆಲೋಚನೆಗಳು ಅಂತರಂಗದಿಂದ ಪುಟಿದೇಳುತ್ತವೆ... ಯಾರು ಜನರೊಡನೆ ಅತಿಯಾಗಿ ಮಾತನಾಡುತ್ತಾರೊ ಅವರು ದೇವರೊಡನೆ ಅತ್ಯಲ್ಪ ಮಾತನಾಡುತ್ತಾರೆ... ಅತಿಯಾಗಿ ಮಾತ ನಾಡುವವರು ತಮ್ಮ ದೋಷವನ್ನು ನೋಡಲಾರರು.''

ಲಿನ್ ಯುಟಾಂಗ್ ಎಂಬುವವರು ಹೇಳುತ್ತಾರೆ: ''ಮನುಷ್ಯ ನಲ್ಲಿರುವ ಶಬ್ದಗಳ ಪ್ರೀತಿಯು ಅಜ್ಞಾನದ ಮೊದಲನೆಯ ಮೆಟ್ಟಲು, ಹಾಗೂ ಅವನ ನಿರ್ವಚನ ಪ್ರೀತಿ ಎರಡನೆಯ ಮೆಟ್ಟಲು.'' ಡ್ಯೋಜಿನಸ್ ಎಂಬ ಗ್ರೀಕ್ ಜ್ಞಾನಿಯು ಹೇಳುತ್ತಾನೆ: ನಮಗೆ ಎರಡು ಕಿವಿಗಳಿವೆ ಮತ್ತು ಒಂದು ನಾಲಗೆ ಇದೆ. ಇದರ ಅರ್ಥ ನಾವು ಹೆಚ್ಚು ಕೇಳಬೇಕು ಮತ್ತು ಕಡಮೆ ಮಾತನಾಡಬೇಕು ಎಂದು. ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಯೂ ಸ್ಮರಣಯೋಗ್ಯ: ''ನಾವು ಉಚ್ಚರಿಸುವ ಪ್ರತಿಯೊಂದು ಪದವೂ ಮೂರು ಬಾಗಿಲುಗಳನ್ನು ದಾಟಿಕೊಂಡು ಬರಬೇಕು. ಮೊದಲ ನೆಯ ಬಾಗಿಲಿನಲ್ಲಿರುವ ದ್ವಾರಪಾಲಕನು 'ಇದು ಸತ್ಯವೆ?' ಎಂದು ಕೇಳಬೇಕು. ಎರಡನೆಯ ದ್ವಾರಪಾಲಕನು 'ಇದು ಆವಶ್ಯಕವೆ?' ಎಂದು ಕೇಳಬೇಕು. ಮೂರನೆಯವನು 'ಇದು ದಯಾಪೂರ್ಣವೆ?' ಎಂದು ಕೇಳಬೇಕು.''

ಆದರೆ ಕೇವಲ ಮಾತನಾಡದೆ ಇರುವುದು ಮಾತ್ರ ಮೌನವಲ್ಲ– ಮನಸ್ಸೂ ಸುಮ್ಮನಿರಬೇಕು. ಮನಸ್ಸಿನ ಮೌನಕ್ಕೆ ಮಾತಿನ ಮೌನವು ಸಹಕಾರಿಯಾಗಬೇಕು. ಅದುಬಿಟ್ಟು ಮಾತನಾಡದೆ ಕಾಗದದ ಮೂಲಕವೊ ಅಂಗವಿನ್ಯಾಸಗಳ ಮೂಲಕವೊ ಸಂಭಾಷಣೆ ನಡೆಸಿ ದರೆ ಅಂತಹ ಮೌನಕ್ಕಿಂತ ಮಾತೇ ಒಳ್ಳೆಯದು – ಇತರರಿಗಾದರೂ ಅನಾನುಕೂಲವಾಗುವುದಿಲ್ಲ. ತುಟಿ ಅಲುಗಾಡದಿರುವುದೇ ಮೌನ ವಲ್ಲ, ಮನಸ್ಸಿನ ಅಲುಗಾಟ ನಿಂತರೆ ಅದು ನಿಜವಾದ ಮೌನ. ಶ್ರೀರಮಣ ಮಹರ್ಷಿಗಳ ಹತ್ತಿರ ಬಂದು ಒಬ್ಬ ಭಕ್ತನು ಕೇಳಿದನಂತೆ, ''ಆತ್ಮನನ್ನು ಪಡೆಯುವುದಕ್ಕೆ ಏನು ಮಾಡಬೇಕು?'' ಎಂದು. ಮಹರ್ಷಿಗಳು ''ಸುಮ್ಮನಿರು'' ಎಂದು ಹೇಳಿದರಂತೆ.

ಅನಿಕೇತಃ ಭಕ್ತನು ಮನೆಯಿಲ್ಲದವನಾಗಿರುತ್ತಾನೆ. ಅಂದರೆ ಅವನು ಮನೆ ಬಿಟ್ಟಿರುತ್ತಾನೆ ಎಂದಲ್ಲ. ಅವನು 'MBBS' ಅಲ್ಲ – '**ಮ**ನೆ **ಬಿ**ಟ್ಟು **ಬೀ**ದಿ **ಸು**ತ್ತುವವ'ನಲ್ಲ. ನಿನ್ನ ಮನೆಯಲ್ಲಿ ನೀನು ಅತಿಥಿ ಯಂತಿರು, ಯಜಮಾನನಂತೆ ಅಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇಂಥವನನ್ನೇ ಅನಿಕೇತ ಎಂದು ಕರೆಯುವುದು. ಯಾವುದರಲ್ಲಿ ನಿಮ್ಮ ಮನಸ್ಸು ನೆಲೆಸಿರುತ್ತದೊ ಅದು ನಿಮ್ಮ ಮನೆ. ನಮ್ಮ ಮನ ಎಲ್ಲಿರುತ್ತದೊ ಅದೇ ಮನೆ. ವಿಷಯವಸ್ತುವಿನಲ್ಲಿ ಮನಸ್ಸು ನೆಲೆಸಿದ್ದರೆ ಅದೇ ನಮ್ಮ ಮನೆಯಾಗುತ್ತದೆ. ಅದರಿಂದ ಹೊರಬರುವುದೇ ಮನೆಯನ್ನು ಬಿಡುವುದು, ಅದರಿಂದ ಹೊರ ಬರದೆ ನಾವು ಬರಿಯ ಗೃಹತ್ಯಾಗ ಮಾಡಿದರೆ ಅನಿಕೇತನರಾಗುವು ದಿಲ್ಲ. ಮನೆ ಎಂದರೆ ಒಂದು ಆಶ್ರಯ. ಭಗವಂತನಲ್ಲಿಯೇ ಆಶ್ರಯ ಪಡೆದವನಿಗೆ ಬೇರೆ ಆಶ್ರಯ ಬೇಕಾಗುವುದಿಲ್ಲ. ಅವನು ಅನಿಕೇತನನಾಗುತ್ತಾನೆ. ಅವನು ಮನೆಯಲ್ಲಿದ್ದರೂ 'ನಾನು' 'ನನ್ನದು' ಎಂಬ ಭಾವವಿಲ್ಲದೆ ಅತಿಥಿಯಂತಿರುತ್ತಾನೆ.

'ನಾನು', 'ನನ್ನದು' ಎಂಬ ಭಾವವೇ ಒಂದು ಮನೆ, ಗೃಹ ಬಂಧನಕ್ಕಿಂತಲೂ ಇದು ಅಪಾಯಕಾರಿ. ಗೃಹಬಂಧನವಿಲ್ಲದವ ನನ್ನೂ ಈ ಮನೆಯ ಬಂಧನ ಕಾಡುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಒಬ್ಬ ಭಿಕ್ಷುಕ ಏನೂ ಇಲ್ಲದಿದ್ದರೂ ತನ್ನ ಭಿಕ್ಷಾಪಾತ್ರೆಗೇ ಅವನು ಅಂಟಿಕೊಂಡಿದ್ದು ಅದೇ ಒಂದು ದೊಡ್ಡ ಬಂಧನವಾಗ ಬಹುದು. ಅವನ ಪಾಲಿಗೆ ಅದೇ ಮನೆ. 'ನಾನು', 'ನನ್ನದು' ಎಂಬ ಭಾವ ಹೊರಟುಹೋದರೆ ಅವನು ಎಲ್ಲೇ ಇದ್ದರೂ ಅನಿಕೇತನ ನಾಗಿರುತ್ತಾನೆ. ಕುಲಾರ್ಣವ ತಂತ್ರದ ಒಂದು ಶ್ಲೋಕ ಹೀಗಿದೆ:

ದ್ವೇ ಪದೇ ಬಂಧಮೋಕ್ಷಾಯ ಮಮೇತಿ ನಿರ್ಮಮೇತಿ ಚ ।
ಮಮೇತಿ ಬಧ್ಯತೇ ಜಂತುರ್ನ ಮಮೇತಿ ವಿಮುಚ್ಯತೇ ॥

''ಬಂಧ ಮತ್ತು ಮೋಕ್ಷಗಳನ್ನು ಸೂಚಿಸುವ ಎರಡು ಪದಗಳಿವೆ. ಅವಾವುದೆಂದರೆ ಮಮ ಮತ್ತು ನಿರ್ಮಮ (ನನ್ನದು ಮತ್ತು ನನ್ನ

ದಲ್ಲ). 'ಮಮ' ಎನ್ನುವುದು ಬಂಧನಕ್ಕೂ 'ನ ಮಮ' ಎನ್ನುವುದು ಮೋಕ್ಷಕ್ಕೂ ಕಾರಣವಾಗುತ್ತವೆ.''

ಸ್ಥಿರಮತಿಃ : ಭಕ್ತನ ಮನಸ್ಸು ಸ್ಥಿರವಾಗಿರುತ್ತದೆ, ವಿಷಯವಾಸನೆಗಳಿಂದ ಚಂಚಲವಾಗಿರುವುದಿಲ್ಲ. ದೃಢವಾಗಿ ಬೇರುಬಿಟ್ಟಿರುವ ಒಂದು ಬೃಹದ್ ವೃಕ್ಷವು ಎಂತಹ ಬಿರುಗಾಳಿಗೂ ತುತ್ತಾಗುವುದಿಲ್ಲ. ಹಾಗೆಯೇ ಭಕ್ತನ ಮನಸ್ಸು ಭಗವಂತನಲ್ಲಿ ಸುಸ್ಥಿರವಾಗಿರುತ್ತದೆ, ಎಂತಹ ವಿಷಯ ಚಂಡಮಾರುತವೂ ಅದನ್ನು ಅಲುಗಾಡಿಸಲಾರದು.

ಈ ಭಕ್ತನ ಲಕ್ಷಣಗಳನ್ನೆಲ್ಲ ಹೇಳಿ ಶ್ರೀಕೃಷ್ಣನು ಈ ಕೆಳಗಿನ ಶ್ಲೋಕದೊಂದಿಗೆ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತಾನೆ:

ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥

''ಯಾವ ಭಕ್ತರು ಶ್ರದ್ಧಾವಂತರಾಗಿ ನನ್ನಲ್ಲೇ ನಿಷ್ಠೆಯುಳ್ಳವರಾಗಿ ಈ ಮೇಲೆ ಹೇಳಿದ ಧರ್ಮ್ಯಾಮೃತವನ್ನು ಅನುಸರಿಸುತ್ತಾರೆಯೋ ಅವರು ನನಗೆ ಅತ್ಯಂತ ಪ್ರಿಯರು.''

ಈ ಮೇಲಿನ ಲಕ್ಷಣಗಳನ್ನು 'ಧರ್ಮ್ಯಾಮೃತ' ಎಂದು ಶ್ರೀಕೃಷ್ಣನು ಕರೆಯುತ್ತಾನೆ. ಇದು ಧರ್ಮ್ಯವೂ ಅಮೃತವೂ ಆಗಿದೆ. ಧರ್ಮ್ಯವೆಂದರೆ ನೀತಿಬದ್ಧವಾಗಿರುವುದು, ಮತ್ತು ಅಮೃತವೆಂದರೆ ಆಧ್ಯಾತ್ಮಿಕತೆ. ನೀತಿ ಮತ್ತು ಅಧ್ಯಾತ್ಮ ಎರಡೂ ಒಂದಾಗಿರಬೇಕೆಂಬುದನ್ನು ಇದು ಸೂಚಿಸುತ್ತದೆ. ಒಂದು ಕಟ್ಟಡವನ್ನು ಸರಿಯಾದ ಪ್ರಮಾಣದಲ್ಲಿ ವಸ್ತುಗಳನ್ನು ಉಪಯೋಗಿಸಿ, ಸರಿಯಾದ ರೀತಿಯಲ್ಲಿ ಕಟ್ಟಿದರೆ ಅದು ಬಹುಕಾಲ ಉಳಿಯುತ್ತದೆ. ಹಾಗೆಯೇ ಆಧ್ಯಾತ್ಮಿಕತೆಯನ್ನು ಸರಿಯಾದ ನೈತಿಕತೆಯ ಆಧಾರದ ಮೇಲೆ ಕಟ್ಟಬೇಕು – ಇಲ್ಲದಿದ್ದರೆ ಭೂಕಂಪದಿಂದ (ವಿಪತ್ತುಗಳಿಂದ) ತತ್ತರಿಸಿ ಹೋಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಆಧ್ಯಾತ್ಮಿಕ ಸಸಿಯನ್ನು ಧರ್ಮದ ಬೇಲಿಯನ್ನು ಕಟ್ಟಿ ರಕ್ಷಿಸಬೇಕು. ಇಲ್ಲದಿದ್ದರೆ ವಿಷಯ ಪ್ರಾಣಿಗಳು ಅದನ್ನು ತಿಂದುಹಾಕುತ್ತವೆ. ಅದು ಹೆಮ್ಮರವಾದ ಮೇಲೆ ಈ ಬೇಲಿ ಬೇಕಾಗುವುದಿಲ್ಲ, ಏಕೆಂದರೆ ಆಗ ಧರ್ಮದ ಬಲ ಅದರ ಸ್ವಭಾವವಾಗುತ್ತದೆ. ಆಗ ನೀತಿ ಮತ್ತು ಅಧ್ಯಾತ್ಮ ಒಂದಾಗಿಬಿಡುತ್ತದೆ. ಇಂತಹ ಭಕ್ತನು ಶ್ರದ್ಧಾವಂತನೂ ಭಗವನ್ನಿಷ್ಠನೂ ಆಗಿರುತ್ತಾನೆ, ಅಂದರೆ ಭಗವಂತನಲ್ಲಿ ಸಂಪೂರ್ಣ ಶರಣಾಗಿರುತ್ತಾನೆ. ಈ ಶರಣಾಗತಿಯ ಭಾವವನ್ನು ಚಿತ್ರಿಸುವ ಒಂದು ಸುಂದರ ಕತೆಯೊಂದಿಗೆ ಈ '**ಭಕ್ತನ ಲಕ್ಷಣ**'ವನ್ನು ಮುಕ್ತಾಯಗೊಳಿಸೋಣ:

ಪಂಡಿತನೊಬ್ಬನು ಸತ್ಯವನ್ನು ತಿಳಿಸುವ ವ್ಯಕ್ತಿಯೊಬ್ಬನನ್ನು ತನಗೆ ತೋರಿಸಬೇಕೆಂದು ಬಹುಕಾಲದಿಂದ ಭಗವಂತನನ್ನು ಪ್ರಾರ್ಥಿಸುತ್ತಿದ್ದ. ಒಂದು ದಿನ ಭಗವದ್ವಾಣಿ ಕೇಳಿಸಿತು: ''ಆ ಚರ್ಚಿನ ಹತ್ತಿರ ಹೋಗು. ಅಲ್ಲಿರುವ ವ್ಯಕ್ತಿ ನಿನಗೆ ಧನ್ಯತೆಯ ಮಾರ್ಗವನ್ನು ತೋರಿಸುತ್ತಾನೆ.'' ಪಂಡಿತ ಅಲ್ಲಿಗೆ ಹೋದಾಗ, ಚಿಂದಿ ಬಟ್ಟೆಯನ್ನುಟ್ಟ ಕಡುಬಡವನೊಬ್ಬ ಅಲ್ಲಿ ಕಾಣಿಸಿದ. ಪಂಡಿತನು ಅವನನ್ನು ನೋಡಿ ಕನಿಕರದಿಂದ, ''ದೇವರು ನಿನಗೆ ಸುದಿನವನ್ನು ಕರುಣಿಸಲಿ'' ಎಂದ. ''ನನಗೆ ದುರ್ದಿನವೆಂಬುದೇ ಇಲ್ಲ'' ಎಂದು ಆ ವ್ಯಕ್ತಿ ಉತ್ತರಿಸಿದ. ''ನಿನಗೆ ಒಳ್ಳೆಯ ಅದೃಷ್ಟ ಲಭಿಸಲಿ'' ಎಂದು ಪಂಡಿತನೆಂದಾಗ, ''ನನಗೆ ದುರದೃಷ್ಟವೆಂಬುದೇ ಇಲ್ಲ'' ಎಂದನಾ ವ್ಯಕ್ತಿ. ''ನಿನಗೆ ಸುಖವುಂಟಾಗಲಿ'' ಎಂದು ಹೇಳಿದಾಗ ಆತನೆಂದ, ''ನನಗೆ ದುಃಖವೇ ಇಲ್ಲ'' ಎಂದು. ಪಂಡಿತ ಆಶ್ಚರ್ಯದಿಂದ, ''ಹೀಗೇಕೆ ಉತ್ತರಿಸುತ್ತೀಯೆ? ದಯವಿಟ್ಟು ವಿವರಿಸಿ ಹೇಳು'' ಎಂದು ಕೇಳಿದ.


ಆ ವ್ಯಕ್ತಿ ಹೇಳಿದ: ''ನೀನು ನನಗೆ ಸುದಿನವನ್ನು ಅಪೇಕ್ಷಿಸಿದೆ. ಆದರೆ ನನಗೆ ದುರ್ದಿನವೆಂಬುದೇ ಇಲ್ಲ. ಏಕೆಂದರೆ ನಾನು ಹಸಿದಾಗಲೂ ದೇವರನ್ನು ಕೊಂಡಾಡುತ್ತೇನೆ. ಶೀತೋಷ್ಣಗಳಿಂದ ಬಾಧಿತನಾದಾಗಲೂ ದೇವರನ್ನು ಕೊಂಡಾಡುತ್ತೇನೆ. ನನ್ನನ್ನು ಜನ ನಿಂದಿಸಿದಾಗಲೂ ದೇವರನ್ನು ಕೊಂಡಾಡುತ್ತೇನೆ. ಆದ್ದರಿಂದ ನನಗೆ ದುರ್ದಿನವೆಂಬುದಿಲ್ಲ. ನೀನು ನನಗೆ ಒಳ್ಳೆಯ ಅದೃಷ್ಟವನ್ನು ಬಯಸಿದೆ. ಆದರೆ ನನ್ನ ಪಾಲಿಗೆ ದುರದೃಷ್ಟವೆಂಬುದೇ ಇಲ್ಲ. ನಾನು ಯಾವಾಗಲೂ ದೇವರೊಂದಿಗೆ ಇರುತ್ತೇನೆ. ಅವನು ಮಾಡುವುದೆಲ್ಲ ಒಳ್ಳೆಯದೆಂದು ನನಗೆ ಗೊತ್ತು. ಅವನು ಏನೇ ನೀಡಲಿ– ಒಳ್ಳೆಯದೊ ಕೆಟ್ಟದ್ದೊ – ಅದು ನನ್ನ ಒಳ್ಳೆಯದಕ್ಕೇ ಎಂದು ಸಂತೋಷದಿಂದ ಸ್ವೀಕರಿಸುತ್ತೇನೆ. ಆದ್ದರಿಂದ ನನಗೆ ಯಾವುದು ದುರದೃಷ್ಟ? ನೀನು ನನಗೆ ಸುಖವುಂಟಾಗಲಿ ಎಂದು ಹರಸಿದೆ. ನಾನು ಯಾವಾಗಲೂ ಸುಖಿ. ಏಕೆಂದರೆ ನಾನು ಭಗವದಿಚ್ಛೆಯಂತೆ ಬಾಳುತ್ತೇನೆ. ಅವನ ಇಚ್ಛೆಗೆ ನಾನು ಸಂಪೂರ್ಣ ಶರಣಾಗಿದ್ದೇನೆ. ಅವನಿಚ್ಛೆಯೇ ನನ್ನ ಇಚ್ಛೆ.''

''ಆದರೆ, ದೇವರು ನಿನ್ನನ್ನು ನರಕಕ್ಕೆ ತಳ್ಳಿದರೆ ಏನು ಮಾಡುತ್ತಿಯೆ?'' ಅವನ ಉತ್ತರ: ''ದೇವರು ನನ್ನನ್ನು ನರಕಕ್ಕೆ ಕಳಿಸುವನೆ? ಒಂದು ವೇಳೆ ಕಳಿಸಿದರೂ ನಾನು ಎರಡು ಕೈಗಳಿಂದ ಭಗವಂತನನ್ನು ಆಲಿಂಗಿಸುತ್ತೇನೆ. ಒಂದು ಕೈ ನೈಜ ನಮ್ರತೆ. ಅದರಿಂದ ಅವನ ಅಡಿಯಲ್ಲಿ ನಾನು ಸಂಪೂರ್ಣ ಶರಣಾಗಿ ಅವನ ಮಾನವೀಯತೆಯನ್ನು ಅಪ್ಪಿಕೊಳ್ಳುತ್ತೇನೆ. ಪ್ರೀತಿಯ ಇನ್ನೊಂದು ಕೈಯಿಂದ ಅವನ ದಿವ್ಯ ಸ್ವರೂಪವನ್ನು ಅಪ್ಪಿಕೊಳ್ಳುತ್ತೇನೆ. ನಾನು ಅವನನ್ನು ಯಾವ ರೀತಿ ಅಪ್ಪಿಕೊಳ್ಳುತ್ತೇನೆಂದರೆ ಅವನೂ ನನ್ನೊಡನೆ ನರಕಕ್ಕೆ ಬರಬೇಕು. ದೇವರಿಲ್ಲದೆ ಸ್ವರ್ಗದಲ್ಲಿರುವುದಕ್ಕಿಂತ ದೇವರೊಂದಿಗೆ ನರಕದಲ್ಲಿರುವುದೇ ನನಗೆ ಇಷ್ಟ. ನಮ್ರತೆಯಿಂದ ಭಗವಂತನಲ್ಲಿ ಪೂರ್ಣ ಶರಣಾಗುವುದೇ ಅವನನ್ನು ಪಡೆಯುವುದಕ್ಕೆ ಅತಿ ಹತ್ತಿರದ ಮಾರ್ಗ. ಶರಣಾಗತಿಯ ಭಾವದಿಂದ ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳಬೇಕು.

(ಮುಗಿಯಿತು)

ಪುಸ್ತಕ ಪರಿಚಯ


ಕೃತಿ : **ಕಥಾ ಚಿಂತನ – ಮನೋ ಮಂಥನ**
ಲೇಖಕರು: **(ಮೂಲ) ಪಂಡಿತ ಶ್ರೀರಾಮ ಶರ್ಮಾ ಆಚಾರ್ಯ**
ಅನುವಾದ: **ಮಾತಾ ತ್ಯಾಗಮಯೀ**
ಪ್ರಕಾಶಕರು: **ವಿವೇಕಹಂಸ ಪ್ರಕಾಶನ, ನಂ. 569, 3ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಶ್ರೀನಿವಾಸನಗರ 2 ನೇ ಹಂತ, ಬೆಂಗಳೂರು– 50**
ಪುಟಗಳು : **14 + 226 ಬೆಲೆ : 75.00**



ಹಿಂದೀ ಭಾಷೆಯಲ್ಲಿ ಪಂಡಿತ ಶ್ರೀರಾಮ ಶರ್ಮಾ ಆಚಾರ್ಯ ಅವರು ರಚಿಸಿರುವ 'ಪ್ರೇರಣಾಪ್ರದ ದೃಷ್ಟಾಂತ' ಎಂಬ ನೀತಿಕತೆಗಳ ಬೃಹತ್ ಸಂಪುಟದಿಂದ ಆಯ್ದ ಕಥೆಗಳ ಅನುವಾದ ಸಂಕಲನವೇ '**ಕಥಾ ಚಿಂತನ – ಮನೋಮಂಥನ.**' ವಿಚಾರಪ್ರದವೂ ಸ್ಫೂರ್ತಿದಾಯಕವೂ, ಮೌಲ್ಯವರ್ಧಕವೂ ಆದ ಕಥೆಗಳನ್ನು ಸರಳ, ಸುಂದರ ಕನ್ನಡದಲ್ಲಿ ಅನುವಾದಿಸಿ, ಸಂಕಲಿಸಿದವರು ಚಳ್ಳಕೆರೆಯ ಶ್ರೀಶಾರದಾಶ್ರಮದ ಮುಖ್ಯಸ್ಥರಾದ ಮಾತಾ ತ್ಯಾಗಮಯೀ ಅವರು. ಈ ಕೃತಿಯನ್ನು ಅನುವಾದ ಮಾಡಲು ಪ್ರೇರಣೆ ನೀಡಿದ ಸ್ವಾಮಿ ಜಗದಾತ್ಮಾನಂದಜಿಯವರು ಇದಕ್ಕೆ ಒಪ್ಪುವಂತೆ ಸುಂದರವಾದ ಮುನ್ನುಡಿಯನ್ನು ಬರೆದು 'ಶುಭಾಶಂಸನ'ಗೈದಿದ್ದಾರೆ. ಒಂಬತ್ತು ಭಾಗಗಳಲ್ಲಿ ಈ ಕಥೆಗಳನ್ನು ವರ್ಗೀಕರಿಸಿ, ಈ ಭಾಗಗಳಿಗೆ 'ಕರ್ತವ್ಯಪರಾಯಣತೆ', ಸೇವೆ ಮತ್ತು ಪರೋಪಕಾರ', 'ತ್ಯಾಗ ಮತ್ತು ಬಲಿದಾನ', 'ಪ್ರೇಮ, ಕರುಣೆ ಮತ್ತು ಔದಾರ್ಯ' , 'ಶೀಲ, ಸದಾಚಾರ ಮತ್ತು ಸಚ್ಚಾರಿತ್ರ್ಯ' 'ಧರ್ಮಸೂಕ್ಷ್ಮ', 'ಸತ್‌ಪ್ರವೃತ್ತಿಗಳು', 'ದೈವಶ್ರದ್ಧೆ ಮತ್ತು ಆಸ್ತಿಕತೆ' ಎಂಬ ಶೀರ್ಷಿಕೆ ನೀಡಲಾಗಿದೆ. ಆಯಾ ವಿಷಯಗಳಿಗನುಗುಣವಾಗಿ ಕಥೆಗಳ ಮೂಲಕ ಒಂದೊಂದು ಮೌಲ್ಯವನ್ನು ಬಿಂಬಿಸುವುದು ಇಲ್ಲಿನ ವೈಶಿಷ್ಟ್ಯ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಆಧುನಿಕ ಸಂದರ್ಭಗಳಲ್ಲಿ ಬರುವ ಘಟನೆಗಳು ಹಾಗೂ ಅನೇಕ ಸತ್ಯಘಟನೆಗಳು ಇಲ್ಲಿದ್ದು, ಸಹಜ ಶೈಲಿಯ ಸುಂದರ ನಿರೂಪಣೆಯಿಂದ ಕೂಡಿವೆ ಈ ಕಥೆಗಳು. ಇವು ನೇರವಾಗಿ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತವೆ. ಎಲ್ಲ ವಯಸ್ಸಿನ ಓದುಗರಿಗೂ ಮುದ ನೀಡುವ ಈ ಕೃತಿ ಸಂಗ್ರಹಯೋಗ್ಯವಾದುದು. ಕಥೆಗಳಿಗೆ ಯೋಗ್ಯವಾದ ರೇಖಾಚಿತ್ರಗಳಿದ್ದಿದ್ದರೆ ಇದು ಇನ್ನಷ್ಟು ಆಕರ್ಷಕವಾಗುತ್ತಿತ್ತು. ಮುಂದಿನ ಮುದ್ರಣಗಳಲ್ಲಿ ಇದರತ್ತ ಗಮನ ಹರಿಸಬಹುದು ಎಂಬುದು ನಮ್ಮ ಸಲಹೆ.

–ಶ್ರೀ

ಯುವಚೇತನ



ನಮ್ಮ ದೇಶಕ್ಕೆ ತಮ್ಮ ಸರ್ವಸ್ವವನ್ನೂ ಧಾರೆ ಎರೆಯಬಲ್ಲಂತಹ ವ್ಯಕ್ತಿಗಳಿದ್ದರೆ, ಅಪಾದಮಸ್ತಕಪರ್ಯಂತ ನಿಃಸ್ಪೃಹರಾಗಿದ್ದರೆ, ಆಗ ಭರತಖಂಡ ಸರ್ವತೋಮುಖವಾಗಿ ಮಹಿಮಾನ್ವಿತವಾಗುವುದು. ಭರತಖಂಡದ ಜನಸಾಮಾನ್ಯರನ್ನು ಮೇಲಕ್ಕೆ ಎತ್ತುವುದಕ್ಕೆ ಬದ್ಧಕಂಕಣರಾದವರೊಂದಿಗೆ ಕೆಲಸ ಮಾಡಿ, ಅವರನ್ನು ಜಾಗೃತಗೊಳಿಸಿ, ಅವರನ್ನು ಒಂದುಗೂಡಿಸಿ, ಅವರಲ್ಲಿ ತ್ಯಾಗದ ಭಾವನೆ ಮೂಡುವಂತೆ ಮಾಡಿ, ಇಂತಹ ಯುವಕರ ಮೇಲೆಯೆ ಭರತಖಂಡ ನಿಂತಿರುವುದು.

ನಮ್ಮ ದೇಶಕ್ಕೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು ಇರುವ ವ್ಯಕ್ತಿಗಳು. ದುರ್ದಮ್ಯವಾದ ಪ್ರಚಂಡ ಇಚ್ಛಾಶಕ್ತಿಯಿಂದ ಅವರು ಕೂಡಿರಬೇಕು. ಅವರು ಪ್ರಪಂಚದ ರಹಸ್ಯವನ್ನೆಲ್ಲ ಭೇದಿಸಿ ತಮ್ಮ ಇಚ್ಛೆಯನ್ನು ನೆರವೇರಿಸಿಕೊಳ್ಳುವವರಾಗಿರಬೇಕು. ನಮಗಿಂದು ಶಕ್ತಿ ಬೇಕು. ಶಕ್ತಿ ಬೇಕೆಂದು ಪದೇಪದೇ ಹೇಳುತ್ತೇನೆ. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಪ್ರಪಂಚಕ್ಕೆಲ್ಲ ದಾನಮಾಡುವಷ್ಟು ಶಕ್ತಿ ಅದರಲ್ಲಿದೆ. ಇಡೀ ಪ್ರಪಂಚವನ್ನೇ ಅದರಿಂದ ಜಾಗ್ರತಗೊಳಿಸಬಹುದು. ಉಪನಿಷತ್ತಿನಿಂದ ಜನರ ಮೌಢ್ಯದ ಮೇಲೆ ಸಿಡಿಮದ್ದಿನಂತೆ ಬೀಳುವ ಒಂದು ಪದವಿದ್ದರೆ, ಅದೇ '**ಅಭೀಃ**' (ನಿರ್ಭಯತೆ) ಎಂಬ ಪದ. ಜನರಿಗೆ ಬೋಧಿಸುವ ಏಕಮಾತ್ರ ಧರ್ಮವೇ ನಿರ್ಭಯತೆ ಎಂಬುದು. ಜಾಗ್ರತರಾಗಿ ಎದ್ದು ನಿಲ್ಲಿ, ದೌರ್ಬಲ್ಯದ ಸಂಮೋಹನಾಸ್ತ್ರದಿಂದ ಪಾರಾಗಿ. ಯಾರೂ ನಿಜವಾಗಿಯೂ ದುರ್ಬಲರಲ್ಲ. ಯಾರಿಗಾಗಿ ಹೆದರುವುದು? ಆತ್ಮ ಅನಂತವಾದುದು, ಸರ್ವವ್ಯಾಪಿಯಾದುದು. ಸರ್ವಶಕ್ತಿಮಯವಾದುದು. ನೀವು ಆ ಶಕ್ತಿಮಯ ಆತ್ಮ, ಎದ್ದು ನಿಂತು ನಿಮ್ಮಲ್ಲಿರುವ ಪರಬ್ರಹ್ಮವನ್ನು ವ್ಯಕ್ತಗೊಳಿಸಿರಿ. ಯಾರನ್ನೂ ಅಲ್ಲಗಳೆಯಬೇಡಿ. ಸುಪ್ತಾವಸ್ಥೆಯಲ್ಲಿರುವ ಆತ್ಮನನ್ನು ಕೂಗಿ ಕರೆಯಿರಿ. ನೋಡಿ ಅವನು ಹೇಗೆ ಏಳುತ್ತಾನೆ ಎಂಬುದನ್ನು. ಆಗ ಶಕ್ತಿ ಬರುವುದು, ಪರಾಕ್ರಮ ಬರುವುದು, ಸಾಧುಸ್ವಭಾವ ಬರುವುದು, ಪರಿಶುದ್ಧತೆ ಬರುವುದು. *('ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಯಿಂದ)*

ಆಧ್ಯಾತ್ಮಿಕ ಸಂಭಾಷಣೆ

ಸ್ವಾಮಿ ಭೂತೇಶಾನಂದಜೆಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ



ಪ್ರಶ್ನೆ: ಮಹಾರಾಜರೆ, 'ನಿನ್ನಲ್ಲಿ ಸೇವಾಬುದ್ಧಿ ಉಂಟಾದರೆ ದೇಹ ಬುದ್ಧಿ ಕಡಿಮೆ ಆಗುತ್ತದೆ' ಎಂದು ತಾವು ಹೇಳಿದ್ದೀರಿ.

ಮಹಾರಾಜ್: ನೋಡು, ಯಾವಾಗ ಮನುಷ್ಯ ಗಾಢವಾದ ಧ್ಯಾನದಲ್ಲಿ ಮುಳುಗುತ್ತಾನೋ ಆಗ ವಿಚಾರ, ವ್ಯವಹಾರ ಜಗತ್ತುಗಳು ಕರ್ಮವಿರೋಧಿಯಾಗುತ್ತವೆ. ಧ್ಯಾನಸಿದ್ಧಿಯಾದಾಗ ಇಂದ್ರಿಯಗಳೆಲ್ಲವನ್ನೂ ಮನಸ್ಸಿನ ಜೊತೆಗೆ ಲಯಗೊಳಿಸಬೇಕು. ಆಗಲೇ ಕರ್ಮವಿರೋಧವಾಗುತ್ತದೆ. ಆಗ ಕರ್ಮದಿಂದ ಏನೂ ನಡೆಯದು. ಇಂದ್ರಿಯಗಳಿಗೂ ಕರ್ಮವಿರುತ್ತದೆ. ಆದರೆ ಸಾಮಾನ್ಯ ಜನರ ಕರ್ಮಕ್ಕೂ, ಧ್ಯಾನಕ್ಕೂ ವ್ಯತ್ಯಾಸವಿರುವುದರಿಂದ ಧ್ಯಾನವು ಅಂತಹವರಿಗೆ ಬಹುದೂರ. ಶ್ರೀರಾಮಕೃಷ್ಣರು ಸಮಾಧಿ ಅವಸ್ಥೆಯಲ್ಲಿದ್ದಾಗ, ಅವರಿಂದ ಏನಾದರೂ ಕೆಲಸ ಮಾಡಲು ಆಗುತ್ತಿತ್ತೆ? ಮಾತೂ ಹೊರಡುತ್ತಿರಲಿಲ್ಲ. ಆದ್ದರಿಂದ ಆ ಅವಸ್ಥೆಯಲ್ಲಿ ಯಾವ ಕೆಲಸವೂ ನಡೆಯದು. ಎಲ್ಲಿ ತನಕವೆಂದರೆ ನಿಃಸ್ವಾರ್ಥ ಕರ್ಮವನ್ನೂ ಮಾಡಲಾಗದು. ಈ ಅವಸ್ಥೆಯಲ್ಲಿ ಕರ್ಮವಿರೋಧವಾಗುತ್ತದೆ. ಆ ಅವಸ್ಥೆ ಬರುವ ತನಕ ಕರ್ಮ ವಿರೋಧವಿರುವುದಿಲ್ಲ. ವಿಚಾರಕ್ಕೂ ವಿಚಾರಿಸಲ್ಪಡುವ ವಿಷಯಕ್ಕೂ ಎಲ್ಲಿಯತನಕ ವಿರೋಧ ಕಾಣುವುದಿಲ್ಲವೋ ಅಲ್ಲಿ ತನಕ ಜನಸೇವೆ ಮಾಡಲು ವಿರೋಧವೇನಿದೆ? ಅನಂತರದ ವಿರೋಧ ಎಲ್ಲಿಂದ ಬರುವುದು? ಹೀಗೆ ಹೇಳುತ್ತಾರೆ – ಯಾವ ಕರ್ಮವು ಮನುಷ್ಯನನ್ನು ಸಂಕುಚಿತಗೊಳಿಸುವುದೋ, ಅದರ ಜೊತೆಗೆ ಕರ್ಮದ ವಿರೋಧವಿದೆ. (ಅಂದರೆ ಸ್ವಾರ್ಥಬುದ್ಧಿಯಿಂದ ಕೂಡಿದ ಕರ್ಮಕ್ಕೆ ವಿರೋಧವಿದೆ.) ಆದರೆ ನಿಃಸ್ವಾರ್ಥ ಕರ್ಮದೊಂದಿಗೆ ಯಾವ ವಿರೋಧವೂ ಇಲ್ಲ. ಸ್ವಾಮೀಜಿಯವರೂ ಈ ಮಾತನ್ನು ಹೇಳುತ್ತಾರೆ, ಶಂಕರಾಚಾರ್ಯರೂ ಈ ವಿಷಯವಾಗಿ ಸ್ಪಷ್ಟವಾದ ಮಾತನ್ನು ಹೇಳಿದ್ದಾರೆ. ಆಚಾರ್ಯರು ಘಂಟಾಘೋಷವಾಗಿ ಹೇಳಿದ್ದಾರೆ: ಯಾವ ಕರ್ಮವು ಸಕಾಮವೋ, ಅದು ಕರ್ಮದ ಜೊತೆ ವಿರೋಧ ಹೊಂದಿರುತ್ತದೆ. ಕರ್ಮ ಮಾಡುತ್ತ ಮಾಡುತ್ತ ಆತನ ಮನಸ್ಸಿನಲ್ಲಿ ಒಂದು ವೇಳೆ ನಿಷ್ಕಾಮಭಾವನೆ ಬಂದರೆ, ಆ ಆತನಿಗೆ ಕರ್ಮವಿರೋಧ ಉಳಿಯುವುದಿಲ್ಲ.

ಪ್ರಶ್ನೆ: ಅಂದರೆ – ಹಿಂದಿನ ಕರ್ಮವನ್ನೇ ಈಗ ನಿಷ್ಕಾಮಕರ್ಮವಾಗಿ ಮಾಡಲಾಗುವುದು ಎಂದರ್ಥ. *(ಅರ್ಥಾತ್ ಎಲ್ಲಿಯತನಕ ಸಕಾಮ ಕರ್ಮ ಮಾಡುತ್ತಿರುವವೋ, ಅರಿವು ಬಂದ ಮೇಲೆ ಅದೇ ಕರ್ಮ ನಿಷ್ಕಾಮವಾಗಿ ಮುಂದುವರಿಯುತ್ತದೆ.)*

ಮಹಾರಾಜ್: ಉದಾಹರಣೆಗೆ ಒಬ್ಬ ಯಜ್ಞ ಮಾಡುತ್ತಾನೆ, ಯಜ್ಞಕ್ಕೆ ಆಹುತಿ ನೀಡುತ್ತಿದ್ದಾನೆ. ಸಕಾಮ ಭಾವದಿಂದ ಅವನು ಆಹುತಿ ನೀಡುತ್ತಿದ್ದಾನೆ. ಹಾಗೆ ಮಾಡುತ್ತಾ ಕ್ರಮೇಣ ಆತನಲ್ಲಿ ಸಕಾಮಭಾವನೆ ಹೊರಟು ಹೋಗುತ್ತದೆ. ಆದರೆ ಯಾವುದನ್ನು ಆರಂಭ ಮಾಡಿದ್ದಾನೋ, ಮಾಡಲ್ಪಟ್ಟ ಕರ್ಮವು ಅಲ್ಲಿಗೆ ಮುಗಿಯಿತು. ಈ ಕರ್ಮ ಯಾವ ಬಗೆಯದು? ಅದು ನಿಷ್ಕಾಮಕರ್ಮ. ಯಾವಾಗ ಆತನ ಮನಸ್ಸಿನಲ್ಲಿದ್ದ ಕಾಮನೆಗಳು ಹೊರಟುಹೋದವೋ, ಆಗಲೇ ಅದು ನಿಷ್ಕಾಮಕರ್ಮವಾಯಿತು. ನಿಷ್ಕಾಮಕರ್ಮದೊಂದಿಗೆ ಜ್ಞಾನಕ್ಕೆ ವಿರೋಧವಿಲ್ಲ. ಕಾರಣ, ನಿಷ್ಕಾಮಕರ್ಮವು ನಿನ್ನನ್ನು ಸಂಕುಚಿತನನ್ನಾಗಿ ಮಾಡದು. ದೇಹದ ಜೊತೆಗೆ ನಿನ್ನನ್ನು ಬಂಧಿಸದು. ಹೀಗಾಗಿ ನಿಷ್ಕಾಮಕರ್ಮಕ್ಕೂ ಜ್ಞಾನಕ್ಕೂ ಸಂಘರ್ಷ ಬರುವುದಿಲ್ಲ. ಶಂಕರಾಚಾರ್ಯರು ಕೂಡ ವಿರೋಧ ವಿರುವುದು ಕರ್ಮದ ಅಧೀನದಲ್ಲಿ ಎನ್ನುತ್ತಾರೆ.

ಇನ್ನು ನಿದಿಧ್ಯಾಸನದಲ್ಲಿ ಸ್ವಾಭಾವಿಕವಾಗಿಯೇ ಕರ್ಮ ವಿರೋಧವಿರುವುದಿಲ್ಲ. ನಿದಿಧ್ಯಾಸನವೆಂದರೆ ಮನಸ್ಸಿನಾಚೆಗೆ – ವಿಚಾರದಾಚೆಗೆ – ಯಾವ ಸಿದ್ಧಾಂತವಿರುವುದೋ ಅದರಲ್ಲಿ ಮುಳುಗಿ ಹೋಗುವುದು. ಆಗ ಅಲ್ಲಿ ಕರ್ಮವುಂಟಾಗದು. ಎಲ್ಲಿ ವಿಕ್ಷೇಪ (ಚಂಚಲಸ್ವಭಾವ) ವಿರುವುದೋ, ಅಲ್ಲಿ ಶ್ರೇಯವಸ್ತು (ಮುಕ್ತಿ) ಇರುವುದು ನಮಗೆ ಕಾಣುವುದಿಲ್ಲ. ಖಂಡಿತ ಅಲ್ಲಿ ವಿರೋಧವಿರುವುದಿಲ್ಲ. ಇದೇ – 'ವಿಕ್ಷೇಪ ಹೋತಾ ಹೈ.' ಇದರರ್ಥ ತೋರಿಕೆಗೆ ವಿರೋಧವಿರುವ ಹಾಗೆ ಕಂಡುಬರುತ್ತದೆ. ಈ ವಿರೋಧದ ವಿಷಮತೆಯಿಂದಾಗಿ ನಾವು ನಮಗೆ ಉಚಿತವಾಗಿರುವ humanity ಯಿಂದ ಚ್ಯುತರಾಗುತ್ತೇವೆ. ಇದೇ ಸಿದ್ಧಾಂತ. ಇಲ್ಲಿ ವಿರೋಧವೆಲ್ಲಿ ಬಂತು? ಎಲ್ಲಿ ಸಮಾಧಿಸ್ಥನಾಗುವೆನೋ, ಎಲ್ಲಿ ವ್ಯವಹಾರವನ್ನೂ ಮಾಡುತ್ತೇನೋ, ಅಲ್ಲಿ ವಿರೋಧವಿರುವುದಿಲ್ಲ.

ಪ್ರಶ್ನೆ: ಶಂಕರಾಚಾರ್ಯರ ಹೇಳಿಕೆಯಂತೆ, ನಿಷ್ಕಾಮಕರ್ಮದ ಮೂಲಕ ಜ್ಞಾನ–ನಿಷ್ಠೆಯ ಲಾಭವುಂಟಾಗುತ್ತದೆ.

ಮಹಾರಾಜ್: ಜ್ಞಾನ–ನಿಷ್ಠೆ ಸಿದ್ಧಿಸಿದರೆ, ಆತನಿಗೆ ಜ್ಞಾನದಲ್ಲಿ ಸ್ಥಿತಿಯುಂಟಾಗುತ್ತದೆ.

ಪ್ರಶ್ನೆ: ಅನಂತರ ಜ್ಞಾನದ ಅಂತರಂಗ ಸಾಧನೆ ನಡೆಯುವುದು.

ಮಹಾರಾಜ್: ಅಂತರಂಗ ಸಾಧನೆ ಎಂದರೆ ಬ್ರಹ್ಮಾಕಾರ ವೃತ್ತಿ. ವಿಚಾರಮಾರ್ಗಿಗಳು ಇದನ್ನೆಲ್ಲ **ವೃತ್ತಿ** ಎನ್ನುವರು.

ಪ್ರಶ್ನೆ: ಹಾಗಲ್ಲ, ಅದಕ್ಕೆ ನಿದಿಧ್ಯಾಸನ ಎನ್ನುವರು.

ಮಹಾರಾಜ್: ನಿದಿಧ್ಯಾಸನವೆಂದರೆ ಧ್ಯಾನ. ಧ್ಯಾನವೆಂದರೆ– ನಿನ್ನೆಲ್ಲ ಇಂದ್ರಿಯವೃತ್ತಿಗಳನ್ನು ನಿರೋಧಿಸುವುದು.

ಪ್ರಶ್ನೆ: ಈ ಅವಸ್ಥೆಯಲ್ಲಿ ಶ್ರವಣ, ಮನನಗಳಿಗೆ ಅವಕಾಶವಿಲ್ಲವೆ?

ಮಹಾರಾಜ್: ಶ್ರವಣ–ಮನನಗಳ ನಂತರವೇ ನಿಧಿಧ್ಯಾಸನ. ಶ್ರವಣ–ಮನನ ಮಾಡಿದ್ದರಿಂದಲೇ ನಿದಿಧ್ಯಾಸನವುಂಟಾಗುವುದು.

ಪ್ರಶ್ನೆ: ಇಲ್ಲ; ಒಂದು ವೇಳೆ ಜ್ಞಾನನಿಷ್ಠೆ ಬರುವ ತನಕ ಕರ್ಮ ಮಾಡುತ್ತ ಹೋಗುತ್ತೇವೆ. ನಿಷ್ಕಾಮಕರ್ಮದ ಜೊತೆಗೆ ಸಾಧಾರಣವಾಗಿ ನಾವು ತಿಳಿಯುವಂತೆ ಜ್ಞಾನದ ಅಂತರಂಗ ಸಾಧನೆ – ಶ್ರವಣ, ಮನನ, ನಿದಿಧ್ಯಾಸನ – ಮಾಡಬೇಕಾಗುತ್ತದೆಯೆ?

ಮಹಾರಾಜ್: ನಿಷ್ಠೆ ಎಂದರೆ 'ನಿತರಾಂ ಸ್ಥಿತಿ.' ನಿಷ್ಠೆ ಎಂದರೆ ದೃಢತೆ ಅಲ್ಲ. ನಿಷ್ಠೆ ಎಂದರೆ – ಆ ಸ್ಥಿತಿಯಲ್ಲಿರುವುದು. ಜ್ಞಾನದ ಸ್ಥಿತಿ ಉಂಟಾದಾಗ ಪ್ರಜ್ಞೆಯು ಪ್ರತಿಷ್ಠಿತವಾಗುತ್ತದೆ. ಪ್ರಜ್ಞೆ ಯಾವಾಗ ಪ್ರತಿಷ್ಠಿತವಾಯಿತೋ ಅದೇ ಧ್ಯಾನದ ಸ್ಥಿತಿ. ಆಗ ಅಲ್ಲಿ ಕರ್ಮದೊಂದಿಗೆ ವಿರೋಧವಿರುತ್ತದೆ. ಅಲ್ಲಿಯ ತನಕ ಕರ್ಮ ವಿರೋಧವಿರುವುದಿಲ್ಲ. ಇದು ನನ್ನ ಅಭಿಪ್ರಾಯ. ಆದ್ದರಿಂದ ಸ್ವಾಮೀಜಿ ದೃಷ್ಟಿಯಲ್ಲಿ ಕರ್ಮ ಮತ್ತು ಧ್ಯಾನ ಇವುಗಳು ಪರಸ್ಪರ ವಿರೋಧ ವಸ್ತುಗಳಲ್ಲ. ಆದರೂ, ಕರ್ಮವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ, ಆ ಕರ್ಮದ ಮೂಲಕ ಸಾಧನಾಪಥದಲ್ಲಿ ಮುಂದುವರಿಯಲು ಯಾವುದೇ ತೊಂದರೆಯಿಲ್ಲ. ಕರ್ಮದೊಂದಿಗೆ ವಿಚಾರವನ್ನೂ ಸೇರಿಸಿಕೊಂಡರೆ, ಗುರಿಯನ್ನು ಮರೆಯದಿದ್ದರೆ ಯಾವುದೇ ತೊಂದರೆಯುಂಟಾಗದು.

ಪ್ರಶ್ನೆ: ಆಚಾರ್ಯ ಶಂಕರರು ಚಿತ್ತಶುದ್ಧಿಯ ವಿಚಾರ ಹೇಳುತ್ತಾರೆ.

ಮಹಾರಾಜ್: ಆಚಾರ್ಯರು ಚಿತ್ತಶುದ್ಧಿಯಿಂದಲೇ ಆರಂಭಿಸುತ್ತಾರೆ. ಪ್ರತ್ಯೇಕವಾಗಿ ಬ್ರಹ್ಮಾಕಾರ ವೃತ್ತಿಯ ಉದಯವಾಗುವ ಆವಶ್ಯಕತೆಯಿಲ್ಲವೆಂದು ಸ್ವಾಮೀಜಿ ಹೇಳುತ್ತಾರೆ. ಚಿತ್ತಶುದ್ಧಿಯುಂಟಾಯಿತೆಂದರೆ ಬ್ರಹ್ಮಾಕಾರವೃತ್ತಿಯ ಅಗತ್ಯವೇನಿದೆ? ಚಿತ್ತಶುದ್ಧಿಯೆಂದರೆ, ಚಿತ್ತ ಅಥವಾ ನಮ್ಮ ಜ್ಞಾನವನ್ನು ಕವಿದಿರುವ ಆವರಣವಿದೆಯಲ್ಲ, ಅದು ಶುದ್ಧವಾಯಿತೆಂದರೆ ಎಲ್ಲ ಆದಂತೆ. ಆತ್ಮವು ಸ್ವಯಂಪ್ರಕಾಶ – ತಾನಾಗಿಯೇ ಪ್ರಕಾಶಿಸುವಂಥದ್ದು.

ಪ್ರಶ್ನೆ: ಚಿತ್ತಶುದ್ಧವಾದರೆ ಆದ ಹಾಗೆಯೆ? ಅಂದರೆ ಬ್ರಹ್ಮಾಕಾರ ವೃತ್ತಿಯ ಆವಶ್ಯಕತೆಯಿಲ್ಲವೆ?

ಮಹಾರಾಜ್: ಮತ್ತೇನು ವೃತ್ತಿ? ವೃತ್ತಿಯ ಮೂಲಕ ಬ್ರಹ್ಮಜ್ಞಾನವನ್ನು ಪ್ರಕಾಶಪಡಿಸಲಾದೀತೆ? ಬ್ರಹ್ಮವು ಸ್ವಯಂ ಪ್ರಕಾಶವಾದುದು.

ಪ್ರಶ್ನೆ: ಅದೇ ಚಿತ್ತ ಹಾಗೆಯೇ ಉಳಿದುಹೋಗುವುದಲ್ಲವೆ? ಚಿತ್ತವನ್ನು ನಾಶಪಡಿಸಬೇಕಲ್ಲವೆ?

ಮಹಾರಾಜ್: ಚಿತ್ತವು ಹಾಗೆಯೇ ಉಳಿದು ಹೋಯಿತೆಂದರೆ ಅರ್ಥವೇನು? ಶುದ್ಧಮನಸ್ಸು, ಶುದ್ಧಬುದ್ಧಿ, ಶುದ್ಧ ಆತ್ಮ ಒಂದೇ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಈ ಮಾತಿನಲ್ಲ ಕಿಂಚಿತ್ತೂ ಕಳಂಕವಿಲ್ಲ. ಯಾವಾಗ ಚಿತ್ತಶುದ್ಧಿಯಾಯಿತೋ ಆಗ ಆವರಣ ಕಳಚಿ ಬೀಳುತ್ತದೆ. ಅಲ್ಲಿ ನಾಶಮಾಡಲು ಏನೂ ಉಳಿಯದು. ಆಗ ಸೃಷ್ಟಿಯ ಎಲ್ಲ ಅಡೆತಡೆಗಳೂ ಇಲ್ಲವಾಗುತ್ತವೆ.

ಪ್ರಶ್ನೆ: ಹಾಗಾದರೆ, ಜ್ಞಾನ ಮತ್ತು ಕರ್ಮಗಳ ಸಮುಚ್ಚಯಗಳ ಸಂಬಂಧವಾಗಿ ಶಂಕರಾಚಾರ್ಯರು, ಆಗಾಗ ಹೇಳುತ್ತಾರಲ್ಲ? ಇಲ್ಲಿ ಅದು ಸಾಧ್ಯವಾಗದು.

ಮಹಾರಾಜ್: ಅಲ್ಲಿ ಕರ್ಮವೆಂದರೆ ಸಕಾಮಕರ್ಮ.

ಪ್ರಶ್ನೆ: ಹಾಗಾದರೆ ನಿಷ್ಕಾಮದ ಕ್ಷೇತ್ರದಲ್ಲಿ ಅದಕ್ಕೆ ವಿರೋಧವಿಲ್ಲವೆ?

ಮಹಾರಾಜ್: ಅದಕ್ಕೆ ಯಾವ ವಿರೋದವೂ ಇಲ್ಲ. ನಿಷ್ಕಾಮಕರ್ಮವು ಜ್ಞಾನಕ್ಕೆ ಸಹಕಾರಿ. ವಿರೋಧವೆಲ್ಲಿ ಉಂಟಾಗುವುದು? ಸಕಾಮಕರ್ಮದ ಅವಸ್ಥೆಯಲ್ಲಿದ್ದಾಗ, ನಿದಿಧ್ಯಾಸನದೊಂದಿಗೆ ಅದಕ್ಕೆ ವಿರೋಧವಿದೆಯೆಂದು ಹೇಳಲಾಗಿದೆ. 'ಈಗ ನನಗೆ ಈ ಕೆಲಸವನ್ನು ಮಾಡಬೇಕಾಗಿದೆ' ಎಂದು ನೀನು ಭಾವಿಸಿದರೆ ಅದನ್ನು ಮಾಡಲೇಬೇಕು. ಹೀಗೆ ಮಾಡಿದರೆ ನಿನಗೆ ಜ್ಞಾನನಿಷ್ಠೆಯಿರದು. ನೀನು ಐಚ್ಛಿಕ ಭಾವದಲ್ಲಿ (ನಿನ್ನ ಇಚ್ಛೆಯಂತೆ) ಇರಬೇಕಾಗುವುದು. ಇನ್ನೊಂದು ವಿಚಾರ, ಜ್ಞಾನಾವಸ್ಥೆಯಲ್ಲಿ ಸಕಾಮಕರ್ಮವೇ ಏಕೆ, ನಿಷ್ಕಾಮಕರ್ಮದ ಅನುಷ್ಠಾನವೂ ಸಾಧ್ಯವಿಲ್ಲ. ಈ ಅರ್ಥದಲ್ಲೇ ಜ್ಞಾನ–ಕರ್ಮ ಸಮುಚ್ಚಯ ಸಾಧ್ಯವಿಲ್ಲವೆಂದು ಶ್ರೀಶಂಕರರು ಹೇಳುತ್ತಾರೆ.

ಪ್ರಶ್ನೆ: ಮಹಾರಾಜ್, ನಾವು ಕರ್ಮದಲ್ಲಿ ಪರಿಣತವಾದ ವೇದಾಂತದ ಮಾರ್ಗವನ್ನು ಅನುಸರಿಸಲು ಪ್ರಯತ್ನ ಪಡುತ್ತಿದ್ದೇವೆ. ತುಸು ಸಾಧನೆ–ಭಜನೆ ಮಾಡುತ್ತ, ಕರ್ಮವನ್ನೇ ಹೆಚ್ಚಾಗಿ ಮಾಡುತ್ತಿದ್ದೇವೆ. ಈ ದಾರಿಯನ್ನೇ ಅವಲಂಬಿಸಿ ಉಳಿದ ಸಮಯವನ್ನೆಲ್ಲ ಕಳೆಯುತ್ತಿದ್ದೇವೆ. ಸಂಸ್ಥೆಯ ದೃಷ್ಟಿಯಿಂದ ಉಳಿದವರೊಂದಿಗೆ ಹೋಲಿಸಿ ನೋಡಿದಾಗ, ನಾವು ಉತ್ತಮವಾಗಿದ್ದೇವೆ ಎನ್ನಬಹುದು. ಆದರೆ ವೈಯಕ್ತಿಕವಾಗಿ ನಾವು ಏನು success ಅಥವಾ ತೃಪ್ತಿಯನ್ನು ಹೊಂದಬೇಕಾಗಿತ್ತೋ ಅದನ್ನು ಸರಿಯಾದ ರೀತಿಯಲ್ಲಿ ಹೊಂದುತ್ತಿಲ್ಲ.

ಮಹಾರಾಜ್: ಅದಕ್ಕೇನು ಮಾಡಬೇಕು? ನಾವು ಅನುಷ್ಠಾನ ಮಾಡುತ್ತಿದ್ದೇವೆ. ಅದನ್ನು sincerely ಮಾಡಬೇಕು. ನಾವು ಜನರ ಮುಂದೆ ತೋರಿಸಿಕೊಳ್ಳಲು ಮಾಡುತ್ತಿಲ್ಲ. ಅದನ್ನು ಆಂತರಿಕ ಭಾವದಿಂದ ಮಾಡಬೇಕು. **'ಹರಿ ಸೇ ಲಾಗಿ ರಹೋ ರೇ ಭಾಯಿ, ತೇರಾ ಬನತ ಬನತ ಬನಿ ಜಾಯಿ'** (ಹರಿಯಲ್ಲೇ ಮನಸ್ಸನ್ನಿಟ್ಟು ಮಾಡು, ನಿಧಾನವಾಗಿ ನೀನು ಗುರಿ ತಲುಪುವೆ.) ನಾವು ಇದನ್ನೇ ಮಾಡುತ್ತೇವೆ. ಹೀಗಾಗಿ ಏನೂ ಸಾಧ್ಯವಾಗುತ್ತಿಲ್ಲ. ಒಂದೆರಡು ಹೆಜ್ಜೆ ಮುಂದಿಟ್ಟರೆ ಏನೂ ತಿಳಿಯದು. ನಾವು ಸೂರ್ಯನ ಕಡೆಗೆ ನಡೆಯುವಾಗ, ಒಂದು ಹೆಜ್ಜೆ ಮುಂದಿಟ್ಟರೂ, ಅಷ್ಟು ಹತ್ತಿರ ಹೋದ ಹಾಗೆ. ಆದರೆ ಅತ್ತ ಸಾಗುತ್ತಿದ್ದೇವೆಂದು ನಮಗೆ ತಿಳಿಯುವುದೆ?

ಯೋಗವಾಸಿಷ್ಠದ ಕಥೆಗಳು



ಸ್ವಾಮಿ ವೀರೇಶಾನಂದ

ಕಥಾಗುಚ್ಛ – ೩

(ಹಿಂದಿನ ಸಂಚಿಕೆಯಿಂದ)

ಮಹಾತ್ಮನ ಕಥೆ

ಚೈತನ್ಯದ ಅಂತರಾಳದಲ್ಲಿ, ಸೃಷ್ಟಿಕರ್ತನ ಮನದ ಮೂಲೆಯೊಂದರಲ್ಲಿ ಪಾಳುಬಿದ್ದ ದೇಗುಲವೊಂದಿತ್ತು. ಅದಕ್ಕೊಂದು ನೀಲಿ ಬಣ್ಣದ ಗೋಪುರ. ಹದಿನಾಲ್ಕು ಲೋಕಗಳೇ ಅದರ ಹದಿನಾಲ್ಕು ಕೊಠಡಿಗಳು. ಆಕಾಶದ ಮೂರು ಪರಿಗಳೇ (ಭೌತಿಕ, ಮಾನಸಿಕ, ಚೈತನ್ಯಾತ್ಮಕ) ಅದರಲ್ಲಿನ ರಂಧ್ರಗಳು. ಸೂರ್ಯನೇ ಬೆಳಕು. ಅದರಲ್ಲಿ ಸಣ್ಣ ಸಣ್ಣ ಹುತ್ತಗಳು; ಅವುಗಳೇ ನಗರಗಳು. ಹಾಗೆಯೇ ಸಣ್ಣ ಸಣ್ಣ ಹೊಂಡಗಳು; ಅವುಗಳೇ ಸಾಗರಗಳು. ಇದೇ ಸೃಷ್ಟಿ; ಇದೇ ವಿಶ್ವ. ಇದರ ಒಂದು ಸಣ್ಣ ಮೂಲೆಯಲ್ಲಿ ಒಬ್ಬ ಋಷಿಯು ತನ್ನ ಹೆಂಡತಿ ಮತ್ತು ಮಕ್ಕಳೊಡನೆ ಜೀವಿಸುತ್ತಿರುವನು. ಒಮ್ಮೆ ಆ ಮಹಾತ್ಮನು ಗುಡ್ಡವೊಂದರ ತಪ್ಪಲಲ್ಲಿ ಕುಳಿತಿದ್ದಾನೆ. ಅವನ ಮುಂದೆ ರಸ್ತೆಯಲ್ಲಿ ರಾಜನೊಬ್ಬನ ಮೆರವಣಿಗೆ ಸಾಗುತ್ತಿದೆ. ರಾಜನು ಆನೆಯ ಮೇಲೆ ವಿರಾಜಮಾನನಾಗಿದ್ದಾನೆ. ಅವನ ಹಿಂದೆ ಸೈನ್ಯ ಮತ್ತು ಸುತ್ತಮುತ್ತ ರಾಜಚಿಹ್ನೆಗಳ ಭವ್ಯ ಪ್ರದರ್ಶನ ಸಾಗುತ್ತಿದೆ. ಇದನ್ನು ನೋಡಿದ ಋಷಿಯ ಮನಸ್ಸಿನಲ್ಲಿ ಒಂದು ಆಶೆ ಮೂಡಿತು: ಆಹಾ! ರಾಜನ ಜೀವನ ಸಂಪದ್ಭರಿತವಾದದ್ದು; ಮೋದಾಮೋದಗಳಿಂದ ಕೂಡಿದ್ದು. ನನಗೂ ಇಂಥ ಭವ್ಯ ಆನೆಯ ಮೇಲೆ ರಾಜಗಾಂಭೀರ್ಯದಿಂದ ಕುಳಿತು ಸಾಗಲು ಸಾಧ್ಯವಾದರೆ! ನನ್ನ ಹಿಂದೆ ಸೈನ್ಯವು ಹಿಂಬಾಲಿಸುತ್ತಿದ್ದರೆ!

ಕೆಲವು ಸಮಯದ ನಂತರ ಆ ಋಷಿಯು ವೃದ್ಧನಾಗಿ ಮರಣವನ್ನಪ್ಪಿದನು. ಆತನ ಹೆಂಡತಿಯು ನನ್ನನ್ನು (ಸರಸ್ವತಿ) ಬಹುವಾಗಿ ಪ್ರಾರ್ಥಿಸಿಕೊಂಡಳು. ನೀನು ಕೇಳಿದ ವರವನ್ನೇ ಅವಳೂ ಕೇಳಿದಳು. ಆ ಮನೆಯ ಆಚೆಗೆ ಗಂಡನ ಜೀವವು ಹೋಗಬಾರದೆಂದು ಬೇಡಿಕೊಂಡಳು. ನಾನು ವರವನ್ನು ನೀಡಿದೆ.

ಆ ಸಂತನು ಹಿಂದಿನ ಜನ್ಮದ ಆಶೆಯ ಫಲವಾಗಿ ಬಹು ದೊಡ್ಡ ರಾಜನಾಗಿ ಹುಟ್ಟಿದನು. ಬೃಹತ್ ರಾಜ್ಯವನ್ನು ಆಳಿದನು. ಶತ್ರುಗಳಿಗೆ ಅವನು ಯಮನಂತೆ ಇದ್ದನು. ಪರ್ವತದಂತೆ ಸ್ಥಿರನಾಗಿದ್ದನು. ಸಂತರಿಗೆ ಆಶ್ರಯ ನೀಡುತ್ತಿದ್ದನು. ಅವನ ಹಿಂದಿನ ಜನ್ಮದ ಹೆಂಡತಿಯೂ ಅವನೊಡನೆ ಪುನಃ ಹುಟ್ಟಿದ್ದಳು. ರಾಣಿಯಾಗಿ ಅವನೊಡನೆ ಉಲ್ಲಾಸದಿಂದಿದ್ದಳು. ಕಡೆಗೆ ರಾಜನು ದೇಹತ್ಯಾಗ ಮಾಡಿದನು. ಇದೆಲ್ಲ ನಡೆಯುವುದಕ್ಕೆ ಎಷ್ಟು ಕಾಲ ತೆಗೆದುಕೊಂಡಿತೆಂದು ಕೇಳುವೆಯೊ? ಆ ಮಹಾತ್ಮನು ಕಾಲವಾಗಿ ಎಂಟು ದಿನಗಳ ಕಾಲ ಮಾತ್ರ!

ಲೀಲೆ, ಆ ಸಂತನು ಯಾರೆಂದುಕೊಂಡೆ? ನಿನ್ನ ಗಂಡನೇ. ಅವನ ಹೆಂಡತಿ ಯಾರೆಂದುಕೊಂಡೆ? ಅದು ನೀನೇ. ರಾಜನಾದ ನಿನ್ನ ಗಂಡ ಮತ್ತೆ ಸತ್ತಿದ್ದಾನೆ. ನೀನೀಗ ಮತ್ತೆ ಅಳುತ್ತಿದ್ದೀಯೆ. ಇವೆಲ್ಲ ಸಂಗತಿಗಳು ಅಜ್ಞಾನ ಮತ್ತು ಮೋಹಗಳ ಫಲವಾಗಿ ಅನಂತವಾದ ಚೈತನ್ಯದಲ್ಲಿ ತೋರುತ್ತಿವೆ, ಅಷ್ಟೇ. ಇದನ್ನು ನಿಜವೆಂದು ಭಾವಿಸುವೆಯೊ? ಅದೂ ಸರಿಯೇ. ಸುಳ್ಳೆಂದು ಭಾವಿಸುವೆಯೋ? ಅದು ಸರಿಯೇ. ಇದು ಹೀಗೇ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ.

ಲೀಲಾ: ನಾನು ಮತ್ತು ನನ್ನ ಗಂಡ ಅದೆಷ್ಟು ವರ್ಷಗಳ ಕಾಲ ಬಾಳಿದೆವು! ನೀನು ಬರೀ ಎಂಟು ದಿನಗಳ ಕಾಲ ಮಾತ್ರ ಎನ್ನುತ್ತೀಯಲ್ಲ?

ಸರಸ್ವತಿ: ಅಮ್ಮಾ, ಲೀಲಾ. ಕಾಲ, ದೇಶ ಇವೆಲ್ಲ ಅನಂತ ಚೈತನ್ಯಕ್ಕೆ ಹೋಲಿಸಿದಲ್ಲಿ ಕೇವಲ ತೋರಿಕೆಗಳು ಮಾತ್ರ. ಅವುಗಳಿಗೆ ಯಾವ ನಿರ್ದಿಷ್ಟ ಗಡುವು ಎಂಬುದಿಲ್ಲ. ಕಣ್ಣು ಬಿಡುವಷ್ಟರಲ್ಲಿ ಜೀವವು ಮೃತ್ಯುವಿನ ಅನುಭವವನ್ನು ಪಡೆಯುತ್ತದೆ. ತನ್ನ ಹಿಂದಿನ ದಶೆಯನ್ನು ಮರೆತು, 'ನಾನು ಇಂಥವನು', 'ನಾನು ಇಂಥವನ ಮಗ', 'ನನಗೆ ಇಷ್ಟು ವಯಸ್ಸು' ಎಂದೆಲ್ಲ ಯೋಚಿಸುತ್ತದೆ. ಈ ಲೋಕದ ಅನುಭವಕ್ಕೂ, ಪರಲೋಕದ ಅನುಭವಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಅವೆಲ್ಲವೂ ಹಿಂದೆಯೇ ಹೇಳಿದ ಹಾಗೆ, ಅನಂತ ಚೈತನ್ಯದ ಮೇಲ್ಮೆಯಲ್ಲಿ ಮೂಡಿಬರುವ ಚಿತ್ತವೃತ್ತಿಗಳಷ್ಟೇ. ಚೈತನ್ಯವೊಂದೇ ಸತ್ಯ. ಅದರ ಮೇಲೆ ಆರೋಪಿತವಾದ ಮಾನಸಿಕ ವೃತ್ತಿಗಳೆಲ್ಲ ಬರಿಯ ಭ್ರಮೆ ಮಾತ್ರ.

ಲೀಲಾ: ದೇವಿ, ನೀನು ನನಗೆ ಎಂಥೆಂಥ ಅನುಭವಗಳನ್ನು ಮಾಡಿಸಿದ್ದೀಯೆ. ನನಗೆ ಆ ಮಹಾತ್ಮನ ತಪೋವನವನ್ನು ತೋರಿಸುವೆಯಾ?

ಸರಸ್ವತಿ: ಲೀಲಾ, ಇದು ಉತ್ಕಟ ಸಾಧನೆಯಿಂದ ಮಾತ್ರ ಸಾಧ್ಯ. ಈ ದೇಹದಿಂದ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಅದಕ್ಕಾಗಿ ನೀನು ಚೈತನ್ಯಕಾಯವನ್ನು ಪಡೆಯಬೇಕು. ನೀನು ನನ್ನೊಡನೆ ಧ್ಯಾನ ಮಾಡಿ, ಈ ದೇಹ ಬಂಧನವನ್ನು ಮೀರಿಹೋಗು.

ಲೀಲಾ ಧ್ಯಾನಮಗ್ನಳಾದಳು. ಸರಸ್ವತಿಯೂ ಧ್ಯಾನಮಗ್ನಳಾದಳು. ಇಬ್ಬರೂ ಜ್ಞಾನಕಾಯವನ್ನು ಪಡೆದರು. ಪ್ರಜ್ಞೆಯ ಅನೇಕ ಆಯಾಮಗಳಲ್ಲಿ ನೆಲೆನಿಂತಿರುವ ಅನೇಕ ಲೋಕಗಳಲ್ಲಿ ಸುತ್ತಾಡಿದರು. ಹಲವಾರು ದೇವತೆಗಳನ್ನೂ, ಅವರ ಧಾಮಗಳನ್ನೂ ಕಂಡರು.

ಕಡೆಗೆ ಆ ಸಂತನ ಮನೆಯನ್ನು ಪ್ರವೇಶಿಸಿದರು. ಇಡೀ ಕುಟುಂಬ ಶೋಕದಲ್ಲಿ ಮುಳುಗಿತ್ತು. ಲೀಲಾ ಮತ್ತು ಸರಸ್ವತಿ ಸಾಧಾರಣ ಸ್ತ್ರೀಯರ ವೇಷವನ್ನು ಧರಿಸಿದರು. ಮನೆಯವರ ಹತ್ತಿರ ಮಾತನಾಡಿ, ಅವರನ್ನು ಸಾಂತ್ವನಗೊಳಿಸಿದರು. ಕಡೆಗೆ ತಮ್ಮ ಮೂಲನೆಲೆಗೆ ವಾಪಸ್ಸು ಬಂದರು.

ಆಶ್ಚರ್ಯವೋ ಆಶ್ಚರ್ಯ. ಲೀಲೆಯಾಗಲಿ, ಸರಸ್ವತಿಯಾಗಲಿ ನಿಜವಾಗಿಯೂ ಎಲ್ಲೂ ಹೋಗಿರಲಿಲ್ಲ. ಅವರ ಭೌತಿಕ ದೇಹಗಳು ಅರಮನೆಯಲ್ಲಿಯೇ ಇದ್ದವು. ಅವರ ಸೂಕ್ಷ್ಮದೇಹಗಳು ಮಾತ್ರವೇ ಹಲವಾರು ಲೋಕಗಳನ್ನು ಹಾಯ್ದು, ಬಗೆಬಗೆಯ ಅನುಭವಗಳನ್ನು ಪಡೆದು ಬಂದಿದ್ದವು. ಲೀಲೆಯ ಮನಸ್ಸಿನಲ್ಲಿ ಅನೇಕ ಸಂದೇಹಗಳು ಉದ್ಭವಿಸಿದವು. ''ರಾಜನ ವೇಷದಲ್ಲಿದ್ದ ನನ್ನ ಗಂಡನನ್ನು ನಾನು ಕಂಡರೂ ಅವನು ನನ್ನನ್ನು ಕಾಣಲಿಲ್ಲ; ಅದೇ ಸಂತನ ಮನೆಯಲ್ಲಿದ್ದವರು (ಅವರೂ ಲೀಲೆಯ ಕುಟುಂಬದವರೇ) ನನ್ನನ್ನು ಮಾತನಾಡಿಸಿದರು. ಆದರೆ ಅವರಿಗೆಲ್ಲ ನಾನು ಯಾರು ಎನ್ನುವುದು ಗೊತ್ತಾಗಲೇ ಇಲ್ಲ. ಇದೇನು ವಿಚಿತ್ರ! ಬಹಳ ಗೊಂದಲವಾಗಿದೆಯಲ್ಲ'' ಎಂದುಕೊಂಡಳು; ಅದನ್ನು ಸರಸ್ವತಿಯ ಬಳಿ ನಿವೇದಿಸಿಕೊಂಡಳು.

ಆಗ ಸರಸ್ವತಿ ಹೇಳುತ್ತಾಳೆ: ''ಓ ಮಗಳೇ! ಇದಕ್ಕೆಲ್ಲ 'ನಾನು ಲೀಲಾ' ಎನ್ನುವ ಅಹಂಕಾರಕ್ಕೆ ನೀನು ಇನ್ನೂ ಅಂಟಿಕೊಂಡಿರುವುದೇ ಕಾರಣ. ದ್ವೈತ ಭಾವನೆಯು ಸಂಪೂರ್ಣ ನಾಶವಾಗುವ ತನಕ ನೀನು ಈ ರಹಸ್ಯವನ್ನು ಅರ್ಥಮಾಡಿಕೊಳ್ಳಲಾರೆ.''

ಲೀಲಾ ಮತ್ತೆ ಹೇಳುತ್ತಾಳೆ: ''ಓ ದೇವಿ, ನನ್ನ ಗಂಡನು ಒಬ್ಬ ಋಷಿಯಾಗಿದ್ದನು. ನಾನು ಅವಳ ಪತ್ನಿಯಾಗಿದ್ದೆನು. ಮುಂದಿನ ಜನ್ಮದಲ್ಲಿ ಅವನು ರಾಜನಾಗಿದ್ದನು; ನಾನು ಅವನ ರಾಣಿಯಾಗಿದ್ದೆನು. ಅವನು ಈಗ ಮರಣಹೊಂದಿ, ಮತ್ತೊಬ್ಬ ರಾಜನಾಗಿ ರಾಜ್ಯಭಾರ ಮಾಡುತ್ತಿದ್ದಾನೆ. ನಿಜವಾಗಿಯೂ ಅವನು ಎಲ್ಲಿದ್ದಾನೆ? ಅವನ ಹತ್ತಿರ ದಯವಿಟ್ಟು ಕರೆದುಕೊಂಡು ಹೋಗಲಾರೆಯಾ?''

ಸರಸ್ವತಿ: ''ಲೀಲಾ, ನೀನು ಮತ್ತು ನಿನ್ನ ಗಂಡ ಈಗಾಗಲೇ ಹಲವಾರು ಜನ್ಮಗಳನ್ನೆತ್ತಿದ್ದೀರಿ. ಅವುಗಳಲ್ಲಿ ಮೂರು ಜನ್ಮಗಳ ಪರಿವೆ ಮಾತ್ರ ನಿನಗೆ ಇದೆ. ನಿನ್ನ ಗಂಡನಾಗಿದ್ದ ರಾಜ ಪದ್ಮನು ಪ್ರಾಪಂಚಿಕತೆಯಲ್ಲಿ ಮುಳುಗಿಹೋಗಿದ್ದನು, 'ನಾನು ದೊರೆ, ನಾನು ಸಶಕ್ತ, ನಾನು ಸುಖಿ' ಎಂದೆಲ್ಲ ಭಾವಿಸಿಕೊಂಡಿದ್ದನು. ಅದಕ್ಕಾಗಿಯೇ ಅವನು ಮುಂದಿನ ಜನ್ಮದಲ್ಲಿಯೂ ರಾಜನಾಗಿಯೇ ಹುಟ್ಟಿದ್ದಾನೆ.''

ಈಗಾಗಲೇ ಮುಂದಿನ ಜನ್ಮವನ್ನು ಅನುಭವಿಸುತ್ತಿರುವ ತನ್ನ ಗಂಡನನ್ನು ನೋಡಲು ಲೀಲೆ ಆಶೆಪಟ್ಟಳು. ಇಬ್ಬರೂ ಮತ್ತೆ ಪ್ರಯಾಣ ಬೆಳೆಸಿದರು. ನೂರಾರು ಮೈಲುಗಳನ್ನು ಕ್ರಮಿಸಿದರು.

ಈ ಸಂದರ್ಭದಲ್ಲಿ ರಾಮ ವಸಿಷ್ಠರಿಗೆ ಒಂದು ಪ್ರಶ್ನೆ ಕೇಳಿದ: ''ಪೂಜ್ಯರೆ, ಈ ಇಬ್ಬರು ಸ್ತ್ರೀಯರು ವಿಶ್ವದ ದೂರಾತಿದೂರ ನಕ್ಷತ್ರಪುಂಜಗಳನ್ನು ಕ್ರಮಿಸಿದರು ಎಂದು ಹೇಳುತ್ತೀರಿ. ಅದು ಹೇಗೆ ಸಾಧ್ಯ? ಅವರಿಗೆ ದಾರಿಯಲ್ಲಿ ಅಡೆತಡೆಗಳು ಏನೂ ಬರಲಿಲ್ಲವೆ?''

ಅದಕ್ಕೆ ವಸಿಷ್ಠರು ಹೀಗೆ ಹೇಳಿದರು: ''ಓ ರಾಮ, ಇದೇನು ಹೇಳುತ್ತಿರುವೆ? ಎಲ್ಲಿದೆ ವಿಶ್ವ? ಎಲ್ಲಿದೆ ನಕ್ಷತ್ರಪುಂಜಗಳು? ಆ ಇಬ್ಬರು ಸ್ತ್ರೀಯರು ರಾಣಿಯ ಅಂತಃಪುರದಲ್ಲಿಯೇ ಇದ್ದಾರೆ. ಬೇರೆ ಎಲ್ಲೂ ಹೋಗಿಲ್ಲ. ಹೋಗಿದ್ದರು ಎನ್ನುವುದೆಲ್ಲ ಮನೋವಿಲಾಸ ಮಾತ್ರ. ಯಾರು ಮಹಾತ್ಮನಾಗಿದ್ದಾನೆಯೋ, ಅವನು ರಾಜ ಪದ್ಮನಾಗಿದ್ದು ಇಲ್ಲೇ. ಅವನು ಮುಂದೆ ವಿದೂರಥ ಎಂಬ ಹೆಸರಿನಿಂದ ರಾಜ್ಯಭಾರ ಮಾಡುತ್ತಿರುವನು. ಅದು ನಡೆಯುತ್ತಿರುವುದೂ ಇಲ್ಲೇ. ಓ ರಾಮ, ಈ ಎಲ್ಲ ಘಟನೆಗಳ ಆಧಾರ ಶುದ್ಧ ಆಕಾಶವಲ್ಲದೆ ಬೇರೆ ಏನೂ ಅಲ್ಲ. ಶುದ್ಧ ಆಕಾಶದಲ್ಲಿ ವಿಶ್ವವೂ ಇಲ್ಲ; ದೂರದ ಕಲ್ಪನೆಯೂ ಇಲ್ಲ ಮತ್ತು ಯಾವ ಅಡೆತಡೆಗಳೂ ಇಲ್ಲ. ಹಾಗೆ ಅಂದುಕೊಳ್ಳುವುದು ಭ್ರಮೆಯೇ ಸರಿ.''

ವಸಿಷ್ಠರು ಕಥೆಯನ್ನು ಮುಂದುವರೆಸುತ್ತಿದ್ದಾರೆ: ''ಓ ರಾಮ, ಸರಸ್ವತಿ ಮತ್ತು ಲೀಲೆ ಮತ್ತೆ ತಮ್ಮ ಪ್ರಯಾಣವನ್ನು ಮುಂದುವರೆಸಿದ್ದಾರೆ. ಇಬ್ಬರೂ ಸುಂದರವಾದ ಬೆಟ್ಟವೊಂದರ ಶಿಖರದ ಮೇಲೆ ನಿಂತಿದ್ದಾರೆ. ಅಲ್ಲೊಂದು ಹಳ್ಳಿ. ಲೀಲೆ ತನ್ನ ಹಲವಾರು ಜನ್ಮಗಳಲ್ಲಿ ಒಂದನ್ನು ಇಲ್ಲಿಯೇ ಸವೆಸಿರುವುದನ್ನು ನೆನಪು ಮಾಡಿ ಕೊಂಡಳು. ಮತ್ತೆ ಅವರಿಬ್ಬರೂ ಗಗನಕ್ಕೆ ಏರಿದರು. ದೇವಲೋಕ, ಬ್ರಹ್ಮಲೋಕಗಳನ್ನೂ ದಾಟಿಹೋದರು. ಸೂರ್ಯಚಂದ್ರರೂ ಅವರಿದ್ದ ಸ್ಥಳಕ್ಕಿಂತ ಅದೆಷ್ಟೋ ಕೆಳಕ್ಕೆ ಮಬ್ಬಾಗಿ ಕಾಣಿಸುತ್ತಿದ್ದಾರೆ. ಹೀಗೆ ಹಲವಾರು ಅತೀಂದ್ರಿಯ ದೃಶ್ಯಗಳನ್ನು ಕಂಡರು. ಕಡೆಗೆ ಲೀಲೆ ತನ್ನ ಗಂಡ, ತನ್ನ ಮುಂದಿನ ಜನ್ಮದಲ್ಲಿ ರಾಜ್ಯಭಾರ ಮಾಡುತ್ತಿರುವ ನೆಲೆಯನ್ನು ಪ್ರವೇಶಿಸಿದ್ದಾಳೆ; ಅವಳೊಡನೆ ಸರಸ್ವತಿ ದೇವಿಯೂ ಇದ್ದಾಳೆ.

ಈಗ ಅವನೊಬ್ಬ ಬಹುದೊಡ್ಡ ರಾಜನಾಗಿ ಸರ್ವಮಾನ್ಯನಾಗಿದ್ದಾನೆ. ಅವನ ಹೆಸರು ವಿದೂರಥ. ಅವನ ರಾಜ್ಯದ ಮೇಲೆ ಸಿಂಧೂ ದೇಶದ ರಾಜನು ಆಕ್ರಮಣ ಮಾಡಿದ್ದಾನೆ. ವಿದೂರಥನ ಸೈನ್ಯವು ಘೋರವಾದ ಯುದ್ಧದಲ್ಲಿ ತೊಡಗಿದೆ. ಆಕಾಶದಲ್ಲಿ ನಿಂತುಕೊಂಡೇ ಇಬ್ಬರು ಸ್ತ್ರೀಯರೂ ಈ ಭಯಂಕರ ಯುದ್ಧವನ್ನು ನೋಡುತ್ತಿದ್ದಾರೆ. ಅನಂತರ ಅವರು ರಾಜನ ಅರಮನೆಯನ್ನು ಪ್ರವೇಶಿಸಿದರು. ರಾಜನು ತನ್ನ ಮಂತ್ರಿಗಳ ಜೊತೆಗೆ ಮಂತ್ರಾಲೋಚನೆಯಲ್ಲಿ ತೊಡಗಿದ್ದನು. ಅನಂತರ ನಿದ್ರಿಸಲು ತೆರಳಿದನು. ಇಬ್ಬರು ಸ್ತ್ರೀಯರೂ ಆಕಾಶಮಾರ್ಗದಲ್ಲಿ ನಿಂತುಕೊಂಡೇ ಆ ಘನಘೋರವಾದ ಯುದ್ಧವನ್ನು ವೀಕ್ಷಿಸತೊಡಗಿದರು.

ಕೆಲವು ಸಮಯದ ನಂತರ ಅವರು ರಾಜನು ಮಲಗಿದ್ದ ಕೊಠಡಿಯನ್ನು ಪ್ರವೇಶಿಸಿದರು. ದೇವಿ ಸರಸ್ವತಿಯು ತನ್ನ ದೈವೀಮಾಯೆಯಿಂದ ಸೇವಕರನ್ನೆಲ್ಲ ನಿದ್ರಾವಶರನ್ನಾಗಿ ಮಾಡಿಬಿಟ್ಟಿದ್ದಳು. ಇಬ್ಬರೂ ಎದುರಿಗಿದ್ದ ಆಸನಗಳಲ್ಲಿ ಕುಳಿತರು. ರಾಜನು ಎಚ್ಚೆತ್ತು, ಅವರಿಗೆ ನಮಸ್ಕರಿಸಿ ಪೂಜಿಸಿದನು. ಸರಸ್ವತಿಯ ಅವನ ಕುಲದ ಬಗ್ಗೆ ವಿಚಾರಿಸಿದಳು. ತಲೆಯ ಮೇಲೆ ಕೈಯಿಟ್ಟು, ಹಿಂದಿನ ಜನ್ಮಗಳ ಸ್ಮೃತಿಯನ್ನು ಪಡೆದುಕೊಳ್ಳುವಂತೆ ಅನುಗ್ರಹಿಸಿದಳು. ಒಡನೆಯೇ ರಾಜನಿಗೆ ತನ್ನ ಪೂರ್ವಜನ್ಮಗಳ ನೆನಪು ಬಂತು. ಅವನು ಉದ್ಗರಿಸಿದನು: ''ದೇವಿ, ಹಿಂದಿನ ಜನ್ಮದಲ್ಲಿ ನಾನು ಸತ್ತು ಕೇವಲ ಒಂದು ದಿನವಷ್ಟೇ

ಸಂದಿದೆ. ಆದರೆ, ಈ ಜನ್ಮದಲ್ಲಿ ನನ್ನ ಈ ದೇಹಕ್ಕೆ ಈಗಾಗಲೇ ಎಪ್ಪತ್ತು ವರ್ಷ ಕಳೆದುಹೋಗಿದೆಯಲ್ಲ, ಇದೇನಾಶ್ಚರ್ಯ!''

ಸರಸ್ವತಿ ಉತ್ತರಿಸುತ್ತಾಳೆ: ''ಅಪ್ಪಾ ವಿದೂರಥ, ನೀನು ನೋಡುತ್ತಿರುವುದು, ನೀನು ಅನುಭವಿಸುತ್ತಿರುವುದು – ಈ ಎಲ್ಲವೂ ನಿನ್ನ ಮನಸ್ಸಿನ ಕಲ್ಪನೆಯಲ್ಲದೆ ಬೇರೆ ಅಲ್ಲ. ಹಿಂದಿನ ಜನ್ಮಗಳಲ್ಲಿ 'ನಾನು ಹೀಗೆ', 'ನಾನು ಹಾಗೆ' ಎಂದು ನೀನು ಅಂದುಕೊಳ್ಳುತ್ತಿದ್ದೆ. ಈಗ 'ನಾನು ರಾಜ ವಿದೂರಥ' ಎಂದುಕೊಳ್ಳುತ್ತಿದ್ದೀಯೆ. ಹಾಗೆಯೇ 'ನಾನು ಎಲ್ಲ ದುಃಖಗಳ ಪಾರವನ್ನು ತಲುಪಿದ್ದೇನೆ. ನಾನು ಮಹದಾನಂದವನ್ನು ಅನುಭವಿಸುತ್ತಿದ್ದೇನೆ' ಎಂಬ ನಿಶ್ಚಯವನ್ನು ಮಾಡಿದಾಗ ಅದನ್ನೂ ಕಾಣುವೆ, ಅನುಭವಿಸುವೆ.

''ಮಗೂ ವಿದೂರಥ, ಈ ಜಗತ್ತು ಎನ್ನುವುದು ಒಂದು ಕನಸು ಇದ್ದಂತೆ. ನಮ್ಮ ಸ್ವಂತ ವ್ಯಕ್ತಿತ್ವ ಮತ್ತು ಇತರರು ಇದ್ದಾರೆ ಎಂಬ ಭಾವನೆ – ಇವೆಲ್ಲವೂ ಭ್ರಮೆಯಲ್ಲದೆ ಮತ್ತೇನಲ್ಲ. ನಿಜವಾಗಿ ನೋಡಿದರೆ, ನೀನು ಹುಟ್ಟಿಯೂ ಇಲ್ಲ, ಸತ್ತೂ ಇಲ್ಲ. ಹುಟ್ಟಿದ್ದರೆ ತಾನೆ ಸಾಯುವುದು! ಇವೆಲ್ಲಕ್ಕೂ ಆಧಾರವಾದ ಅನಂತ ಚೈತನ್ಯ ಮಾತ್ರವೇ ಸತ್ಯ. ಈ ಜಗತ್ತು ಮತ್ತು ಇಲ್ಲಿನ ಜೀವಿಗಳೆಲ್ಲರೂ ಒಂದು ಸುದೀರ್ಘ ಕಾಲದ ಸ್ವಪ್ನ ಮಾತ್ರ.''

ಈ ಉಪದೇಶ ಮಾಡಿದ ಸರಸ್ವತಿ ಅವನನ್ನು ಆಶೀರ್ವದಿಸಿ, ''ನಿನಗೆ ಸರ್ವ ವಿಧದಲ್ಲಿಯೂ ಮಂಗಳವುಂಟಾಗಲಿ'' ಎಂದಳು.

ವಿದೂರಥ: ''ದೇವಿ, ಬಹಳ ಬೇಗನೆ ನಾನು ಈ ದೇಹವನ್ನು ತ್ಯಾಗ ಮಾಡುವವನಿದ್ದೇನೆ. ಇದು ಒಂದು ಕನಸಿನ ದೇಹದಿಂದ ಇನ್ನೊಂದು ಕನಸಿನ ದೇಹಕ್ಕೆ ಹೋದ ಹಾಗೆ ಎಂದು ನಿನ್ನ ಕೃಪೆಯಿಂದ ತಿಳಿದುಬಂದಿತು. ನನ್ನೊಡನೆ ನನ್ನ ಮಂತ್ರಿಗಳು ಮತ್ತು ನನ್ನ ಮಗಳು ಕೂಡ ಹೋಗುವಂತೆ ಅನುಗ್ರಹ ಮಾಡು ದೇವಿ!'' ಸರಸ್ವತಿಯು ''ಹಾಗೆಯೇ ಆಗಲಿ'' ಎಂದು ಅನುಗ್ರಹಿಸಿದಳು.

ಸರಸ್ವತಿ: ''ವಿದೂರಥ, ಈ ಯುದ್ಧದಲ್ಲಿ ನಿನಗೆ ಜಯವಾಗುವುದಿಲ್ಲ. ನೀನು ಮರಣವನ್ನಪ್ಪುವೆ. ಆದರೆ ನಿನಗೆ ಸದ್ಗತಿಯುಂಟಾಗುತ್ತದೆ.''

ಇವರಿಬ್ಬರೂ ಮಾತನಾಡುತ್ತಿರುವ ಸಮಯದಲ್ಲಿಯೇ, ರಾಜದೂತನೊಬ್ಬ ಓಡೋಡಿ ಬಂದು, ಶತ್ರುಸೈನ್ಯವು ರಾಜಧಾನಿಯನ್ನು ಹೊಕ್ಕಿದೆಯೆಂದು ಅರುಹಿದನು. ಶತ್ರುಗಳು ಇಡೀ ರಾಜಧಾನಿಯ ಮೇಲೆ ಭಾರೀ ಹಲ್ಲೆ ಎಸಗಿದ್ದರು. ಇಡೀ ನಗರಕ್ಕೆ ಬೆಂಕಿ ಹಚ್ಚಿದ್ದರು. ಅಗ್ನಿಯ ಜ್ವಾಲೆಗಳು ಇಡೀ ನಗರವನ್ನು ಆವರಿಸಿದ್ದವು. ಕಿಟಕಿಗಳ ಮೂಲಕ ಈ ದಾರುಣ ದೃಶ್ಯವನ್ನು ಅವರೆಲ್ಲರೂ ನೋಡಿದರು.

ಇಡೀ ನಗರವನ್ನು ಶತ್ರುಗಳು ಲೂಟಿ ಮಾಡುತ್ತಿದ್ದರು; ವಿಜಯದ ಕೇಕೆ ಹಾಕುತ್ತಿದ್ದರು. ನಗರವಾಸಿಗಳು ಹಾಹಾಕಾರ ಮಾಡುತ್ತಿದ್ದರು. ಅವರ ಆಕ್ರಂದನ ಮುಗಿಲು ಮುಟ್ಟುತ್ತಿತ್ತು. ನೂರಾರು ಅಸ್ತ್ರಗಳು ಬೆಂಕಿಯನ್ನುಗುಳುತ್ತ ನಗರದ ಕಟ್ಟಡಗಳ ಮೇಲೆ ಬೀಳುತ್ತಿದ್ದವು. ಇಡೀ ನಗರವು ಅಗ್ನಿದೇವತೆಗೆ ಆಹುತಿಯಾಗಿತ್ತು. ಶತ್ರುಸೈನಿಕರ ದಬ್ಬಾಳಿಕೆ ಮಿತಿಮೀರಿತ್ತು. ಅವರ ದೌರ್ಜನ್ಯಕ್ಕೆ ಸಿಕ್ಕಿದ ಜನರು ತತ್ತರಿಸುತ್ತಿದ್ದರು. ಸಹಾಯ ಮಾಡಿ ಎನ್ನುವ ಕೂಗು ಎಲ್ಲೆಡೆ ಕೇಳಿಸುತ್ತಿತ್ತು. ರಾಜ್ಯಗಳು, ಚಕ್ರಾಧಿಪತ್ಯಗಳಿಗೆಲ್ಲಕ್ಕೂ ಕಡೆಗೆ ಉಂಟಾಗುವ ಗತಿ ಎಂದರೆ ಇದೇ ಅಲ್ಲವೇ?

ಎರಡನೆಯ ಲೀಲಾ : ಅದೇ ಸಮಯಕ್ಕೆ ರಾಜನ ರಾಣಿ ಅಲ್ಲಿಗೆ ಬಂದಳು. ''ಮಹಾರಾಜ, ನೀನೊಬ್ಬನೇ ನಮ್ಮನ್ನು ಕಾಪಾಡಲು ಸಾಧ್ಯ. ಅಂತಃಪುರದ ಸ್ತ್ರೀಯರನ್ನೆಲ್ಲ ಶತ್ರುಗಳು ಕೊಂಡೊಯ್ಯುತ್ತಿದ್ದಾರೆ'' ಎಂದು ಆತಂಕದ ದನಿಯಲ್ಲಿ ಹೇಳಿದಳು.

ರಾಜನು ತನ್ನ ನಿರ್ಧಾರವನ್ನು ಘೋಷಿಸಿದನು: ''ಓ ದೇವಿ, ನಾನೇ ರಣರಂಗಕ್ಕೆ ಹೋಗುತ್ತೇನೆ. ಶತ್ರುಗಳನ್ನು ಎದುರಿಸುತ್ತೇನೆ.''

ಅಲ್ಲಿ ಇನ್ನೊಂದು ಆಶ್ಚರ್ಯ ಕಾದಿತ್ತು. ಆ ರಾಣಿ ಲೀಲೆಯ ಪ್ರತಿರೂಪದಂತೆಯೇ ಇದ್ದಳು. ಇದನ್ನು ಕಂಡು ಲೀಲೆಗೆ ವಿಸ್ಮಯವಾಯಿತು. ಒಬ್ಬನೇ ವ್ಯಕ್ತಿ ಎರಡು ರೂಪಗಳಲ್ಲಿ ಒಂದೇ ಜಾಗದಲ್ಲಿ ಇರಲು ಸಾಧ್ಯವೇ ಎಂದು ಅವಳು ಸಂದೇಹಪಟ್ಟಳು. ಇದರ ಬಗ್ಗೆ ಸರಸ್ವತಿಯನ್ನು ಕೇಳಿದಾಗ ಅವಳು ಹೀಗೆ ಉತ್ತರವನ್ನು ನೀಡಿದಳು: ''ಓ ಲೀಲಾ, ನಾವು ನೋಡುವುದೆಲ್ಲ ಅನಂತ ಚೈತನ್ಯದ ಅಭಿವ್ಯಕ್ತಿಯಲ್ಲದೆ ಬೇರೆಯಲ್ಲ. ಹಾಗೆ ನೋಡಿದರೆ, ವಿಷಯವಸ್ತುಗಳು ಬೇರೆಯಲ್ಲ ಹಾಗೂ ವಿಷಯಿ ಅಥವಾ ನೋಡುವವನು ಬೇರೆಯಲ್ಲ. ಎಲ್ಲವೂ ಒಂದೇ ಚೈತನ್ಯದ ಬೇರೆ ಬೇರೆ ರೂಪಗಳು ಮಾತ್ರ. ನೀನು ಆ ಚೈತನ್ಯದ ಒಂದು ರೂಪವಾಗಿದ್ದರೆ, ನಿನ್ನ ಪ್ರತಿ ಕೃತಿಯೇ ಆದ ಈಕೆ ಆ ಚೈತನ್ಯದ ಇನ್ನೊಂದು ಪ್ರತಿರೂಪ, ಅಷ್ಟೆ. ಇದಕ್ಕಾಗಿ ಚಿಂತಿಸಬೇಡ.''

ಎರಡನೆಯ ಲೀಲೆ ಸರಸ್ವತಿಗೆ ಹೀಗೆಂದಳು: ''ಓ ದೇವಿ, ನಾನು ನಿನ್ನನ್ನು ಹಗಲಿರುಳೂ ಪೂಜಿಸುತ್ತಿದ್ದೆ. ನೀನು ನನಗೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದೆ, ಕೂಡ. ನನಗೆ ಒಂದು ವರವನ್ನು ದಯಪಾಲಿಸು. ನನ್ನ ಪತಿಯು ಯುದ್ಧರಂಗದಲ್ಲಿ ಮಡಿದರೆ, ಅವನೆಲ್ಲಿಗೆ ಹೋಗುವನೋ ನಾನೂ ಅಲ್ಲಿಗೆ ಹೋಗುವ ಹಾಗೆ ಅನುಗ್ರಹಿಸು.'' ಸರಸ್ವತಿ ಇದಕ್ಕೆ 'ಅಸ್ತು' ಎಂದಳು.

ಹೀಗೆ ಅವರು ಮಾತನಾಡುತ್ತಿರುವಾಗ, ರಾಜ ವಿದೂರಥನು ತನ್ನ ಶೋಭಾಯಮಾನವಾದ ರಥವನ್ನು ಹತ್ತಿ, ರಣರಂಗಕ್ಕೆ ಹೊರಟನು. ಶತ್ರುವಾದ ಸಿಂಧುರಾಜನೂ ತನ್ನ ಸಂಗಡಿಗರೊಡನೆ ತೀವ್ರವಾಗಿ ಸೆಣಸಿದನು. ವಿದೂರಥನೂ ಆ ಸವಾಲಿಗೆ ತಕ್ಕ ಹಾಗೆ ಭಾರೀ ಉತ್ಸಾಹದಿಂದಲೇ ಯುದ್ಧಮಾಡಿದನು. ಪರಸ್ಪರರ ಸೈನ್ಯಗಳಿಂದ ಬಿಟ್ಟ ಶಸ್ತ್ರಾಸ್ತ್ರಗಳು ನಭೋಮಂಡಲವನ್ನು ತುಂಬಿದವು. ಕಡೆಗೆ ಇಬ್ಬರು ರಾಜರೂ ತಮ್ಮ ತಮ್ಮ ರಥಗಳನ್ನು ಕಳೆದುಕೊಂಡು ನೆಲದ ಮೇಲೆ ನಿಂತುಕೊಂಡೇ ಯುದ್ಧಮಾಡಿದರು. ವಿದೂರಥನು ಇನ್ನೊಂದು ರಥವನ್ನು ತರಿಸಿಕೊಂಡು ಹತ್ತಲು ಹೊರಟನು. ಈ ಸಮಯವನ್ನು ಉಪಯೋಗಿಸಿಕೊಂಡು, ಸಿಂಧುರಾಜನು ಅವನನ್ನು ತನ್ನ ಬಾಣಗಳಿಂದ ಕತ್ತರಿಸಿಹಾಕಿದನು. ವಿದೂರಥನ ದೇಹ

ವನ್ನು ಅರಮನೆಗೆ ತರಲಾಯಿತು. ಸರಸ್ವತಿಯ ಶಕ್ತಿಯಿಂದ ಶತ್ರುಗಳು ಅರಮನೆಯನ್ನು ಪ್ರವೇಶಿಸಲು ಶಕ್ತರಾಗಲಿಲ್ಲ. ಸಿಂಧುರಾಜನ ಕಡೆಯವರು ವಿಜಯಘೋಷವನ್ನು ಮಾಡಿದರು. ಹೊಸ ಆಡಳಿತ ಅಧಿಕಾರಕ್ಕೆ ಬಂತು. ಕೂಡಲೇ ಸೇನಾಡಳಿತವನ್ನು ಘೋಷಿಸ ಲಾಯಿತು.

ಸರಸ್ವತಿಯಿಂದ ವರ ಪಡೆದಿದ್ದ ಎರಡನೆಯ ಲೀಲೆಯು ತನ್ನ ಮಗಳೊಡನೆ ದಿವ್ಯಶರೀರವನ್ನು ಹೊಂದಿ ಹತ್ತಾರು ಲೋಕಗಳನ್ನು ಸುತ್ತಿ, ಕಡೆಗೆ ರಾಜ ಪದ್ಮನ ಶರೀರವಿದ್ದ ಕಡೆಗೆ ಬಂದಳು. (ಪದ್ಮನು ಮೊದಲ ಲೀಲೆಯ ಗಂಡ. ಅವನೇ ವಿದೂರಥನಾಗಿ ಹುಟ್ಟಿದ್ದನು) ಅವನ ಶರೀರವನ್ನು ಹೂವುಗಳಿಂದ ಮುಚ್ಚಿ ಇನ್ನೂ ರಕ್ಷಿಸಿಡಲಾಗಿತ್ತು. ಯುದ್ಧರಂಗದಲ್ಲಿ ಸತ್ತ ತನ್ನ ಗಂಡ ಇವನೇ ಎಂದು ಅವಳು ಗುರುತಿಸಿ, ಅವನ ದೇಹಕ್ಕೆ ಚಾಮರದಿಂದ ಗಾಳಿ ಬೀಸಲು ಆರಂಭಿಸಿದಳು.

ಲೀಲೆ ಮತ್ತು ಸರಸ್ವತಿ ತಾವು ಎಲ್ಲಿಂದ ಪ್ರಯಾಣ ಆರಂಭಿಸಿದ್ದರೋ, ಆ ಅರಮನೆಗೆ ತಮ್ಮ ದಿವ್ಯಶರೀರದ ರೂಪದಲ್ಲಿ ಮತ್ತೆ ಪ್ರವೇಶಿಸಿದರು. ಲೀಲೆಯ ಭೌತಿಕ ದೇಹ, ಪದ್ಮನ ದೇಹವನ್ನು ಎಲ್ಲಿ ಇರಿಸಲಾಗಿತ್ತೋ ಅಲ್ಲಿಯೇ ಇತ್ತು. ಅವಳ ಸೂಕ್ಷ್ಮಶರೀರ ಮಾತ್ರ ಸರಸ್ವತಿಯೊಡನೆ ಲೋಕಾತಿಲೋಕಗಳನ್ನು ಸುತ್ತಿ ಬಂದಿತ್ತು. ಎರಡನೆಯ ಲೀಲೆಯು ಪದ್ಮನ ದೇಹಕ್ಕೆ ಗಾಳಿ ಬೀಸುತ್ತಿರುವುದನ್ನು ಮೊದಲನೆಯ ಲೀಲೆಯು ಕಂಡಳು. ಈಗ ಇನ್ನೊಂದು ಅಚ್ಚರಿಯ ಸಂಗತಿ ನಡೆಯಿತು. ವಿದೂರಥನ ಜೀವವು ಪದ್ಮನ ದೇಹವನ್ನು ಪ್ರವೇಶಿಸಲು ಪ್ರಯತ್ನಿಸುತ್ತಿತ್ತು. (ಪದ್ಮನೇ ವಿದೂರಥನಾಗಿ ಹುಟ್ಟಿ ಮತ್ತೆ ಸತ್ತಿದ್ದನೆಂದು ನೆನಪಿಡಬೇಕು). ಒಬ್ಬ ಪ್ರಯಾಣಿಕನು ಹಲವಾರು ದೇಶಗಳನ್ನು ಸುತ್ತಿ ಮತ್ತೆ ತನ್ನ ಸ್ವಗೃಹವನ್ನು ಪ್ರವೇಶಿಸಿದಂತಿತ್ತು ಆ ದೃಶ್ಯ. ಇವರಿಬ್ಬರನ್ನು ಕಂಡ ಎರಡನೆಯ ಲೀಲೆಯು ಸರಸ್ವತಿಯ ಪಾದಗಳಿಗೆ ನಮಸ್ಕರಿಸಿದಳು.

ಸರಸ್ವತಿ: ''ನೀನು ಇಲ್ಲಿಗೆ ಹೇಗೆ ಬಂದೆ, ಹೇಳು.''

ಎರಡನೆಯ ಲೀಲಾ: ''ವಿದೂರಥನ ಅರಮನೆಯಲ್ಲಿ ನನಗೆ ಪ್ರಜ್ಞೆ ತಪ್ಪಿತು. ನನ್ನ ಸೂಕ್ಷ್ಮಶರೀರ ಆಕಾಶದತ್ತ ಪಯಣಿಸಿತು. ಒಂದು ದಿವ್ಯವಾಹನ ನನ್ನನ್ನು ಇಲ್ಲಿಗೆ ಹೊತ್ತುತಂದಿತು. ವಿದೂರಥನು (ನಿಜವಾಗಿಯೂ ಅವನು ಪದ್ಮ) ಇಲ್ಲಿ ಹೂವುಗಳ ರಾಶಿಯ ಮಧ್ಯೆ ಮಲಗಿರುವುದನ್ನು ನಾನು ಕಂಡೆ. ಯುದ್ಧ ಮಾಡಿ ನಿತ್ರಾಣನಾಗಿದ್ದಾನೆಂದು ಏಳಿಸದೆ, ಅವನಿಗೆ ಗಾಳಿ ಬೀಸಲು ಆರಂಭಿಸಿದೆ.''

ಸರಸ್ವತಿಯ ಕೃಪೆಯಿಂದ ವಿದೂರಥನ ಜೀವವು ಪದ್ಮನ ದೇಹವನ್ನು ಪ್ರವೇಶಿಸಿತು. ನಿದ್ರೆಯಿಂದ ಎದ್ದವನಂತೆ ರಾಜ ಎದ್ದು ಕುಳಿತ. ಇಬ್ಬರು ಲೀಲೆಯರೂ ಅವನಿಗೆ ನಮಸ್ಕರಿಸಿದರು. ಮೊದಲನೆಯ ಲೀಲೆಯನ್ನು ಕುರಿತು ರಾಜನು ನೀನು ಯಾರೆಂದು ಪ್ರಶ್ನಿಸಿದನು.

ಮೊದಲನೆಯ ಲೀಲೆ ಹೀಗೆಂದಳು: ''ಪ್ರಭೂ, ನಿಮ್ಮ ಪೂರ್ವಜನ್ಮದ ಪತ್ನಿ ನಾನು. ನಿಮ್ಮ ನಿರಂತರ ಸಂಗಾತಿ ನಾನು. ನಾವಿಬ್ಬರೂ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇದ್ದವರಲ್ಲ. ಈ ಎರಡನೆಯ ಲೀಲೆಯು ನಿಮ್ಮ ಈ ಜನ್ಮದ ಹೆಂಡತಿ. ಅವಳು ನನ್ನ ಪ್ರತಿಫಲನವಿದ್ದಂತೆ, ನನ್ನ ನೆರಳು ಇದ್ದಂತೆ. ನನಗೆ ಅನುಗ್ರಹ ಮಾಡಿದಂತೆ, ಸರಸ್ವತಿ ದೇವಿಯು ಇವಳಿಗೂ ಅನುಗ್ರಹ ಮಾಡಿದ್ದಾಳೆ. ಅವಳೂ ಇಲ್ಲಿ ಇರುವುದು ನಮ್ಮ ಮಹಾಭಾಗ್ಯ.''

ಇದನ್ನು ಕೇಳಿ ರಾಜನು ಎದ್ದು ನಿಂತು ಸರಸ್ವತಿಗೆ ಪ್ರಣಾಮ ಮಾಡಿದನು. ಸರಸ್ವತಿ ಅವನನ್ನು ಅನುಗ್ರಹಿಸಿ ಅದೃಶ್ಯಳಾದಳು. ರಾಜ ಮತ್ತು ಅವನ ರಾಣಿ ಮತ್ತೆ ಒಂದಾದರು. ರಾಜನ ಕಳೇಬರವನ್ನು ಕಾಯುತ್ತಿದ್ದ ರಾಜಸೇವಕರು ಎಚ್ಚೆತ್ತು, ರಾಜನಿಗೆ ಮತ್ತೆ ಜೀವ ಬಂದಿರುವುದನ್ನು ಕಂಡು ಆನಂದಪಟ್ಟರು.

ರಾಜ್ಯದೆಲ್ಲೆಡೆ ಜನರು ಸಂತೋಷಪಟ್ಟರು. ರಾಣಿ ಲೀಲೆಯ ಅದ್ಭುತ ಸಾಹಸವನ್ನು ಕೊಂಡಾಡಿದರು. ಲೀಲೆಯರ ವೃತ್ತಾಂತವನ್ನು ಕೇಳಿ ಅಚ್ಚರಿಪಟ್ಟರು. ಈ ಒಂದು ತಿಂಗಳಿನಲ್ಲಿ ನಡೆದ ವೃತ್ತಾಂತವನ್ನು ರಾಜನು ರಾಣಿಯಿಂದ ಕೇಳಿ ವಿಸ್ಮಯಹೊಂದಿದನು. ಸರಸ್ವತಿಯ ಅನುಗ್ರಹದಿಂದ ಮೂರು ಲೋಕಗಳ ಮೇಲೆ ಆಧಿಪತ್ಯವನ್ನು ಪಡೆದು ದೀರ್ಘಕಾಲ ರಾಜ್ಯಭಾರ ಮಾಡಿದನು.

ರಾಮನಿಗೆ ಈ ಸುದೀರ್ಘವಾದ ಕಥೆಯನ್ನು ಹೇಳಿದ ವಸಿಷ್ಠರು ಇದರ ಮಹತ್ವವನ್ನು ಕುರಿತು ಹೀಗೆಂದರು: ''ರಾಮ, ಲೀಲೆಯ ಕಥೆಯನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ. ಈ ಕಥೆಯನ್ನು ಮನನ ಮಾಡುವುದರಿಂದ ದೃಶ್ಯವಸ್ತುಗಳು ಸತ್ಯವೆಂಬ ಭ್ರಮೆಯು ನಿಧಾನವಾಗಿಯಾದರೂ ಕಳೆದುಹೋಗುತ್ತದೆ. ನಾವು ಕಣ್ಣಿನಿಂದ ನೋಡುವ ಈ ಭೂಮಿ ಮುಂತಾದವು ಅನಂತ ಚೈತನ್ಯದ ಅಭಿವ್ಯಕ್ತಿಗಳಲ್ಲದೆ ಬೇರೆಯಲ್ಲ ಎಂಬ ಬೋಧೆ ಉಂಟಾಗುತ್ತದೆ. ಯಾವುದೂ ನಿಜವಾಗಿ ಯಾವತ್ತೂ ಸೃಷ್ಟಿಯಾಗಿಯೇ ಇಲ್ಲ; ನಾವು ಕಾಣುವುದೆಲ್ಲವೂ ಮಾಯೆಯ ಹಂದರವಲ್ಲದೆ ಇನ್ನೇನೂ ಅಲ್ಲ ಎಂಬ ಅರಿವು ಮೂಡುತ್ತದೆ.''


ರಾಮನು ತಾನು ಧನ್ಯನೆಂದು ಭಾವಿಸಿದನು. ರಾಜನ ಇಡೀ ಜೀವಿತದ ಕಾಲವು ಒಂದು ತಿಂಗಳಷ್ಟು ಅಲ್ಪ ಅವಧಿಯಲ್ಲಿ ಕಳೆದು ಹೋಯಿತೆಂಬ ಕಾಲದ ರಹಸ್ಯವನ್ನು ಕಂಡು ವಿಸ್ಮಯ ಹೊಂದಿದನು. ಅದರ ಬಗ್ಗೆ ವಸಿಷ್ಠರು ಹೀಗೆ ಹೇಳಿದರು: ''ರಾಮ, ಕಾಲವೆಂಬುದು ಕೂಡ ನಮ್ಮ ಮನಸ್ಸಿನ ಸೃಷ್ಟಿ ತಾನೇ. ಹೀಗಾಗಿ ಕಾಲದ ಅನುಭವವೆನ್ನುವುದು ಸಾಪೇಕ್ಷವೇ ಹೊರತು ನಿರಪೇಕ್ಷವಲ್ಲ. ದುಃಖದಲ್ಲಿ ಇರುವವನಿಗೆ ಪ್ರತಿಯೊಂದು ಕ್ಷಣವೂ ಯುಗವೆಂಬಂತೆ ಭಾಸ ವಾಗುವುದು. ಸುಖದಲ್ಲಿ ಮುಳುಗಿರುವವನಿಗೆ ಯುಗವೂ ಕೂಡ ಕ್ಷಣವೆಂಬಂತೆ ಭಾಸವಾಗುವುದು. ಹಾಗೆಯೇ ಸ್ವಪ್ನದ ಕಾಲಾವಧಿ ಜಾಗೃದವಸ್ಥೆಯ ಕಾಲಮಾಪನಕ್ಕಿಂತ ಭಿನ್ನವಾದುದು ಎಂದು ನಿನಗೇ ಗೊತ್ತಿದೆಯಲ್ಲವೆ?''

ರಾಮನಿಗೆ ಈ ಜಗತ್ತು, ಅದರ ಸೃಷ್ಟಿಯ ನಿಜವಾದ ಸ್ವರೂಪವು ತಿಳಿದುಬಂತು. ಜಗತ್ತಿನ ಎಲ್ಲ ಅನುಭವಗಳೂ ಭ್ರಮಾತ್ಮಕವಾದುದೆಂದು ಅರಿವಾಯಿತು. ಇದನ್ನೇ ನಾವು ಕೂಡ ಈ ಕಥೆಯಿಂದ ತಿಳಿದುಕೊಳ್ಳಬೇಕಾದದ್ದು.


ಕಾಳಿದಾಸ ಮತ್ತು ಭೋಜರಾಜ

ಕಥೆ: ಆರ್.ರೇವತಿ ಚಿತ್ರ : ಕೋವಿ


1 ತಾರಾಪುರದ ಅರಸನಾದ ಭೋಜರಾಜ ಮತ್ತು ಕವಿ ಕಾಳಿದಾಸ ಇಬ್ಬರೂ ಸ್ನೇಹಿತರಾಗಿದ್ದರು.



2 ಕಾಳಿದಾಸನ ಹೃದಯ ಅನುಕಂಪದಿಂದ ತುಂಬಿತ್ತು. ಒಂದು ಸಲ ಒಬ್ಬ ಬಡ ಕವಿ ಕಾಳಿದಾಸನನ್ನು ಭೇಟಿಯಾದ.




3 ಆತನ ಶ್ಲೋಕವನ್ನು ಕೇಳಿ ಭೋಜರಾಜ ಸಂತುಷ್ಟನಾದ. ಆದರೆ ಅದರ ಕೊನೆಯ ಭಾಗ ಕಾಳಿದಾಸನದೆಂದು ಅವನಿಗೆ ಗೊತ್ತಾಗಿಹೋಯಿತು.




4
ಅದು ನಿನ್ನ ಶ್ಲೋಕವೆಂದು ನನಗೆ ಹೇಗೆ ತಿಳಿಯಿತು ಗೊತ್ತೆ? ನಿನ್ನ ಕಾವ್ಯಗಳಲ್ಲಿ ಬರುವ ಉಪಮೆಗಳನ್ನು ಓದಿದರೆ ಸಾಕು, ಅದು ನಿನ್ನದೆಂದೇ ಗೊತ್ತಾಗಿಬಿಡುವುದು. ನಿನ್ನ ಯಾವುದೇ ಕಾವ್ಯವನ್ನು ಓದಿದರೂ ಅದು ನನಗೆ ತಿಳಿಯುತ್ತದೆ.
ನಿನ್ನಂಥ ರಾಜನಿದ್ದರೆ ಸಾವಿರಾರು ಮಂದಿ ಕಾಳಿದಾಸರು ಬಂದೇ ಬರುವರು.
5
ಅದು ನನ್ನ ಶ್ಲೋಕವೆಂದು ಗೊತ್ತಿದ್ದರೂ ನೀನು ಆ ಕವಿಯನ್ನು ಸನ್ಮಾನಿಸಿದೆ. ನಿನ್ನನ್ನು ಹೇಗೆ ನಾನು ಅಭಿನಂದಿಸಲಿ?
6
ಕಾಳಿದಾಸ, ನನ್ನದೊಂದು ಆಸೆಯಿದೆ. ನೀನು ಅದನ್ನು ಪೂರೈಸುವೆಯಾ?
ಖಂಡಿತ, ಮಹಾರಾಜ!
ನನ್ನ ನಿಧನದ ಬಳಿಕ ನೀನು ನನ್ನ ಮೇಲೆ ಎಂತಹ ಚರಮ ಗೀತೆಯನ್ನು ರಚಿಸುವೆ ಎಂದು ತಿಳಿಯಲು ನನಗೆ ಕುತೂಹಲ ವುಂಟಾಗಿದೆ. ನೀನು ಈಗಲೇ ಆ ಚರಮಗೀತೆಯನ್ನು ರಚಿಸು. ಅದನ್ನು ಕೇಳಿ ನಾನು ಆನಂದಿಸುತ್ತೇನೆ.
7
ಇದೇನು ಕೇಳುತ್ತಿರುವೆ ಮಹಾರಾಜ!! ಬದುಕಿರುವವರ ಮೇಲೆ ನಾನೆಂದಿಗೂ ಚರಮಗೀತೆ ಬರೆಯಲಾರೆ. ನನ್ನ ನಾಲಿಗೆಯಲ್ಲಿ ಕಾಳೀಮಾತೆ ನೆಲೆಸಿದ್ದಾಳೆ. ನಾನೇನು ರಚಿಸಿ ಹಾಡುತ್ತೇನೋ ಅದು ನಿಜವಾಗಿಬಿಡುವುದು.
8
ನಿನ್ನ ಸುಂದರವಾದ ಉಪಮೆಗಳಿಂದ ಕೂಡಿದ ಕಾವ್ಯವನ್ನು ಕೇಳುತ್ತಾ ನಾನು ಸಾವಿರ ಸಲ ಬೇಕಾದರೂ ಸಾಯಬಲ್ಲೆ. ದಯವಿಟ್ಟು ಹಾಡು.
ನೀನೇನು ಬಯಸಿದೆಯೋ ಅದನ್ನು ನಾನು ನೀಡಲಾರೆ, ಮಹಾರಾಜ!
9
ರಾಜ ಕೋಪಗೊಂಡ.
ಇದು ರಾಜಾಜ್ಞೆ! ನನ್ನ ಆಜ್ಞೆಯನ್ನು ಮೀರಿದ ನಿನ್ನನ್ನು ನಾನು ಗಡೀಪಾರು ಮಾಡುತ್ತೇನೆ.
ಆಗಲಿ. ನಿನ್ನ ಚರಮಗೀತೆಯನ್ನು ಹಾಡುವುದಕ್ಕಿಂತ ಅದೇ ಉತ್ತಮ. ರಾಜನಿಗಾದರೋ ಈ ರಾಜ್ಯ ಮಾತ್ರ ತನ್ನದು. ಕವಿಗಾದರೋ, ಇಡೀ ಜಗತ್ತೇ ತನ್ನದು.


10 ಕಾಳಿದಾಸ ದೇಶ ಬಿಟ್ಟು ಹೊರಟ. ಅವನು ಸಂನ್ಯಾಸಿಯಾದ.




11 ಅರಮನೆಯಲ್ಲಿ ಭೋಜರಾಜನಿಗೆ ಅತ್ಯಂತ ದುಃಖವಾಯಿತು.




12



13 ಕಾಳಿದಾಸ ನನ್ನನ್ನು ಗುರುತಿಸಲಿಲ್ಲ. ನನಗೆ ಇದು ಒಳ್ಳೆಯ ಅವಕಾಶ.




14 ಕಾಳಿದಾಸ ಚರಮಗೀತೆಯನ್ನು ಹಾಡುತ್ತಿದ್ದಾಗ ವೇಷ ಮರೆಸಿಕೊಂಡಿದ್ದ ರಾಜ ಕ್ರಮೇಣ ಪ್ರಜ್ಞೆ ಕಳೆದುಕೊಂಡ. ಬೀಳುತ್ತಿದ್ದ ಅವನನ್ನು ಕಾಳಿದಾಸ ಹಿಡಿದುಕೊಂಡ.



15 ಕಾಳಿದಾಸ ಸರಸ್ವತಿಯನ್ನು ಪ್ರಾರ್ಥಿಸಿದ. ಸರಸ್ವತಿ ಅವನ ಮುಂದೆ ಪ್ರತ್ಯಕ್ಷಳಾದಳು.



16 ಸರಸ್ವತಿಯ ಅನುಗ್ರಹದಂತೆ ಭೋಜರಾಜ ಜೀವಂತನಾದ.



17

ಅವರಿಬ್ಬರೂ ಒಂದು ರಾಮಾಯಣ ಕಾವ್ಯವನ್ನು ರಚಿಸಿದರು. ಪರೀಕ್ಷಿತ ರಾಜನು ತನ್ನ ಕೊನೆಯ ದಿನಗಳಲ್ಲಿ ಏಳು ದಿನ ಭಾಗವತದ ಶ್ರವಣ ಮಾಡಿದ. ಆದರೆ ಭೋಜರಾಜ ತನಗೆ ಒದಗಿದ ಅಲ್ಪಾಯಸ್ಸಿನ ಅವಧಿಯಲ್ಲಿ ಕಾಳಿದಾಸನ ಸಹಾಯದಿಂದ ಎಲ್ಲರಿಗೂ ಹಿತವನ್ನುಂಟುಮಾಡುವ ರಾಮಾಯಣವನ್ನು ರಚಿಸಿದ. ಅದರ ಹೆಸರು '**ಚಂಪೂರಾಮಾಯಣ.**' ಅದು ಕಾಳಿದಾಸನ ಹಾಗೂ ಭೋಜರಾಜನ ಸ್ನೇಹವನ್ನು ಹಾಗೂ ಅವರ ಕಾವ್ಯದ ಹಿರಿಮೆಯನ್ನು ತೋರಿಸಿಕೊಡುತ್ತದೆ. ಅಂತೆಯೇ ಅದು ಅವರಿಗಿದ್ದ ಜನಹಿತವನ್ನು ಉಂಟುಮಾಡುವ ಮನೋಭಾವವನ್ನೂ ಸೂಚಿಸುತ್ತದೆ.

ಸುದ್ದಿ ಸಂಚಯ



ಆಶ್ರಮದ ಹೊಸ ಪ್ರಕಟಣೆಗಳ ಲೋಕಾರ್ಪಣೆ

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆಗಳಾದ **'ಅದ್ಭುತ ಸಂತ'**, **'ಸೇವೆ'** ಮತ್ತು **'ಪರಮಹಂಸ ಕೃಪಾಹಸ್ತ'** ಎಂಬ ಮೂರು ಕೃತಿಗಳ ಲೋಕಾರ್ಪಣೆಯು ದಿನಾಂಕ ಏಪ್ರಿಲ್ ೭ ರಂದು ಆಶ್ರಮದಲ್ಲಿ ನಡೆಯಿತು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ **ಸಿದ್ಧರಾಮಯ್ಯ**ನವರು 'ಅದ್ಭುತ ಸಂತ' ಹಾಗೂ 'ಸೇವೆ' ಕೃತಿಗಳನ್ನು ಹಾಗೂ ಲೋಕೋಪಯೋಗಿ ಸಚಿವ



ರಾದ ಡಾ. ಹೆಚ್.ಸಿ. ಮಹದೇವಪ್ಪನವರು 'ಪರಮಹಂಸ ಕೃಪಾಹಸ್ತ' ಕೃತಿಯನ್ನು ಬಿಡುಗಡೆ ಮಾಡಿದರು. ಕಂದಾಯ ಸಚಿವರೂ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಶ್ರೀನಿವಾಸ ಪ್ರಸಾದ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ, ಸಹ ಕಾರ್ಯದರ್ಶಿಗಳೂ ಆದ **ಸ್ವಾಮಿ ಬೋಧಸಾರಾನಂದಜಿ ಮಹಾರಾಜ್** ಅವರು ದಿವ್ಯ ಸಾನಿಧ್ಯ ವಹಿಸಿದ್ದರು.

ಕೃತಿಗಳನ್ನು ಲೋಕಾರ್ಪಣೆ ಮಾಡಿದ ನಂತರ ಮಾತನಾಡಿದ ಸನ್ಮಾನ್ಯ ಮುಖ್ಯಮಂತ್ರಿಗಳು, ''ಅತ್ಯಂತ ಬಡ ಕುಟುಂಬದಿಂದ ಬಂದ ಅನಕ್ಷರಸ್ಥ ಹುಡುಗನೊಬ್ಬ ಶ್ರೀರಾಮಕೃಷ್ಣರ ಸಹವಾಸದಿಂದ ಹೇಗೆ ಅತ್ಯದ್ಭುತ ಸಂತನಾಗಿ ರೂಪುಗೊಂಡ ಎಂಬುದನ್ನು ಈ ಕೃತಿಯಲ್ಲಿ ನಿರೂಪಿಸಲಾಗಿದೆ'' ಎಂದರು. 'ಸೇವೆ' ಕೃತಿಯನ್ನು ಕುರಿತು ಮಾತನಾಡುತ್ತ, ''ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ, ನಾವು ನಮಗೋಸ್ಕರ ಬದುಕಿದರೆ ಅದು ಸ್ವಾರ್ಥವಾಗುತ್ತದೆ; ಇತರರಿಗೋಸ್ಕರ ಬದುಕಿದರೆ ಅದು ಸಾರ್ಥಕವಾಗುತ್ತದೆ'' ಎಂದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದು ನೆಲೆಸಿದ್ದರ ಸ್ಮರಣಾರ್ಥ ಆಶ್ರಮ **'ವಿವೇಕ ಸ್ಮಾರಕ'** ಕಟ್ಟಡದ ಹಸ್ತಾಂತರ ಮಾಡಲು ಅಗತ್ಯವಾದ ಎಲ್ಲ ಸಹಕಾರಗಳನ್ನು ನೀಡುವುದಾಗಿಯೂ, ಮುಂದೆ ಸ್ಮಾರಕದ ಸ್ಥಳದಲ್ಲಿ **'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ**'ವನ್ನು ಆರಂಭಿಸುವುದಾಗಿಯೂ ಭರವಸೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಪ್ರಸ್ತಾವನೆ ಮಾಡಿ ಮಾತನಾಡಿದರು. ಅನಂತರ 'ಪರಮಹಂಸ ಕೃಪಾಹಸ್ತ' ಕೃತಿಯ ಬಗ್ಗೆ ಲೇಖಕರಾದ ಡಾ. ಗುರುಪಾದ ಮರಿಗುದ್ದಿಯವರು ಹಾಗೂ 'ಅದ್ಭುತ ಸಂತ' ಹಾಗೂ 'ಸೇವೆ' ಕೃತಿಗಳ ಪರಿಚಯವನ್ನು ಖ್ಯಾತ ಸಾಹಿತಿ ಶ್ರೀ ಸಿ.ಪಿ.ಕೆ.ಯವರು ಮಾಡಿಕೊಟ್ಟರು. ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಮಾದೇಗೌಡರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್, ಶ್ರೀ ಧ್ರುವನಾರಾಯಣ್, ಶ್ರೀ ವಿ.ಸೋಮಶೇಖರ್, ಡಿ.ಆರ್. ಪಾಟೀಲ್ ಹಾಗೂ ಶ್ರೀ ವಾಸು ಮೊದಲಾದವರು ಉಪಸ್ಥಿತರಿದ್ದರು. ಕನ್ನಡ ಭಕ್ತಿಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.


Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

Mt. Kailash & Manasa Sarovar Yatra



14 Days Yatra - Depr. Dates

May 14, 23 June 05, 18, 27
July 04 Aug 06, 15, 24



Optional : 4 Days
Mukthinath with Pokhara
Jomsom, Manokamana



Highlights

Doctor / Nurse in the Group	Experience of over a decade	Most percentage of satisfied customers	Vegetarian Food	Homa & Pooja facilities at Manasa Sarovar
	Avail Rs. 30,000/- subsidy from Karnataka Govt. (Karnataka Citizens only)	Briefing Session at Bangalore	Bangalore Staff will accompany	Assistance in availing Travel Insurance

Shri Hansaa Travels

Recognised by Department of Tourism, Govt. of Karnataka

640, 40th Cross, 8th Block, Jayanagar, Bangalore - 70
☎: 080-26543891 / 26643276 / 0-9341215612 / 9341415612
: hansaatravels@gmail.com : hansaatravels.com

VIVEKA PRABHA (KANNADA MONTHLY)
May 2015, Vol.16, No.02, No. of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2015-17. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2013-15

Printed at mayur graphics,Bangalore